
ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ ಆಶೀರ್ವಾದಗಳೊಂದಿಗೆ

# ಅರಿಹಂತ್



ರಚನೆ: ಬ್ರಹ್ಮರ್ಷಿ ತಟವರ್ತಿ ವೀರ ರಾಘವ ರಾವ್

# ಅರಿಹಂತ್



ರಚನೆ: ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ

## ಪ್ರತಿಗಳು ದೊರೆಯುವ ಸ್ಥಳ


**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**pmckannadashop.org**
ಹೆಚ್ಚಿನ ಮಾಹಿತಿಗಾಗಿ **pmckannadatv.org**

**ARIHANTHA**
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

| | | |
|---|---|---|
| ಮೊದಲನೆಯ ಮುದ್ರಣ | : | 2026 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀರಾಮಧಾಮ ಧ್ಯಾನ ಮಂದಿರ<br>ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್<br>ಬೆಂಗಳೂರು 560066<br>ಮೊ: 9449695503 |
| ಪ್ರತಿಗಳು | : | 500 |
| ಬೆಲೆ | : | 50 ರೂ. |
| ಪುಟಗಳು | : | 40 |


**ಆತ್ಮಜ್ಞಾನವನ್ನು ಎಲ್ಲರಿಗೂ ಹಂಚುತ್ತಿದ್ದರೆ ಪ್ರಕೃತಿಯು ಸಹಕರಿಸಿ, ಹಂಚಿದವರಿಗೆ ಆ ಜ್ಞಾನವು ಇನ್ನೂ ಬೆಳೆಯುವಂತೆ ಅವಕಾಶಗಳನ್ನು ಕಲ್ಪಿಸುತ್ತದೆ. "ದಾನವೇ ಧರ್ಮವಾದ್ದರಿಂದ ನಮಗಿರುವ ಆತ್ಮಜ್ಞಾನವನ್ನು ಎಲ್ಲರಿಗೂ ದಾನ ಮಾಡಬೇಕು. ಹಾಗೆ ದಾನ ಮಾಡಿದಾಗ ಶುಲ್ಕವನ್ನು ತೆಗೆದುಕೊಳ್ಳಬಾರದು. ಶುಲ್ಕವನ್ನು ತೆಗೆದುಕೊಂಡು ಮಾಡುವುದು ವ್ಯಾಪಾರ. ಶುಲ್ಕವನ್ನು ತೆಗೆದುಕೊಳ್ಳದೆ ಮಾಡುವುದು ದಾನ. ವ್ಯಾಪಾರಕ್ಕೆ ಪ್ರಕೃತಿಯ ಸಹಕಾರವು ಇರುವುದಿಲ್ಲ. ದಾನ ಮಾಡಿದರೆ ಪ್ರಕೃತಿಯ ಸಹಕಾರವು ಇರುತ್ತದೆ."**

**– ಬ್ರಹ್ಮರ್ಷಿ ತಟವರ್ತಿ ವೀರರಾಘವ್ ರಾವ್**

# "ಅರಿಹಂತ್"

# "ಮೂರು ರೀತಿಯ ಶತೃಗಳು"

'ಅರಿಹಂತ್' ಎನ್ನುವ ಪದಕ್ಕೆ ಪತ್ರೀಜಿಯವರು ಕೊಟ್ಟಿರುವ ವಿವರಣೆಯನ್ನು ಈಗ ತಿಳಿದುಕೊಳ್ಳೋಣ. ಆತನು ಏನು ಹೇಳುತ್ತಾರೆಂದರೆ! "ಅರಿ ಅಂದರೆ ಶತೃ, ಹಂತ್ ಅಂದರೆ ಹತ ಮಾಡಿದವನು". ಅರಿಹಂತ್ ಅಂದರೆ ಶತೃವನ್ನು ಹತ ಮಾಡಿದವನು, ಅಂದರೆ ಅಂತ್ಯಗೊಳಿಸಿದವನು. "ಮಾನವನಿಗೆ ಮೂವರು ಶತೃಗಳಿದ್ದಾರೆ. ಯಾರು ಅಂದರೆ ತಮೋಗುಣ, ರಜೋಗುಣ, ಸಾತ್ವಿಕಗುಣ"

ಈ ತಮೋಗುಣ ಎನ್ನುವುದು ಎಲ್ಲಾ ಸಂದರ್ಭಗಳಲ್ಲೂ ಮಾನವನಿಗೆ ಶತೃವೇ. ಶತೃ ಎಂದರೆ ನಷ್ಟವನ್ನುಂಟು ಮಾಡುವವನು, ತೊಂದರೆಗಳನ್ನು ಕೊಡುವವನು. ಈ ತಮೋಗುಣವೆಂಬುದು ಎಲ್ಲಾ ಸಂದರ್ಭಗಳಲ್ಲೂ ತೊಂದರೆ ಕೊಡುತ್ತಲೇ ಇರುತ್ತದೆ. ಅಂದರೆ ಈ ತಮೋಗುಣ ಇದ್ದರೆ ಯಾವಾಗಲೂ ನಷ್ಟ ಹೊಂದುತ್ತಲೇ ಇರುತ್ತಾನೆ.

ಎರಡನೆಯ ಶತೃವಾದಂತ ರಜೋಗುಣವು ಅನೇಕ ಸಂದರ್ಭಗಲ್ಲಿ ತೊಂದರೆಗಳನ್ನುಂಟು ಮಾಡುತ್ತದೆ, ನಷ್ಟವನ್ನುಂಟು ಮಾಡುತ್ತದೆ.

ಮೂರನೇ ಶತೃವಾದಂತ ಸಾತ್ವಿಕಗುಣವು ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ನಷ್ಟವನ್ನುಂಟು ಮಾಡುತ್ತದೆ, ತೊಂದರೆಗಳನ್ನಿಡುತ್ತದೆ.

## "ತಮೋಗುಣ"

ಈ "ತಮೋಗುಣ" ಎಂಬ ಶತೃವಿನಿಂದ ಆಲಿಸಿತನವಿರುತ್ತದೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ಸೋಮಾರಿತನ ಹೆಚ್ಚಾಗಿರುತ್ತದೆ. ಪ್ರತಿ ಕೆಲಸವನ್ನು ನಾಳೆಗೆ ಮುಂದೂಡುತ್ತಾ ಇರುತ್ತಾರೆ. ಈ ಗುಣವು ಯಾವಾಗಲೂ ಇರಬಾರದು ಎಂದರೆ ಕೆಲಸಗಳನ್ನು ಯಾವಾಗಲು ಮುಂದೂಡಬಾರದು. ಪತ್ರೀಜಿಯವರು ಅದಕ್ಕೆ "ನಾಳೆ ಮಾಡಬೇಕೆಂದಿರುವ ಕೆಲಸಗಳನ್ನು ಈ ದಿನವೇ ಮಾಡಬೇಕು. **ಈ ದಿನ ಮಾಡಬೇಕೆಂದಿರುವ ಕೆಲಸಗಳನ್ನು ಈಗಲೇ ಮಾಡಬೇಕು"** ಎನ್ನುತ್ತಾರೆ.

ಆದ್ದರಿಂದ ನೀವು ಮಾಡಬೇಕೆಂದುಕೊಂಡ ಕೆಲಸಗಳನ್ನು, ಮಾಡಬೇಕಾದ ಕೆಲಸಗಳನ್ನು ಯಾವಾಗಲೂ ವಾಯಿದೆ ಹಾಕಬಾರದು. ಅದರಲ್ಲೂ ಈ ಆಧ್ಯಾತ್ಮಿಕ ಮಾರ್ಗದಲ್ಲಿ ಬಂದ ನೀವು ಬೆಳೆಯಬೇಕು ಅಂದರೆ ಖಚಿತವಾಗಿ ಈ ಶತೃವನ್ನು ಜಯಿಸಬೇಕು. ಈ ಆಲಸಿತನವನ್ನು, ಸೋಮಾರಿತನವನ್ನು ಈ ಮುಂದೂಡುವಿಕೆಯನ್ನು ಅಧಿಗಮಿಸಬೇಕು. ಧ್ಯಾನ ಮಾಡುವುದಕ್ಕೆ ಕೂಡಾ ತುಂಬಾ ಜನರು ನಾಳೆ ಮಾಡೋಣ ಬಿಡು, ನಾಡಿದ್ದು ಪ್ರಾರಂಭಿಸೋಣ ಬಿಡು, ಆ ಕೆಲಸ ಮುಗಿದ ನಂತರ ಮಾಡೋಣ

ಬಿಡು, ಎಂದು ಮುಂದೂಡುತ್ತಾ ಇರುತ್ತಾರೆ. ಎಷ್ಟು ಕೆಲಸಗಳಿದ್ದರೂ ಧ್ಯಾನವನ್ನು ಮಾತ್ರ ಮುಂದೂಡಬಾರದು.

ಕೆಲವರು ಪುಸ್ತಕಗಳನ್ನು ಅನುವಾದ ಮಾಡುತ್ತಿದ್ದೀರಿ, ವೀಡಿಯೋಗಳನ್ನು ಎಡಿಟ್ ಮಾಡುತ್ತಿದ್ದೀರಿ, ಕೆಲವರು ಶಾರ್ಟ್ ವಿಡಿಯೋಗಳನ್ನು ಮಾಡುತ್ತಿದ್ದೀರಿ, ಬರವಣಿಗೆಯನ್ನು ತಿದ್ದುತ್ತಿದ್ದೀರಿ. ಹೀಗೆ ಅನೇಕ ರೀತಿಯ ಕೆಲಸಗಳನ್ನು ಮಾಡುತ್ತಿದ್ದೀರಿ, ಅವುಗಳನ್ನು ಯಾವಾಗಲೂ ಮುಂದೂಡಬಾರದು. ಆ ಮುಂದೂಡುವಿಕೆ ಎಂಬುದು ನಿಮ್ಮ ಬಳಿ ಇಲ್ಲದಿದ್ದರೆ ಬಹಳ ಬೇಗನೆ ಎಷ್ಟೋ ಬೆಳೆಯುತ್ತೀರಿ. ಎಷ್ಟೋ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತೀರಿ, ಕಡಿಮೆ ಸಮಯದಲ್ಲಿ ಹೆಚ್ಚು ಬೆಳೆಯಬಲ್ಲಿರಿ.

ಎಲ್ಲರಿಗೂ ಬೆಳೆಯಬೇಕೆಂದಿದೆ, ಒಳ್ಳೆಯ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದಿರುತ್ತದೆ, ಜ್ಞಾನವು ತಿಳಿಯದವರಿಗೆ ಕೊಡಬೇಕೆಂದಿರುತ್ತದೆ. ಆದರೆ ಈ ತಮೋಗುಣವೆಂಬ ಶತೃವಿನಿಂದ ಬೆಳೆಯುತ್ತಿಲ್ಲ. ಅದಕ್ಕಿಂತಲೂ ಬೇರೆ ಕಾರಣ ಏನೂ ಇಲ್ಲ. ಆದ್ದರಿಂದ ಖಡ್ಡಾಯವಾಗಿ ಪ್ರತಿಯೊಬ್ಬರು ಈ ತಮೋಗುಣವೆಂಬ ಶತೃವನ್ನು ಜಯಿಸಬೇಕಾದದ್ದೇ. ಅದಕ್ಕೆ 'ಶುಭಸ್ಯ ಶೀಘ್ರಂ' ಎಂದಿದ್ದಾರೆ. ಯಾವ ಕೆಲಸವನ್ನಾಗಲಿ ತಕ್ಷಣವೇ ಪ್ರಾರಂಭಿಸಬೇಕು. ಕಾರಣವೇನೆಂದರೆ! "ಆಲಸ್ಯಂ ಅಮೃತಂ ವಿಷಂ" ಎಂದೂ ಕೂಡಾ ಹೇಳಿದ್ದಾರೆ. ಆಲಸ್ಯವಾದಷ್ಟು ಅಮೃತವೂ ಕೂಡಾ ವಿಷವಾಗಿ ಬದಲಾಗಿಬಿಡುತ್ತದೆಯಂತೆ.

ಅದಕ್ಕೆ ಪತ್ರೀಜಿಯವರು ತಮೋಗುಣವನ್ನು ಹೆಚ್ಚಿಸುವ ಬಹು ಕಾಲದ ಆಹಾರಗಳನ್ನು ಸೇವಿಸಬಾರದು ಎನ್ನುತ್ತಾರೆ. ಆಗಿಂದಾಗ್ಗೆ ಬೇಯಿಸಿಕೊಂಡು ಬಿಸಿಬಿಸಿಯಾಗಿ ತಿನ್ನಬೇಕೆನ್ನುತ್ತಾರೆ. ಆದ್ದರಿಂದ ಈ ತಮೋಗುಣವೆಂಬುದನ್ನು ಯಾವಾಗಲೂ, ಎಲ್ಲಾ ಸಮಯದಲ್ಲೂ ಅಧಿಗಮಿಸಬೇಕಾದ ಅಗತ್ಯವು ತುಂಬಾ ಇದೆ. ಪತ್ರೀಜಿಯವರು ಏನೆಂದು ಹೇಳಿದ್ದಾರೆಂದರೆ ಭೀಷ್ಮನು ಶರಶಯ್ಯೆ (ಬಾಣದ ಹಾಸಿಗೆ) ಮೇಲೆ ಇರುವಾಗಲೂ ಕೂಡಾ ಶ್ರೀ ಶ್ರೀಕೃಷ್ಣನು ಭೀಷ್ಮನಿಗೆ ಕೆಲಸ ಹೇಳಿದನಂತೆ. ಧರ್ಮರಾಜನಿಗೆ ಧರ್ಮ ಬೋಧೆ ಮಾಡೆಂದು, ರಾಜನೀತಿ ಸೂತ್ರಗಳನ್ನು ಹೇಳೆಂದು ಹೇಳಿದನಂತೆ. ಇನ್ನು ಹೊರಟು ಹೋಗುವ ಮೊದಲು ನಾನೇನು ಮಾಡಲಿ? ಏನು ಮಾಡಬಲ್ಲೆನು? ಎನ್ನುವ ಪರಿಸ್ಥಿತಿಯಲ್ಲಿ ಕೂಡಾ ಇನ್ನೂ ಭೀಷ್ಮನಿಗೆ ಶ್ರೀ ಕೃಷ್ಣನು ಕೆಲಸವನ್ನು ಕೊಟ್ಟಿದ್ದಾನೆಂದರೆ ಆಲೋಚಿಸಿರಿ? ನಮಗೆ ಸ್ವಲ್ಪ ಸುಸ್ತಾದರೆ, ಅನಾರೋಗ್ಯ, ಸ್ವಲ್ಪ ನಿಶ್ಯಕ್ತಿ ಇದ್ದರೇನೇ ತಕ್ಷಣವೇ ಮಾಡುವ ಕೆಲಸವನ್ನು ನಿಲ್ಲಿಸಿ ಬಿಡುತ್ತೇವೆ, ಕಡಿಮೆಯಾದ ಮೇಲೆ ನೋಡೋಣ ಎಂದು ಮುಂದೂಡುತ್ತೇವೆ.

ಆದ್ದರಿಂದ ಇದನ್ನು ನೆನಪಿಟ್ಟುಕೊಳ್ಳಿ ಯಾರ ಗೊಡವೆ ನಮಗೆ ಬೇಕಿಲ್ಲ,

ನಾವು ಧ್ಯಾನ ಮಾರ್ಗಕ್ಕೆ, ಜ್ಞಾನ ಮಾರ್ಗಕ್ಕೆ ಬಂದಿದ್ದೇವೆ. ಆದ್ದರಿಂದ ಈ ಮಾರ್ಗದಲ್ಲಿ ಕಡ್ಡಾಯವಾಗಿ ನಾವು ಬೆಳೆಯುವುದಕ್ಕೆ ಶ್ರಮಿಸಬೇಕು. ಅದಕ್ಕೆ ಅವರೋಧವಾದ ಈ ಮೊದಲನೆ ಶತೃವಾದ ತಮೋಗುಣವನ್ನು ಅಧಿಗಮಿಸುವ ಪ್ರಯತ್ನವನ್ನು ಮಾಡಬೇಕು, ಸುಮ್ಮನೆ ಅಶ್ರದ್ಧೆ ಮಾಡಬಾರದು.

ಈ ಆಧ್ಯಾತ್ಮಿಕ ಮಾರ್ಗದಲ್ಲಿ ಯಾವ ಕೆಲಸ ಮಾಡುವುದಕ್ಕಾದರೂ ಅಂದರೆ ಧ್ಯಾನವನ್ನು ಮಾಡುವುದಕ್ಕಾಗಬಹುದು, ಪುಸ್ತಕಗಳನ್ನು ಓದುವುದಕ್ಕಾಗಲಿ, ಇಲ್ಲವೆಂದರೆ ಸಂದೇಶಗಳನ್ನು ಕೇಳುವುದಕ್ಕಾಗಬಹುದು ಸೋಮಾರಿತನ ಮಾಡುತ್ತಿದ್ದೀರಿ, ಅಂದರೆ ನಿಮ್ಮಲ್ಲಿ ತಮೋಗುಣವಿದ್ದಂತೆಯೇ. ಯಾವುದಾದರೂ ಸೇವೆಯಲ್ಲಿ ಪಾಲ್ಗೊಳ್ಳಬೇಕೆಂದರೆ ಅವರು ಮಾಡುತ್ತಿದ್ದಾರೆ ನಮಗೇಕೆ? ಎಂದುಕೊಂಡರೆ ಅದೂ ಕೂಡಾ ತಮೋಗುಣ ಲಕ್ಷಣವೇ. ಅವರ್‍ಯಾರು ನಮಗೆ ಹೇಳಲಿಲ್ಲ, ಹೇಳಲಾರದ್ದು ನಮಗೇಕೆ ಎಂದುಕೊಳ್ಳುತ್ತಿರುತ್ತಾರೆ. ನಿಮ್ಮಲ್ಲಿ ತುಂಬಾ ಜನರಿಗೆ ಮಾಡಬಲ್ಲ ಅರ್ಹತೆ, ಸಾಮರ್ಥ್ಯವಿದೆ, ಆ ನೈಪುಣ್ಯತೆ ಇದೆ. ಆದರೆ ನನಗೆ ಯಾರೂ ಹೇಳಲಿಲ್ಲ ಎನ್ನುತ್ತಾರೆ. ಅದರಂತೆ ನಿಮ್ಮಲ್ಲಿ ಬಹಳ ಜನರಿಗೆ ಇರುವ ಒಂದು ಅಭಿಪ್ರಾಯ ಏನೆಂದರೆ ಆ ಕೆಲಸ ನಮಗೆ ತಿಳಿಯದು, ಆ ಜೂಮ್‌ನ್ನು ಹೇಗೆ ತೆಗೆಯಬೇಕು ನನಗೆ ತಿಳಿಯದು ಎಂದು ಬಿಟ್ಟುಬಿಡುತ್ತಾರೆ. Laptopನ್ನು ಕೊಳ್ಳುವ ಸಾಮರ್ಥ್ಯವಿದ್ದರೂ ಕೊಳ್ಳಲಾರರು. ನನಗೆ ತಿಳಿಯದಲ್ಲಾ ಎನ್ನುತ್ತಾರೆ. ಅದೂ ಕೂಡಾ ಒಂದು ರೀತಿಯಲ್ಲಿ ತಮೋಗುಣ ಲಕ್ಷಣವೇ.

ನಿನಗೆ ಕೊಳ್ಳುವ ಸಾಮರ್ಥ್ಯವಿರುವಾಗ ಕೊಂಡು, ಯಾವುದೋ ಒಂದು ರೀತಿಯಲ್ಲಿ ಯಾರ ಸಹಾಯವನ್ನೋ ತೆಗೆದುಕೊಂಡು ಅದನ್ನು ಕಲಿತು ಸಾಧಿಸಬೇಕು. ಅವರಂತೆ ನೀವು ತಯಾರಾಗಬೇಕು. ಆಗ ನೀವು ತಮೋಗುಣವನ್ನು ಆ ಶತೃವನ್ನು ಜಯಿಸಿದವರಾಗುತ್ತೀರಿ. ಇನ್ನು ಕೆಲವರನ್ನು ನೋಡಿದರೆ ಹೇಳಬೇಕಾಗಿಲ್ಲ, ಪ್ರತಿ ವಿಷಯವನ್ನು ಹೇಳದೆ ಹೋದರೂ ಕಲಿತುಕೊಳ್ಳುತ್ತಾರೆ, ವೇಗವಾಗಿ ಮುಂದೆ ಹೋಗಿ ಬಿಡುತ್ತಾರೆ.

ಅಂತಹವರನ್ನು ನೋಡಿ ಕೆಲವರು ಏನೆಂದುಕೊಳ್ಳುತ್ತಾರೆಂದರೆ ಅವರು ಬಹಳ ಬುದ್ಧಿವಂತರು, ಚೆನ್ನಾಗಿ ಓದಿಕೊಂಡಿದ್ದಾರೆ ಎಂದು ಪ್ರಮಾಣ ಪತ್ರವನ್ನು ಕೊಟ್ಟು, ಇವರು ಏನು ಮಾಡದಂತೆ ಕುಳಿತುಕೊಳ್ಳುತ್ತಾರೆ. ಒಂದೇ ಹೇಳುತ್ತಿದ್ದೇನೆ ಯಾರೂ ಹೆಚ್ಚಲ್ಲ, ಎಲ್ಲರೂ ಬುದ್ಧಿವಂತರೇ, ಬೇಕಾಗಿರುವುದೆಲ್ಲಾ ಶ್ರದ್ಧೆ. ನಿಮ್ಮಲ್ಲಿರುವ ಈ ತಮೋಗುಣವೆಂಬ ಶತೃವಿನಿಂದ ಮಾಡಲಾಗದೇ ಇದ್ದೀರಿ.

ನನಗೆ ಅದು ತಿಳಿಯದು ಎಂದು ಕುಳಿತುಕೊಂಡರೆ ಎಂದಿಗೂ ಬೆಳೆಯಲಾರಿರಿ,

ಎಂದಿಗೂ ತಿಳಿಯದು, ತಿಳಿದವರನ್ನು ಕೇಳಬೇಕು. ಯಾವ ತಂತ್ರಜ್ಞಾನವನ್ನಾಗಲಿ ಸರಿ, ತಿಳಿಯದವರಿಗೆ ಹೇಳುವುದಕ್ಕೆ ತಿಳಿದವರು ಸಂತೋಷದಿಂದ ಮುಂದೆ ಬರುತ್ತಾರೆ. ನಾವು ಒಂದು ವಿಷಯವನ್ನು ಇತರರಿಗೆ ಕಲಿಸಿದರೆ ಪ್ರಕೃತಿ ನಮಗೆ 10 ವಿಷಯಗಳನ್ನು ಕಲಿತುಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ. ಈ ರಹಸ್ಯವನ್ನು ಮರೆಯಬೇಡಿರಿ. ಹಂಚಿದರೇನೇ ಹೆಚ್ಚಾಗುತ್ತದೆ. ಕೊಟ್ಟರೇನೇ ಬರುತ್ತದೆ. ಕೊಡುವುದಕ್ಕೆ ಹಿಂದೆ ಸರಿಯಬೇಡ. ಕೇಳದಿದ್ದರೆ ನೀವೇನೂ ಮಾಡಲಾರಿರಿ. ಆದರೆ ಕೇಳಿದಾಗ ಕೊಡುವುದಕ್ಕೆ ಅದು ಅದೃಷ್ಟವೆಂದು ಭಾವಿಸಬೇಕು.

ನಾವು ಈ ಸೃಷ್ಟಿ ರಹಸ್ಯವನ್ನು ತಿಳಿದುಕೊಂಡೆವು. ಸತ್ಯವನ್ನು ಬೋಧಿಸಬೇಕು, ಮಾಡಲಾರದೆ ಹೋಗುತ್ತಿದ್ದೇವೆಂದರೆ! ತಮೋಗುಣವೆಂಬ ಶತೃವಿನಿಂದಲೇ. ಆಲಸಿತನವೆಂದರೆ ಧ್ಯಾನ ಮಾಡುವುದಕ್ಕೆ ಸೋಮಾರಿತನ, ಮುಂದೂಡಬೇಕೆಂದು ಕೊಳ್ಳುವುದು, ಇವೆಲ್ಲವು ಕೂಡಾ ತಮೋಗುಣದ ಲಕ್ಷಣಗಳು.

## ಮೊದಲನೆಯ ಶತೃವು "ತಮೋಗುಣ"

ಈ ಜನ್ಮದಲ್ಲಿ ಎಷ್ಟೋ ಬೆಳೆಯುವ ಅವಕಾಶಗಳು ಇದ್ದರೂ ಕೂಡಾ ಈ ಲಕ್ಷಣಗಳಿಂದ, ಈ ಶತೃವಿನಿಂದ ಬೆಳೆಯಲಾಗುತ್ತಿಲ್ಲ. ಮಾಡಲಾದರೂ ಕೂಡಾ ಮಾಡಲಾರದವರಾಗಿದ್ದೀರಿ. ಹೇಳಬಲ್ಲಿರಾದರೂ ಹೇಳಲಾರದವರಾಗಿದ್ದೀರಿ. ನನ್ನ ಜೀವನ ಇಷ್ಟೇ! ಇನ್ನು ಇದಕ್ಕಿಂತ ಇನ್ನೇನು ಮಾಡಲಾರೆನು, ನನ್ನಿಂದ ಎಲ್ಲಾಗುತ್ತದೆ? ಎಂಬ ಅಭಿಪ್ರಾಯಗಳಿಂದ ಹೊರ ಬನ್ನಿರಿ. ನೀವು ಎಷ್ಟು ಕೃಷಿ ಮಾಡಿ ಆ ಲಕ್ಷಣಗಳನ್ನು ಕಡಿಮೆ ಮಾಡಿಕೊಂಡರೆ ನಿಮಗೆ ಅಷ್ಟು ಜನ್ಮಗಳು ಕಡಿಮೆಯಾಗುತ್ತವೆ. ಈಗ ನಾನು ನಿಮ್ಮೆಲ್ಲರಿಗೂ ಏಕೆ ಹೇಳುತ್ತಿದ್ದೇನೆಂದರೆ, ಪ್ರಾರಂಭದ ಜನ್ಮಗಳಲ್ಲಿರುವವರು ಅಂದರೆ 100, 150, 200 ಜನ್ಮಗಳಲ್ಲಿರುವವರು ಹಾಗೆ ವರ್ತಿಸಿದರೆ ವರ್ತಿಸಬಹುದು. ಆದರೆ ಈ ಲಕ್ಷಣಗಳನ್ನೆಲ್ಲಾ ಸಮೂಲವಾಗಿ ತೊಲಗಿಸಿಕೊಳ್ಳಬೇಕು.

ತಮೋಗುಣವನ್ನು ಒಂದು ಶತೃವಾಗಿ ಭಾವಿಸಿರಿ. ಸೋಮಾರಿತನ, ಆಲಸಿತನ, ನಾಳೆಗೆ ಮುಂದೂಡುವುದು ಎಂಬುದು ನಿಮ್ಮ ಜೀವನದಲ್ಲಿರ ಬಾರದು. ಈ ದಿನವೇ, ಈಗಲೇ ನೀವು ಆಚರಿಸುವ ಪ್ರಯತ್ನವನ್ನು ಮಾಡಿರಿ. ಈ ಜನ್ಮದಲ್ಲಿಯೇ ನೀವು ಅದ್ಭುತಗಳನ್ನು ಮಾಡುತ್ತೀರಿ. ಮುನ್ನುಗ್ಗುತ್ತೀರಿ. ಎಲ್ಲರಿಗೂ ಆದರ್ಶವಂತರಾಗುತ್ತೀರಿ, ಎಷ್ಟೋ ಜನ್ಮಗಳನ್ನು ಕಡಿಮೆ ಮಾಡಿಕೊಳ್ಳುತ್ತೀರಿ, ನಿಮ್ಮಲ್ಲಿ ಎಷ್ಟೋ ರೀತಿಯ ಬದಲಾವಣೆಗಳನ್ನು ಬಹಳ ಬೇಗ ತಂದುಕೊಳ್ಳುತ್ತೀರಿ.

ಮತ್ತೇ ಈ ತಮೋಗುಣವೆಂಬ ಶತೃವು ನಿಮ್ಮಲ್ಲಿಂದ ತೊಲಗಿ ಹೋಗಬೇಕೆಂದರೆ ಈ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ತೀವ್ರಾತಿ ತೀವ್ರವಾಗಿ ಕೆಲವು ದಿನಗಳು

ಮಾಡಬೇಕು. ಜೀವನ ಪರ್ಯಂತ ಬೇಕಿಲ್ಲ. ಕೆಲವು ದಿನಗಳು ನೀವು ಭೀಮವರಂಗೆ ಬಿಡದೇ ಬಂದು ಅಲ್ಲಿ ಎಷ್ಟು ಸಾಧ್ಯವಾದರೆ ಅಷ್ಟು ಧ್ಯಾನ ಮಾಡಿರಿ.
ನಿಮ್ಮ ಮನೆಗೆ ಹೋದ ಮೇಲೂ ಕೂಡಾ ಹಾಗೆಯೇ ಮುಂದುವರೆಸುವ ಪ್ರಯತ್ನವನ್ನು ಮಾಡಿರಿ, ಆಹಾರ ನಿಯಮಗಳನ್ನು ಕಠಿಣವಾಗಿ ಪಾಲಿಸಿರಿ. ಈ ಎರಡೂ ಕೆಲಸಗಳನ್ನು ನೀವು ಮಾಡಿದ್ದೇ ಆದರೆ ಈ ತಮೋಗುಣವೆಂಬ ಶತೃವನ್ನು ಜಯಿಸುವುದು ಕಷ್ಟವೇನಲ್ಲ.

**"ಚಿಂತೆಯನ್ನು ಬಿಟ್ಟು ನಿಶ್ಚಿಂತೆಯಾಗಿ ಜೀವಿಸಬೇಕೆಂದರೆ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು"**

# ಎರಡನೇ ಶತೃವು "ರಜೋಗುಣ"

ಈ ರಜೋಗುಣದಲ್ಲಿ ಶಕ್ತಿಯುತವಾಗಿ ಅನೇಕಾನೇಕ ಕೆಲಸಗಳನ್ನು ಮಾಡುತ್ತಾರೆ. ಇದು ಬಹಳ ಒಳ್ಳೆಯದೇ, ಆದರೆ ಎಲ್ಲಾ ಪರಿಸ್ಥಿತಿಗಳಲ್ಲಿ ಅಲ್ಲ. ರಜೋಗುಣ ಎಂದರೆ ಉದ್ರೇಕವನ್ನುಂಟು ಮಾಡುವುದು. ಹಾಗೆ ಉದ್ರೇಕಕ್ಕೆ ಒಳಗಾಗಿ ಶಕ್ತಿಗೆ ಮೀರಿದ ಕೆಲಸಗಳನ್ನು ಮಾಡುತ್ತಿರುತ್ತಾರೆ. ಪತ್ರೀಜಿಯವರು ಅಂತಹ ಕೆಲಸಗಳಲ್ಲಿ ತಲೆ ಹಾಕಬಾರದು ಎನ್ನುತ್ತಾರೆ.

ರಜೋಗುಣ ಎಂದೊಡನೆ ನಿಮಗೆ ರಾವಣಾಸುರನು ನೆನಪಿಗೆ ಬರಬೇಕು. ಆಗ ರಜೋಗುಣ ಲಕ್ಷಣಗಳು ಹೇಗಿರುತ್ತವೆಂಬುದು ನಿಮಗೆ ಚೆನ್ನಾಗಿ ಅರ್ಥವಾಗುತ್ತದೆ. ಆತನು ಏನು ಮಾಡಿದನು? ಕೈಲಾಸ ಪರ್ವತವನ್ನು ಎತ್ತಬೇಕೆಂದು ನೋಡಿದನು. ಆವೇಶದಿಂದ, ಉದ್ರೇಕದಿಂದ, ಹಿಂದೆ-ಮುಂದೆ ಆಲೋಚಿಸದೆ ಶಕ್ತಿಗೆ ಮೀರಿದ ಕೆಲಸಕ್ಕೆ ಕೈ ಹಾಕಿ ಭಂಗಪಟ್ಟನು. ಒಂದು ರೀತಿಯಲ್ಲಿ ಹೇಳಬೇಕೆಂದರೆ ಗರ್ವಭಂಗವಾಯಿತು. ಹಾಗೆ ನಮ್ಮ ಸೊಸೈಟಿಯಲ್ಲಿ ಕೂಡಾ ತುಂಬಾ ಜನರು ಆವೇಶಪಟ್ಟು ಪಿರಮಿಡ್‌ಗಳನ್ನು ಕಟ್ಟಲು ಮೊದಲಿಡುತ್ತಾರೆ. ಪಿರಮಿಡ್ ಕಟ್ಟುವುದು ಒಳ್ಳೆಯದೇ. ಆದರೆ ಅದನ್ನು ಕಟ್ಟುವುದಕ್ಕೆ ನನಗೆ ಸಾಮರ್ಥ್ಯ ಇದೆಯೇ? ಇಲ್ಲವೇ? ಅದನ್ನು ನೋಡರು, ಆಲೋಚಿಸರು. ಕೆಲವರು 10/10 ಪಿರಮಿಡ್ ಕಟ್ಟುವ ಸ್ಥಾಯಿ ಇದ್ದರೆ 50/50 ಇಲ್ಲವೇ, 100/100 ಪಿರಮಿಡ್ ಕಟ್ಟುವುದಕ್ಕೆ ಪ್ರಯತ್ನಿಸುತ್ತಾರೆ. ಅವರು ಬುನಾದಿ ಹಾಕಿ ನಿಂತು ಬಿಡುತ್ತಾರೆ. ದೇಣಿಗೆ ಕೊಡಿರಿ ಎಂದು ಅವರ ಸುತ್ತಾ, ಇವರ ಸುತ್ತಾ, ತಿರುಗುತ್ತಾ ಬೇಡುತ್ತಾರೆ. ಕೊನೆಗೆ ವಿಫಲರಾಗಿ ಎಷ್ಟೋ ಬಾಧೆ ಪಡುತ್ತಾರೆ. ಆದ್ದರಿಂದ ಪತ್ರೀಜಿಯವರು ಶಕ್ತಿಗೆ ಮೀರಿದ ಕೆಲಸಗಳನ್ನು ಯಾವಾಗಲೂ ಮಾಡಬಾರದು, ನಮ್ಮ ಶಕ್ತಿಗೆ ತಕ್ಕ ಕೆಲಸಗಳನ್ನೇ ಮಾಡಬೇಕು ಎನ್ನುತ್ತಾರೆ.

ಇನ್ನು ಕೆಲವರಿಗೆ, ಅವರಿಗೆ ಇರುವ ಭೂಮಿಯಲ್ಲಿ ಏನೋ ಸ್ವಲ್ಪ ಭೂಮಿಯನ್ನು ಕೊಡುತ್ತಾರೆ. ಅದು ಎಲ್ಲೋ ಊರಿಗೆ ದೂರದಲ್ಲಿರುತ್ತದೆ. ಸ್ಥಳ ಬಂದಿದೆ, ಹತ್ತು ಜನರನ್ನು

ಕೇಳಿದರೆ ಹಣ ಕೊಡುತ್ತಾರೆ ಎಂದು ದೊಡ್ಡದನ್ನೇ ಮೊದಲಿಡುತ್ತಾರೆ. ಆ ಪಿರಮಿಡ್ ಕಟ್ಟಬೇಕೆಂದರೆ ಎಷ್ಟುಬೇಕು? ಎಷ್ಟು ಹಣ ಬೇಕಾಗುತ್ತದೆ? ಎಂದು ಆಲೋಚಿಸರು. ಇವೆಲ್ಲವನ್ನು ಮಾಡುತ್ತಾ ಜ್ಞಾನವನ್ನು ಹೊಂದುವ ಪ್ರಯತ್ನವನ್ನು ಬಿಟ್ಟು ಬಿಡುತ್ತಾರೆ. ಜೀವನವೆಲ್ಲಾ ಅದನ್ನು ಕಟ್ಟುವುದಕ್ಕೆ ಅಂಕಿತವಾಗುತ್ತಾರೆ, ಕೊನೆಗೆ ಉಭಯ ಭ್ರಷ್ಟತ್ವವನ್ನು ಹೊಂದುತ್ತಾರೆ. ಆ ಕಡೆ ಅದೂ ಪೂರ್ತಿ ಮಾಡಲಾರರು, ಇಲ್ಲಿ ಧ್ಯಾನ ಮಾಡಿ ಜ್ಞಾನವನ್ನು ಹೊಂದುವುದಿಲ್ಲ. ಅದಕ್ಕೆ ಪತ್ರೀಜಿಯವರು ಹೇಳುತ್ತಾರೆ ಉದ್ರೇಕಗಳಿಗೆ ಒಳಗಾಗಿ ಶಕ್ತಿಗೆ ಮೀರಿದ ಕೆಲಸಗಳನ್ನು ಎಂದಿಗೂ ಕೈಗೆತ್ತಿಕೊಳ್ಳಬಾರದು ಎಂದು. ಏನಾದರೂ ನೀವು ಒಂದು ಕೆಲಸವನ್ನು ಮಾಡಬೇಕೆಂದುಕೊಂಡಿರುವಾಗ ನಿಮ್ಮ ಶಕ್ತಿಯನ್ನು ಅಂದಾಜು ಮಾಡಿಕೊಳ್ಳಿ. ಅದನ್ನು ನಾನು ಪೂರ್ತಿ ಮಾಡಬಲ್ಲೆನು ಎಂದಾಗಲೇ ಪ್ರಾರಂಭಿಸಿರಿ. ಇನ್ನು ಕೆಲವರು ಇಂತಹ ಕೆಲಸಗಳನ್ನು ಸ್ವಾರ್ಥದಿಂದ ಪ್ರಾರಂಭಿಸುತ್ತಾರೆ. ಆ ನೆಪದಿಂದಹಣ ವಸೂಲಿ ಮಾಡಿ ತಮ್ಮ ಪೋಷಣೆ ಮಾಡಿಕೊಳ್ಳುತ್ತಾರೆ. ಇದು ಅವನ ಭವಿಷ್ಯತ್ತನ್ನು ಎಷ್ಟೋ ನಾಶ ಮಾಡುತ್ತದೆ, ಈ ವಿಷಯ ಅವನಿಗೆ ತಿಳಿಯದು.

ಯಾವುದಕ್ಕಾದರೂ ದೇಣಿಗೆ ವಸೂಲು ಮಾಡಿದೆವೆಂದರೆ ಅದನ್ನು ಅದಕ್ಕಾಗಿ ಖರ್ಚು ಮಾಡಬೇಕೇ ಹೊರತು ನಿಮ್ಮ ಸ್ವಂತ ಖರ್ಚುಗಳಿಗಾಗಿ ಆ ನೆಪವಿಟ್ಟು ವಸೂಲು ಮಾಡವುದೆಂಬುದು ಸೃಷ್ಟಿ ವಿರುದ್ಧವಾದದ್ದು, ಅಂತಹವರು ನಂತರ ಎಷ್ಟೋ ಘೋರವಾದ ನಷ್ಟ ಹೊಂದುತ್ತಾರೆ, ಪತನ ಹೊಂದುತ್ತಾರೆ. ಇಂತಹ ಕೆಲಸಗಳನ್ನು ಮಾಡುವವರು ಸಹ ಬಹಳ ಜನರಿದ್ದಾರೆ. ಇದೆಲ್ಲಾ ರಜೋಗುಣ ಲಕ್ಷಣವು, ಶಕ್ತಿ ಇರುವಷ್ಟು ಮಾಡಬೇಕಾಗಲಿ ಶಕ್ತಿಗೆ ಮೀರಿ ಮಾಡಬಾರದು. ಅವರಿಗೆ ಸಾಮರ್ಥ್ಯವಿದೆ, ಆದರೆ ಶಕ್ತಿ ಇರುವಷ್ಟೇ ಅದನ್ನು ಉಪಯೋಗಿಸಬೇಕು, ಶಕ್ತಿಗೆ ಮೀರಿ ಉಪಯೋಗಿಸಬಾರದು, ಎಷ್ಟೋ ಪಿರಮಿಡ್‌ಗಳು ಹಾಗೇ ನಿಂತು ಹೋಗಿವೆ.
ಅದಕ್ಕೆ ವಿದುರನು **"ಶಕ್ತಿ ಸಾಮರ್ಥ್ಯಗಳನ್ನು ಕುರಿತು ಆಲೋಚಿಸದೆ ಹಗಲುಗನಸು ಕಾಣುವವನು ಮೂರ್ಖನು"** ಎಂದಿದ್ದಾನೆ. ನಮ್ಮ ಸೊಸೈಟಿಯಲ್ಲಿ ಇನ್ನೂ ಎಷ್ಟೋ ಕೆಲಸಗಳನ್ನು ಮಾಡುತ್ತಿದ್ದಾರೆ. ನಾನು ಪತ್ರೀಜಿಯವರ ಹೆಸರಿಂದ ಅದನ್ನು ಮಾಡುತ್ತಿದ್ದೇನೆ, ಇದನ್ನು ಮಾಡುತ್ತಿದ್ದೇನೆ ಎನ್ನುತ್ತಾರೆ. ಅದು ಪೂರ್ಣಗೊಳ್ಳದೆ ಎಷ್ಟೋ ತೊಂದರೆ ಪಡುತ್ತಿರುತ್ತಾರೆ. ಹೀಗೆ ಶಕ್ತಿಗೆ ಮೀರಿದ ಕೆಲಸ ಮಾಡುವುದೆಂಬುದು ರಜೋಗುಣ ಲಕ್ಷಣ, ಆದ್ದರಿಂದ ಈ ರಜೋಗುಣವನ್ನು ಕೂಡಾ ಶತೃ ಎನ್ನುತ್ತಾರೆ. ಆದ ಕಾರಣ ಈ ರಜೋಗುಣವನ್ನು ಸಹ ದಾಟಬೇಕು.

ಪತ್ರೀಜಿಯವರು ಇನ್ನು ಏನು ಹೇಳಿದ್ದಾರೆಂದರೆ, ಸತ್ಯಾಸತ್ಯ ವಿಚಾರಣೆ ಇಲ್ಲದೆ ಮಾತನಾಡಬಾರದು, ಇತರರಿಗೆ ಬೋಧಿಸಬಾರದು. ಇಲ್ಲವಾದರೆ ಅವನು

ರಜೋಗುಣವೆಂಬ ಶತ್ರುವಿಗೆ ದಾಸನಾದಂತೆ ಲೆಕ್ಕ. ಅದನ್ನು ಜಯಿಸದಂತೆಯೇ ಲೆಕ್ಕ. ಖಚಿತವಾಗಿ ಅವನು ಎಷ್ಟೋ ನಷ್ಟ ಹೊಂದುತ್ತಾನೆ. ಅಷ್ಟೇ ಅಲ್ಲ ಪತ್ರೀಜಿಯವರು ಸತ್ಯ, ಅಸತ್ಯ ವಿಚಾರಣೆ ಇಲ್ಲದಂತೆ ಮಾತುಗಳನ್ನು ಮಾತನಾಡಬಾರದು ಎಂದು ಹೇಳಿದ್ದಾರೆ. ಉದಾಹರಣೆಗೆ ಪತ್ರೀಜಿಯವರು 18 ಆದರ್ಶ ಸೂತ್ರಗಳಲ್ಲಿ ವಿಗ್ರಹಾರಾಧನೆ ಬೇಡ, ಸತ್ಯಾರಾಧನೆ ಮಾಡಬೇಕು ಎಂದಿದ್ದಾರೆ ಏಕೆ?. ವಿಗ್ರಹಾರಾಧನೆ ಬೇಡ ಅಂದಿದ್ದಾರೆಂದರೆ ವಿಗ್ರಹವು ಅಸತ್ಯವಾದದ್ದರಿಂದ ಬೇಡ ಎಂದಿದ್ದಾರೆ, ಆತ್ಮ ಸತ್ಯವಾದ್ದರಿಂದ, ಸತ್ಯಾರಾಧನೆ ಎಂದರೆ ಆತ್ಮರಾಧನೆಯನ್ನು ಮಾಡು ಎಂದಿದ್ದಾರೆ. ಮತ್ತೇ ಆತ್ಮನನ್ನು ಆಶ್ರಯಿಸಬೇಕೆಂದರೆ 'ಶ್ವಾಸದ ಮೇಲೆ ಗಮನ' ಧ್ಯಾನ ಒಂದೇ ಮಾರ್ಗ. ಆದ್ದರಿಂದ ಯಾರಾದರೆ 'ಶ್ವಾಸದ ಮೇಲೆ ಗಮನ' ಧ್ಯಾನ ಮಾಡುತ್ತಾರೋ ಅವರು ಸತ್ಯವನ್ನು ಆಶ್ರಯಿಸಿದಂತೆ.

ಆದರೆ ಯಾರಾದರೆ ಸಂಗೀತ ಧ್ಯಾನ, ಗೈಡಿಂಗ್, ಗುಡಾಕೇಶ, ಕರ್ಮವಿಪಾಕ, ಓಂಕಾರ ಧ್ಯಾನ ಹೀಗೆ ಅನೇಕ ರೀತಿಯ ಧ್ಯಾನಗಳನ್ನು ಹೇಳುತ್ತಿದ್ದಾರೋ ಅವರು ಅಸತ್ಯವನ್ನು ಆಶ್ರಯಿಸಿರೆಂದು ಹೇಳುವವರು. ಏಕೆಂದರೆ ಅಂತಹ ಧ್ಯಾನಗಳಿಂದ ಮನಸ್ಸಿನ ಬಳಿಯೇ ನಿಂತು ಬಿಡುತ್ತಾರೆ, ವಿಗ್ರಹವು ಹೇಗೆ ಅಸತ್ಯವೋ ಮನಸ್ಸು ಕೂಡಾ ಅಸತ್ಯವೇ. ಅಂತಹ ಅಸತ್ಯವಾದ ಮಾತುಗಳನ್ನು ನುಡಿಯಬಾರದು. ಅದನ್ನೇ ಪತ್ರೀಜಿಯವರು ಈ ಸಂದೇಶದಲ್ಲಿ ಹೇಳಿದ್ದಾರೆ. ಹೀಗೆ ಏಕೆ ಮಾಡುತ್ತಿದ್ದಾರೆ? ಎಂದರೆ, ವ್ಯತಿರಿಕ್ತ ಹಾಗೂ ಅವೇಶ ಎನ್ನುವಂತಹವು ರಜೋಗುಣ ಲಕ್ಷಣಗಳು.

ಎಲ್ಲರನ್ನು ನಾನು ಆಕರ್ಷಿಸಬೇಕೆಂದೇ ನೋಡುತ್ತಾರೆಯಾಗಲಿ ಅವರಿಗೆ ಆಲೋಚನೆ ಇರದು, ವಿಚಾರಣೆ ಇರದು, ಕೊನೆಗೆ ಅದು ಅವರಿಗೆ ಭರಿಸಲಾಗದ ನಷ್ಟವನ್ನುಂಟು ಮಾಡುತ್ತದೆ ಎಂಬ ವಿಷಯವು ತಿಳಿಯದು. ತಾತ್ಕಾಲಿಕವಾಗಿ ಅಜ್ಞಾನದಲ್ಲಿರುವವರು ಆಕರ್ಷಿತರಾದರೆ ಆಗಬಹುದು. ಆದರೆ ಒಂದು ರೀತಿಯಲ್ಲಿ ಅವರು ನಷ್ಟವನ್ನು ಹೊಂದುತ್ತಾರೆ, ಇವನು ನಷ್ಟ ಹೊಂದುತ್ತಾನೆ. ಪತ್ರೀಜಿಯವರು ಬಹಳಷ್ಟು ಬಾರಿ ಹೇಳಿದ್ದಾರೆ. ನೀನು ಇತರರಿಗೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಮಾಡಿದರೇನೇ, ಇತರರಿಗೆ ಲಾಭವನ್ನು ಉಂಟು ಮಾಡುವ ಮಾತುಗಳನ್ನು ಹೇಳಿದರೇನೇ ನೀನು ಲಾಭವನ್ನು ಹೊಂದುವೆ. ಹಾಗೆಯೇ ಇತರರಿಗೂ ನಷ್ಟವನ್ನುಂಟು ಮಾಡುವ ಕೆಲಸಗಳನ್ನಾಗಲಿ, ಮಾತುಗಳನ್ನಾಗಲಿ ಮಾಡಿಸಿದರೂ, ಹೇಳಿದರೂ ನೀನು ನಷ್ಟವನ್ನು ಹೊಂದುವೆ. ನೀನು, ಏನೋ ದೊಡ್ಡ ಸೇವೆ ಮಾಡಿದೆನು, ದೊಡ್ಡ ಕಾರ್ಯವನ್ನು ಮಾಡಿದೆನು ಎಂದು ಕೊಳ್ಳುವೆ, ಆದರೆ ಅದು ನಿನಗೆ ನಷ್ಟವನ್ನುಂಟು ಮಾಡುತ್ತದೆ. ಎಷ್ಟು ಹೆಚ್ಚು ಜನರಿಗೆ ನೀನು ಹಾಗೆ ನಷ್ಟವನ್ನುಂಟು ಮಾಡಿದರೆ ನೀನು ಅಷ್ಟು ಹೆಚ್ಚು ನಷ್ಟವನ್ನು ಹೊಂದುವೆ. ಮನಸ್ಸು ಅಸತ್ಯ, ಆತ್ಮವೇ ಸತ್ಯವು. ಆತ್ಮದ ಹೊರತು ಅನಾತ್ಮಗಳೆಲ್ಲವೂ

ಅಂದರೆ ಆತ್ಮಗಳಲ್ಲದವು ಅಸತ್ಯಗಳೇ, ವಿಗ್ರಹವನ್ನು ಆಶ್ರಯಿಸುವುದು ಅಲ್ಲ, ಆತ್ಮನನ್ನು ಆಶ್ರಯಿಸಿರಿ. ವಿಗ್ರಹಾರಾಧನೆಯಲ್ಲ, ಆತ್ಮಾರಾಧನೆ ಮಾಡಿರಿ ಎಂದು ಪತ್ರೀಜಿಯವರು ಹೇಳಿದ್ದಾರೆ. ಆತ್ಮ ಸತ್ಯಾರಾಧನೆಯೇ 'ಶ್ವಾಸದ ಮೇಲೆ ಗಮನ' ಧ್ಯಾನವು.

ಹಿಮಾಲಯಗಳಲ್ಲಿ ಯೋಗಿಗಳು ಎಲ್ಲಿಯಾದರೂ ಸಂಗೀತವನ್ನು ಇಟ್ಟು-ಕೊಂಡು ಧ್ಯಾನವನ್ನು ಮಾಡಿದರೆ? ಈ ಧ್ಯಾನ ಈ ದಿನ ಬಂದದ್ದು ಅಲ್ಲವಲ್ಲ? ಯುಗ ಯುಗಳಿಂದ ಸಾವಿರ, ಲಕ್ಷಾನುಗಟ್ಟಲೆ ವರ್ಷಗಳಿಂದ ಇದೆಯಲ್ಲ? ಮತ್ತೆ ಎಷ್ಟೋ ಮಂದಿ ಅರಣ್ಯಗಳಲ್ಲಿ, ಬೆಟ್ಟ, ಗುಡ್ಡಗಳ ಗುಹೆಗಳಲ್ಲಿ ಮಾಡುತ್ತಿದ್ದಾರೆ. ಅಲ್ಲಿ ಮ್ಯೂಜಿಕನ್ನು ಎಲ್ಲಿ ಇಟ್ಟುಕೊಂಡರು? ಬುದ್ಧನ ಕಡೆಯಿಂದಲೇ ಅಲ್ಲವೇ ಪತ್ರೀಜಿಯವರು ಈ 'ಆನಪಾನಸತಿ' ಧ್ಯಾನವನ್ನು ತೆಗೆದುಕೊಂಡದ್ದು!. ಮತ್ತೇ ಸಂಗೀತವಿಟ್ಟು ಪತ್ರೀಜಿಯವರು ಏಕೆ ಮಾಡಿಸುತ್ತಿದ್ದಾರೆ? ಎನ್ನುವ ಆಯಾಮದಿಂದ ಆಲೋಚಿಸಬೇಕು. ಪತ್ರೀಜಿಯವರು ಎಲ್ಲಿಯೂ ಕೂಡಾ, ಯಾವ ಪುಸ್ತಕದಲ್ಲೂ ಕೂಡಾ ಹೇಳಿಲ್ಲ. ಅದನ್ನೇ ನಾನೂ ಕೂಡಾ ಹೇಳುತ್ತಿದ್ದೇನೆ. ಯಾವುದು ಏನಾದರೂ ಸರಿ ಕೊನೆಗೆ ಸತ್ಯವನ್ನು ಹಿಡಿದುಕೊಳ್ಳಬೇಕಾದದ್ದೇ.

ಮುಕ್ತಿ ಹೊಂದಬೇಕೆಂದರೂ, ಮೋಕ್ಷವನ್ನು ಹೊಂದಬೇಕೆಂದರೂ, ಸತ್ಯವನ್ನು ಆಶ್ರಯಿಸಬೇಕಾದದ್ದೇ. ಅದಕ್ಕೂ ಮೊದಲು ಸತ್ಯ, ಅಸತ್ಯದ ವಿಚಾರಣೆಯನ್ನು ಮಾಡಿಕೊಳ್ಳಬೇಕು. ನಿಜವಾಗಿ ಅದೇನನ್ನೂ ಮಾಡದಂತೆ ಅಸತ್ಯವನ್ನು ಹೇಳುತ್ತಿದ್ದಾರೆ. ಅಸತ್ಯವು ಅಪಜಯದ ಪಾಲೆಂದು ಸ್ಪಷ್ಟವಾಗಿ ಹೇಳಿದ್ದಾರೆ ಪತ್ರೀಜಿಯವರು.

ಹಾಗೆಯೇ ಈ ರಜೋಗುಣವು ಎಷ್ಟು ನಷ್ಟವನ್ನುಂಟು ಮಾಡುತ್ತದೆಂದು ಭಗವದ್ಗೀತೆಯಲ್ಲಿ 14ನೇ ಅಧ್ಯಾಯ 12ನೇ ಶ್ಲೋಕದಲ್ಲಿ ಹೇಳಲಾಗಿದೆ.

**ಶ್ಲೋಕ: ಲೋಭಃ ಪ್ರವೃತ್ತಿರಾರಮ್ಭಃ ಕರ್ಮಣಾ ಮಶಮಃ ಸ್ಪೃಹ।**
**ರಜಸ್ಯತಾನಿ ಜಾಯನ್ತೆ ವಿವೃದ್ದೇ ಭರತಶರ್ಭ ॥ (ಭ.ಗೀ.14-12)**

**ತಾತ್ಪರ್ಯ:** ಭರತವಂಶ ಶ್ರೇಷ್ಠನಾದ ಓ, ಅರ್ಜುನಾ! ರಜೋಗುಣ ಅಭಿವೃದ್ಧಿ ಹೊಂದಿದಾಗ ಮಾನವನಲ್ಲಿ ಲೋಭತ್ವ, ನಿಷಿದ್ಧ ಕರ್ಮಗಳನ್ನು ಮಾಡುವುದು, ಮನಶ್ಯಾಂತಿ ಇಲ್ಲದಿರುವುದು, ಆಸೆ ಎನ್ನುವಂತವು ಉಂಟಾಗುತ್ತವೆ.

ಅದಕ್ಕೆ ಪತ್ರೀಜಿಯವರು ಏನು ಹೇಳಿದ್ದಾರೆಂದರೆ ಎಲ್ಲಾ ವಿಧಗಳಲ್ಲಿ ಆಲೋಚಿಸದೆ ಕೆಲಸಗಳನ್ನು ಮಾಡಲು ಮುಗ್ಗರಿಸಿಕೊಂಡು ಹೋಗಬಾರದು ಎಂದಿದ್ದಾರೆ. ಆದ್ದರಿಂದ ಪತ್ರೀಜಿಯವರು ಎರಡನೇ ಶತೃವಾದಂತಹ ರಜೋಗುಣವನ್ನು ಕೂಡಾ ಜಯಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಭೀಮವರಂನಲ್ಲಿ ನಡೆಯುವ ಶಿಬಿರದಲ್ಲಿ ಪಾಲ್ಗೊಂಡು "ಶ್ವಾಸದ ಮೇಲೆ ಗಮನ" ಧ್ಯಾನವನ್ನು ತೀವ್ರವಾಗಿ ಮಾಡುವುದು, ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳುವುದು.

# ಮೂರನೇ ಶತೃ "ಸಾತ್ವಿಕಗುಣ"

ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ಸಾತ್ವಿಕ ಗುಣವೂ ಕೂಡಾ ಶತೃವೇ. ಏಕೆ ಅದು ಶತೃವಾಗುತ್ತದೆ? ಈ ಸಾತ್ವಿಕ ಗುಣವೆಂದರೆ ಅನುಕ್ಷಣ ಶುಭವನ್ನು ಮಾಡುವುದರಲ್ಲಿ ಜೀವಿಸುವುದು ಅಂದರೆ ಒಳ್ಳೆಯದನ್ನು ಮಾಡುತ್ತಾ ಇರುತ್ತಾರೆ.

ಪತ್ರೀಜಿಯವರು ಇನ್ನು ಏನನ್ನು ಹೇಳಿದ್ದಾರೆಂದರೆ, ಸಾತ್ವಿಕಗುಣವೆಂದರೆ ಸದಾ ಸರ್ವದಾ ಕಲ್ಯಾಣ ಕಾರ್ಯಕ್ರಮಗಳಲ್ಲಿ ಅಂದರೆ ಒಳ್ಳೆಯದನ್ನು ಮಾಡುವ ಕಾರ್ಯಕ್ರಮಗಳಲ್ಲಿರುವುದು ಎಂದಿದ್ದಾರೆ.

ಅವರು ಇನ್ನು ಏನು ಹೇಳಿದ್ದಾರೆಂದರೆ (ಸಾತ್ವಿಕಗುಣವೆಂದರೆ) ಹೆಚ್ಚಾಗಿ ಒಳ್ಳೆಯದನ್ನು ಕೂಡಾ ಮಾಡಬಾರದು, ಅಂದರೆ ಹೆಚ್ಚಾಗಿ ಸಹಾಯವನ್ನು ಕೂಡಾ ಮಾಡಬಾರದು ಎಂದಿದ್ದಾರೆ. ಏಕೆಂದರೆ ಯಾರಾಗಲಿ ಸರಿ ಅವರ ಕಾಲ ಮೇಲೆ ಅವರು ನಿಲ್ಲುವಂತೆ ಸಹಾಯ ಮಾಡಬೇಕು ಅಂದರೆ ಪ್ರಯತ್ನಿಸಬೇಕು. ಆದ್ದರಿಂದ ಮತ್ತೊಬ್ಬರ ಕೆಲಸಗಳನ್ನು ಎಂದಿಗೂ ಮಾಡಬಾರದು, ಇನ್ನೊಬ್ಬರ ಕೆಲಸಗಳನ್ನು ಮಾಡುವುದು ಒಳ್ಳೆಯತನವಲ್ಲ, ಅದು ಹುಚ್ಚುತನ ಎಂದಿದ್ದಾರೆ. ನಮ್ಮ ಸ್ವಂತ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು, ಉಳಿದವರ ಕೆಲಸಗಳನ್ನು ಅವರಿಂದಲೇ ಮಾಡಿಸಬೇಕು.

ಅಷ್ಟೇ ಅಲ್ಲ ಬಹಳ ಜನ ಯಾರಾದರೂ ಕಷ್ಟಗಳಲ್ಲಿ ಇದ್ದರೆ ಸಹಾಯ ಮಾಡಬೇಕೆಂದು ನೋಡುತ್ತಾರೆ, ಸ್ವಲ್ಪ ದಾನವನ್ನು ಮಾಡುತ್ತಾರೆ. ಮಾಡುತ್ತಾ ಅವರಿಗೆ ಏನೋ ಸಹಾಯ ಮಾಡಿದೆ ಎಂದುಕೊಳ್ಳುತ್ತಾರೆ, ಇದು ಸಾತ್ವಿಕಗುಣ ಲಕ್ಷಣ. ಆದರೆ ಪತ್ರೀಜಿಯವರು ಏನು ಹೇಳಿದ್ದಾರೆಂದರೆ, ಇಂತಹ ಪುಣ್ಯ ಕರ್ಮಗಳು ಕೂಡಾ ಕೆಲಸಕ್ಕೆ ಬಾರವು ಎನ್ನುತ್ತಾರೆ. ಪಾಪ ಕರ್ಮಗಳನ್ನು ಯಾರಾಗಲಿ ಬೇಡವೆನ್ನುತ್ತಾರೆ, ತಪ್ಪು ಎನ್ನುತ್ತಾರೆ. ಇಲ್ಲಿ ಪತ್ರೀಜಿಯವರು ಪುಣ್ಯ ಕರ್ಮಗಳನ್ನು ಕೂಡಾ ಬೇಡ ಎಂದಿದ್ದಾರೆ, ಅವುಗಳನ್ನು ಕೂಡಾ ಅಧಿಗಮಿಸಬೇಕೆನ್ನುತ್ತಾರೆ. ಪಾಪವೂ ಬೇಡ, ಪುಣ್ಯವೂ ಬೇಡ ಎನ್ನುತ್ತಾರೆ. ತುಂಬಾ ಜನರಿಗೆ ಇದು ಅರ್ಥವಾಗದು. ನೀವು ಕೇಳಬಹುದು, ಇಲ್ಲದವನಿಗೆ ಏನಾದರೂ ನಾವು ಸಹಾಯ ಮಾಡಿದರೆ ತಪ್ಪೇನು ಎಂದು.

ಆಲೋಚಿಸಿರಿ, ನಿಜವಾಗಿಯೂ ಅವನಿಗೆ ಆ ಪರಿಸ್ಥಿತಿ ಏಕೆ ಬಂದಿತು? ಪ್ರಕೃತಿ ಅಂತಹ ಪರಿಸ್ಥಿತಿಯನ್ನು ಅವನಿಗೆ ಏಕೆ ಕಲ್ಪಿಸಿತು? ಎಂಬ ವಿಷಯವನ್ನು ನೀವು ಆಲೋಚಿಸಿದರೆ ನಿಮಗೆ ಅರ್ಥವಾಗುತ್ತದೆ. ಅವನ ಹಿಂದಿನ ಜನ್ಮದಲ್ಲಾಗಲಿ, ಹಿಂದಿನ ಜನ್ಮಗಳಲ್ಲಾಗಲಿ ಬಹಳ ಶ್ರೇಷ್ಠನೇ. ಆದರೆ ಕೆಲವು ಪಾಪಗಳನ್ನು ಮಾಡಿದ್ದರಿಂದ, ಮಾಡಬಾರದ ಕೆಲಸಗಳನ್ನು ಮಾಡಿದ್ದರಿಂದ ಇಂತಹ ಜೀವನವನ್ನು ತಂದುಕೊಂಡನು.

ಮತ್ತೆ ಏಕೆ ಮಾಡಿದ? ಅಂದರೆ ಆಗ ಪಾಠವನ್ನು ಕಲಿಯಲಿಲ್ಲ, ಆ ಪಾಠವನ್ನು ಕಲಿಯುವುದಕ್ಕೇ

ಈ ಜನ್ಮವನ್ನು ತೆಗೆದುಕೊಂಡನು, ಪ್ರಕೃತಿ ಏಕೆ ಅಂತಹ ಜನ್ಮವನ್ನು ಒದಗಿಸಿತು? ಆ ಜನ್ಮವೆಲ್ಲಾ ಹಾಗೆ ಅನುಭವಿಸುವುದರಿಂದ ಅವನು ಆ ಅನುಭವಗಳನ್ನು ಹೊಂದುವುದರ ಮೂಲಕ ಪಾಠವನ್ನು ಕಲಿತುಕೊಳ್ಳುತ್ತಾನೆ. ಆ ಜನ್ಮದಲ್ಲಿ ಆ ಪಾಠವನ್ನು ಕಲಿತ ಮೇಲೆ ಮರುಜನ್ಮದಲ್ಲಿ ಅಂತಹ ವರ್ತನೆ ಅವನಿಗೆ ಇರುವುದಿಲ್ಲ. ಈ ರೀತಿಯಲ್ಲಿ ಅಂತಹ ಪರಿಸ್ಥಿತಿಯನ್ನು ಕಲ್ಪಿಸಿ, ಅವನು ಪಾಠವನ್ನು ಕಲಿಯುವ ಅವಕಾಶವನ್ನು ಕಲ್ಪಿಸಿದೆ ಪ್ರಕೃತಿ. ಮತ್ತೆ ಅವನಿಗೆ ನೀನು ಸಹಾಯ ಮಾಡಿದರೆ ಪಾಠವನ್ನು ಹೇಗೆ ಕಲಿಯುತ್ತಾನೆ? ಯಾವಾಗ ಅವನಲ್ಲಿ ಪರಿವರ್ತನೆ ಬರುತ್ತದೆ? ಆದ್ದರಿಂದ ನಾವು ಯಾರಿಗೂ ಕೆಟ್ಟದ್ದನ್ನು ಮಾಡಬಾರದು, ಒಳ್ಳೆಯದನ್ನು ಮಾಡಬಾರದು. ಪಾಪವನ್ನು ಮಾಡಬಾರದು, ಪುಣ್ಯವನ್ನು ಮಾಡಬಾರದು. ಈ ಪುಣ್ಯವನ್ನು ಮಾಡಬಾರದು ಎಂಬುದಕ್ಕೆ ಇಲ್ಲಿ ಎರಡು ರೀತಿಯ ಕಾರಣಗಳಿರುತ್ತವೆ.

ಒಂದು ನೀನು ಯಾರಿಗಾಗಲಿ ಒಳ್ಳೆಯದನ್ನು ಮಾಡೋಣ ಎಂದು ಕೊಂಡೆ–ಯೋ, ಸಹಾಯವನ್ನು ಮಾಡೋಣ ಎಂದು ಕೊಂಡೆಯೋ ಅವನಿಗೆ ಅರ್ಥವಾಗಬೇಕು, ಅವನು ಗ್ರಹಿಸಬೇಕು. ಎಲ್ಲರು ಚೆನ್ನಾಗಿದ್ದಾರೆ ನನ್ನ ಪರಿಸ್ಥಿತಿ ಏಕೆ ಹೀಗಿದೆ? ಎಂದು ಅವನು ಆಲೋಚಿಸಿದರೆ, ನಾನು ಯಾವಾಗಲೋ, ಯಾವ ಜನ್ಮದಲ್ಲಿಯೋ ಏನೋ ಮಾಡಬಾರದ ಕೆಲಸವನ್ನು ಮಾಡಿದ್ದೇನೆ, ಯಾರನ್ನೋ ನೋಯಿಸಿದ್ದೇನೆ, ಅದಕ್ಕೇ ನನ್ನ ಪರಿಸ್ಥಿತಿ ಹೀಗಿದೆ, ಹೀಗಾಗಿದೆ ಎಂದು ಅವನಲ್ಲಿ ಅಂತರ್ಮಥನ ನಡೆಯಬೇಕು. ನೆನಪಿಟ್ಟುಕೊಳ್ಳಿ, ಎಲ್ಲರೂ ಆತ್ಮಗಳೇ! ಭಿಕ್ಷುಕನಾದರೂ ಆತ್ಮನೇ, ಕೋಟೀಶ್ವರನಾದರೂ ಆತ್ಮನೇ, ಯಾರು ಹೆಚ್ಚಲ್ಲ, ಮತ್ತೆ ಇವನಿಗೆ ಈ ಪರಿಸ್ಥಿತಿ ಏಕೆ ಬಂದಿತು? ಸೃಷ್ಟಿ ವಿರುದ್ಧವಾದ ಕೆಲಸಗಳನ್ನು ಮಾಡಿದ್ದಾನೆ, ಅಧರ್ಮದ ಕೆಲಸಗಳನ್ನು ಮಾಡಿದ್ದಾನೆ. ಏಕೆ ಮಾಡಿದನು? ಅದನ್ನು ಅರ್ಥ ಮಾಡಿಕೊಳ್ಳಲಾಗದೆ ಈಗ ಇಂತಹ ಜನ್ಮವನ್ನು ತೆಗೆದುಕೊಂಡಿದ್ದರಿಂದ ಅದನ್ನು ಅರ್ಥ ಮಾಡಿಕೊಳ್ಳುತ್ತಾನೆ, ತಿಳಿದುಕೊಂಡು ಆ ತಪ್ಪನ್ನು ಮರುಜನ್ಮದಿಂದ ಇನ್ನು ಮಾಡುವುದಿಲ್ಲ. ಮತ್ತೆ ಆ ರೀತಿಯಾದ ಬದಲಾವಣೆ ಬರಬೇಕು ಅಂದರೆ ಪ್ರತಿಯೊಬ್ಬರೂ ಸಹಾಯವನ್ನು ಮಾಡುತ್ತಾ ಕುಳಿತರೆ ಅವನಿಗೆ ನಿಜ ತತ್ವದ/ ಅರಿವು ಎಲ್ಲಿಂದ ಬರುತ್ತದೆ? ನೀವು ಈಗ ಯು–ಟ್ಯೂಬ್‌ನಲ್ಲಿ ನೋಡುತ್ತಿದ್ದೀರಿ. ಕೆಲವರು ಭಿಕ್ಷುಕರ ಬಳಿಯಲ್ಲಿ ಲಕ್ಷಗಟ್ಟಲೆ ಇವೆಯೆಂದು, ಅವರು ಹಾಗೆಯೇ ಬಿಟ್ಟು ಮರಣಿಸಿದವರೂ ಇದ್ದಾರೆಂದು ಕೇಳುತ್ತಿದ್ದೀರಿ. ಮತ್ತೆ ಹಾಗೆ ಯಾರಿಗೆ ಅವರು ಸಹಾಯ ಮಾಡುತ್ತಿದ್ದರೆ ಅವನಿಗೆ ಅರಿವು ಯಾವಾಗ ಬರುತ್ತದೆ? ಕೆಲಸ ಮಾಡುವುದನ್ನು ಬಿಟ್ಟು ಇದೇ ಚೆನ್ನಾಗಿದೆ ಎಂದುಕೊಳ್ಳುತ್ತಾನೆ, ಇದೇ ಕೆಲಸವನ್ನು ಮಾಡುತ್ತಾ, ಮಾಡಲಾದರೂ ಕೂಡಾ ಮಾಡುವುದಿಲ್ಲ.

ಇನ್ನು ಎರಡನೆಯ ಕಾರಣವೇನೆಂದರೆ, ನೀವು ಇತರರಿಗೆ ಹಾಗೆ ಸಹಾಯ ಮಾಡಿದರೆ ಅದು ಒಂದು ಪುಣ್ಯ ಕರ್ಮವಾಗುತ್ತದೆ. ಪುಣ್ಯವೂ ಕೂಡಾ ಮತ್ತೊಂದು

ಜನ್ಮಕ್ಕೆ ದಾರಿ ಮಾಡುತ್ತದೆ. ನೀನು ಪ್ರತಿ ಜನ್ಮದಲ್ಲೂ ಹಾಗೆ ಪುಣ್ಯಗಳನ್ನು ಮಾಡುತ್ತಾ ಕುಳಿತರೆ ಅದನ್ನು ಅನುಭವಿಸುವುದಕ್ಕೆ ಮತ್ತೇ ಜನ್ಮವನ್ನು ತೆಗೆದುಕೊಳ್ಳುತ್ತೀಯ. ಹಾಗೆ ಎಷ್ಟು ಜನ್ಮಗಳಲ್ಲಿ ಪುಣ್ಯವನ್ನು ಮಾಡುತ್ತಾ ಜನ್ಮಗಳನ್ನು ತೆಗೆದುಕೊಳ್ಳುತ್ತಾ ಇರುವೆ? ಮೋಕ್ಷವು ಬೇಕಿಲ್ಲವೇ? ಮತ್ತೆ ನೀನು ಪುಣ್ಯವನ್ನು ಮಾಡುತ್ತಾ ಕುಳಿತರೆ ಜನಾಲೋಕವನ್ನು ಯಾವಾಗ ದಾಟುವೆ?

ಆತ್ಮರಾದ ಯಾರಾಗಲಿ ಸರಿ ಜನಾಲೋಕದ ಮೇಲೆ ಇರುವಂತ ಉನ್ನತವಾದ ಲೋಕಗಳನ್ನು ಸೇರಿಕೊಳ್ಳಬೇಕಾದದ್ದೇ! ಅದಕ್ಕೆ ಪತ್ರೀಜಿಯವರು ಪಾಪವು ಬೇಡ, ಪುಣ್ಯವೂ ಬೇಡ, ಮುಕ್ತಿ ಕರ್ಮಗಳನ್ನು ಮಾಡು, ಆತ್ಮ ಕರ್ಮಗಳನ್ನು ಮಾಡು, ಆತ್ಮಕ್ಕೆ ಲಾಭಿಸುವ ಕರ್ಮಗಳನ್ನು ಮಾಡು, ಆಗಲೇ ನೀನು ಜನಾಲೋಕವನ್ನು ದಾಟಿ ಹೋಗುವೆ, ಕೊನೆಗೆ ಮೋಕ್ಷವನ್ನು ಹೊಂದುವೆ ಎಂದಿದ್ದಾರೆ. ಇದನ್ನು ನಾನು ಒಂದು ಬಾರಿ ಪತ್ರೀಜಿಯವರ ಬಳಿ ಮೊದಲಲ್ಲಿ ಸ್ಪಷ್ಟವಾಗಿ ಗಮನಿಸಿದೆನು. 2003 ಸಮಯದಲ್ಲಿ ಅವರು ಭೀಮವರಂಗೆ ಬಂದಾಗ ಅವರಿಗೆ ಕಾರುಗಳಿರಲಿಲ್ಲ. ಕಾರುಗಳಲ್ಲಿ ತಿರುಗಾಡಿಸುವವರೂ ಕೂಡಾ ಅಷ್ಟಾಗಿ ಇರಲಿಲ್ಲ. ಭೀಮವರಂಗೆ ಬಂದರೆ ಮತ್ತೆ ಅವರನ್ನು ವಿಜಯವಾಡಕ್ಕೆ ಕಳುಹಿಸಲು ರೈಲು ಹತ್ತಿಸಬೇಕಾಗುತ್ತಿತ್ತು. ನಾನು ಆತನನ್ನು ರೈಲು ಹತ್ತಿಸುವುದಕ್ಕೆ ಸ್ಟೇಷನ್‌ಗೆ ಹೋದೆನು. ಆ ರೈಲು ಬರುವ ಮೊದಲು ಸ್ವಲ್ಪ ಹೊತ್ತು ಕಾಯಬೇಕಾಗಿ ಬಂದಿತು. ಇಬ್ಬರೂ ಸ್ಟೇಷನ್ನಿನಲ್ಲಿ ಬೆಂಚಿನ ಮೇಲೆ ಕುಳಿತೆವು. ಯಾರೋ ಭಿಕ್ಷುಕನು ಬಂದು ಕೇಳುತ್ತಿದ್ದಾನೆ. ಆದರೆ ಪತ್ರೀಜಿಯವರು ಏನೂ ಸ್ಪಂದಿಸಲಿಲ್ಲ. ಪತ್ರೀಜಿಯವರು ಏನು ಮಾಡುತ್ತಾರೆ! ಎಂದು ನಾನು ಗಮನಿಸಿದೆನು. ಅವನು ಸ್ವಲ್ಪ ಹೊತ್ತು ನಿಂತು ಹೊರಟು ಹೋದನು.

ಅವನು ಹೊರಟು ಹೋದ ಮೇಲೆ ಪತ್ರೀಜಿಯವರು, ಇವನು ಎಷ್ಟು ಪಾಪಗಳನ್ನು ಮಾಡಿದ್ದಾನೋ ಹೀಗೆ ಅನುಭವಿಸುತ್ತಿದ್ದಾನೆ ಎಂದರು. ಆಗ ಅರ್ಥವಾಯಿತು ಓಹೋ! ಅವನ ಅನುಭವಗಳನ್ನು ಅವನು ಹೊಂದಬೇಕು, ಆದ್ದರಿಂದ ಅವರು ಸ್ಪಂದಿಸಲಿಲ್ಲವೆಂಬುದು ಅರ್ಥವಾಯಿತು. ಅವರು ಯಾವುದಾದರೆ ಹೇಳುತ್ತಿರುತ್ತಾರೋ ಅದು ಆಚರಣೆಯಲ್ಲಿಯೂ ಕೂಡಾ ಕಾಣಿಸುತ್ತಾ ಇರುತ್ತದೆ, ಆಚರಿಸದ್ದನ್ನು ಹೇಳುವುದಿಲ್ಲ. ಆದ್ದರಿಂದ ಪುಣ್ಯವೂ ಕೂಡಾ ಬೇಡವೆನ್ನುತ್ತಾರೆ ಅವರು. ಪತ್ರೀಜಿಯವರು ಹೇಳಿದ ಈ ವಿಷಯವನ್ನೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಭಗವಾನನು ಕೂಡಾ ಹೇಳಿದ್ದಾನೆ. ಪತ್ರೀಜಿಯವರು ಕೃಷ್ಣ ಭಗವಾನನ ಸ್ಥಾಯಿಯಲ್ಲಿರುವಂತ ಒಬ್ಬ ಶ್ರೇಷ್ಠ ಯೋಗೀಶ್ವರನು, ಆತನು ಏನನ್ನು ಹೇಳಿದ್ದಾನೋ ಅದನ್ನೇ ಈತನೂ ಹೇಳಿದ್ದಾನೆ, ಆತನು ಏನನ್ನು ಮಾಡು ಎಂದನೋ ಅದನ್ನೇ ಮಾಡುತ್ತಾ ಇರುತ್ತಾನೆ. ಕೃಷ್ಣ ಭಗವಾನನು ಏನನ್ನು ಹೇಳಿದ್ದಾನೆಂದರೆ,

**ಶ್ಲೋಕ : ಯೋ ನಹೃಷ್ಯತಿ ನ ದ್ವೇಷ್ಟಿ ನ ಶೋಚಿ ತಿ ನ ಕಾಂಕ್ಷತಿ**

**ಶುಭಾಶುಭ ಪರಿತ್ಯಾಗಿ ಭಕ್ತಿಮಾನ್ ಯಸ್ಸಮೇ ಪ್ರಿಯಃ (ಭ.ಗಿ. 12-17)**

**ತಾತ್ಪರ್ಯ:** ಯಾವನು ಸಂತೋಷಿಸನೋ! ದ್ವೇಷಿಸನೋ! ಶೋಕಿಸುವುದಿಲ್ಲವೋ! ಯಾವನು ಕೋರುವುದಿಲ್ಲವೋ! ಯಾವನು ಶುಭಾ ಶುಭಗಳನ್ನು ಬಿಟ್ಟವನೋ! (ಒಳ್ಳೆಯ-ಕೆಟ್ಟ, ಪಾಪ-ಪುಣ್ಯ) ಅಂತಹ ಭಕ್ತನು ನನಗೆ ಇಷ್ಟನು.

ಇಲ್ಲಿ ತಿಳಿದುಕೊಳ್ಳಬೇಕಾದದ್ದು ಭಗವಂತನಿಗೆ ಇಷ್ಟವಾಗುವಂತೆ ಯಾರಾದರೆ ಇರಬಲ್ಲರೋ, ಜೀವಿಸಬಲ್ಲರೋ ಅವರು ಮೋಕ್ಷವನ್ನು ಹೊಂದಿದಂತೆಯೇ. ಪತ್ರೀಜಿಯವರು ಸಾತ್ವಿತ ಗುಣವೂ ಕೂಡಾ ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ಶತೃವಾಗಿ ಪರಿಗಣಿಸಲ್ಪಡುತ್ತದೆ ಎಂದಿದ್ದಾರೆ. ಅದಕ್ಕೆ ಶ್ರೀಕೃಷ್ಣನು ಶುಭಾಶುಭ ಪರಿತ್ಯಾಗಿ ಎಂದಿದ್ದಾನೆ. ಆದರೆ ಅಶುಭ ಪರಿತ್ಯಾಗ ಬೇಗನೆ ಅರ್ಥವಾಗುತ್ತಾ ಇರುತ್ತದೆ. ಆದರೆ ಶುಭ ಪರಿತ್ಯಾಗವೆಂಬುದು ಅಂದರೆ ಶುಭವನ್ನು ಕೂಡಾ ಕೆಲವು ಸಂದರ್ಭಗಳಲ್ಲಿ ಸಂಪೂರ್ಣವಾಗಿ ಬಿಡಬೇಕು. ಆದ್ದರಿಂದ ನೆನಪಿಟ್ಟುಕೊಳ್ಳಿ, ಸಾತ್ವಿಕ ಗುಣವು ಕೂಡಾ ತಪ್ಪೇ. ಅಂದರೆ ಪುಣ್ಯವೂ ಕೂಡಾ ನಿಮಗೆ ನಷ್ಟವನ್ನುಂಟು ಮಾಡುತ್ತದೆ, ನಿಮ್ಮ ಜನ್ಮಗಳನ್ನು ಹೆಚ್ಚಿಸುತ್ತದೆ. ಆದ್ದರಿಂದ ನೀನು 'ಅರಿಹಂತ್' ಆಗಬೇಕು. ಶತೃಗಳನ್ನು ಜಯಿಸಬೇಕು. ತಮೋಗುಣವನ್ನು, ರಜೋಗುಣವನ್ನು, ಕೊನೆಗೆ ಸಾತ್ವಿಕ ಗುಣವನ್ನೂ ಕೂಡಾ ಹತ ಮಾಡಬೇಕು.

ಇದು ಭಗವದ್ಗೀತೆಯಲ್ಲಿ

**ಶ್ಲೋಕ : ತ್ರೈಗುಣ್ಯಾ ವಿಷಯಾವೇದ ನಿಸ್ತ್ರೈಗುನ್ಯೋ ಭವಾರ್ಜುನ**

**ನಿರ್ದ್ವನ್ದ್ವೋ ನಿತ್ಯ ಸತ್ವಸ್ಥೋ ನಿರ್ಯೋಗ ಕ್ಷೇಮ ಆತ್ಮವಾನ್ (ಭ.ಗೀ 2-45)**

**ತಾತ್ಪರ್ಯ:** ಓ, ಅರ್ಜುನಾ! ವೇದಗಳು ತ್ರಿಗುಣಾತ್ಮಕಗಳಾದ ಸಂಸಾರ, ವಿಷಯಗಳನ್ನು ತಿಳಿಸುತ್ತಿವೆ. ನೀನು ತ್ರಿಗುಣಗಳನ್ನು ಬಿಟ್ಟವನಾಗಿ, ದ್ವಂದ್ವಗಳನ್ನು ಇಲ್ಲದವನಾಗಿ, ನಿರಂತರವು ಶುದ್ಧಸತ್ವವನ್ನು ಆಶ್ರಯಿಸಿದವನಾಗಿ, ಯೋಗ ಕ್ಷೇಮಗಳ ದೃಷ್ಟಿ ಇಲ್ಲದವನಾಗು, ಆತ್ಮಜ್ಞಾನಿಯಾಗು.

ಇಲ್ಲಿಯೂ ಕೂಡಾ ಆತ್ಮಜ್ಞಾನಿಯಾಗು ಎಂದು ಕೃಷ್ಣನು ಹೇಳಿದ್ದಾನೆ. ಆತ್ಮ ಜ್ಞಾನವು ಎಷ್ಟು ಶ್ರೇಷ್ಠವಾದದ್ದೋ? ಎಷ್ಟು ಅಗತ್ಯವೋ? ಹೇಳಿದ್ದಾರೆ. ಆತ್ಮ ಜ್ಞಾನಿಯಾಗದ ಹೊರತು ಮುಕ್ತಿಯನ್ನು ಹೊಂದಲಾರರಿ, ದುಃಖದಿಂದ ಹೊರ ಬರಲಾರಿರಿ. ಹಾಗೆಯೇ

**ಶ್ಲೋಕ : ಗುಣನೇತಾ ನಾತೀತ್ಯ ತ್ರಿ ನ್ದೇಹಿ ದೇಹಸಮುದ್ಭವಾನ್**

**ಜನ್ಮಮೃತ್ಯು ಜರಾದುಃಖ ಖೈ ರ್ವಿಮುಕ್ತೋ ಮೃತ ಮಶ್ನುತೇ (ಭ.ಗಿ. 14-20)**

**ತಾತ್ಪರ್ಯ:** ಜೀವನು ದೇಹೋತ್ಪತ್ತಿಗೆ ಕಾರಣ ಭೂತವಾದ ಈ ಮೂರು ಗುಣಗಳನ್ನು ದಾಟಿದರೆ ಹುಟ್ಟು, ಸಾವು, ಮುದಿತನ, ದುಃಖಗಳು ಎಂಬವುಗಳಿಂದ ಪೂರ್ಣವಾಗಿ ಬಿಡುಗಡೆಗೊಂಡವನಾಗಿ, ಮೋಕ್ಷವನ್ನು ಹೊಂದುತ್ತಿದ್ದಾನೆ.

ಅದಕ್ಕೆ ಈ ಮೂರು ಗುಣಗಳನ್ನು ಅಧಿಗಮಿಸಬೇಕೆಂದು ಎಷ್ಟೋ ಸ್ಪಷ್ಟವಾಗಿ ಹೇಳಿದ್ದಾನೆ. ಮೂರು ಗುಣಗಳು ಅಂದರೆ ತಮೋಗುಣ, ರಜೋಗುಣ, ಸಾತ್ವಿಕ ಗುಣ ಅಂದರೆ ಸಾತ್ವಿಕ ಗುಣವನ್ನೂ ಕೂಡಾ ದಾಟಬೇಕೆಂದು ಹೇಳಲಾಗಿದೆ. ಒಳ್ಳೆಯ ಕೆಲಸಗಳನ್ನು ಮಾಡುವುದು, ಪುಣ್ಯ ಕಾರ್ಯಗಳನ್ನು ಮಾಡುವುದು ಕೂಡ ಬೇಡ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಯಾವ ಗುಣಗಳಿದ್ದರೂ ಪುನಃ ದೇಹವು ಬರುತ್ತದೆ. ತಮೋಗುಣ, ರಜೋಗುಣ ವನ್ನು ಬಿಟ್ಟರೂ ಸಾತ್ವಿಕ ಗುಣವು ಇನ್ನೂ ಬಿಡದಿದ್ದರೆ ದೇಹವು ಬರುತ್ತಲೇ ಇರುತ್ತದೆ. ಆದ್ದರಿಂದ ಅದನ್ನು ಕೂಡಾ ಬಿಟ್ಟು ಬಿಡು ಎನ್ನುತ್ತಿದ್ದಾನೆ. ಆದ್ದರಿಂದ ಯಾರಾದರೆ ಈ ವಿಧವಾಗಿ ಮೂರು ಶತೃಗಳನ್ನು ಸಂಪೂರ್ಣವಾಗಿ ಜಯಿಸುತ್ತಾರೋ ಅವರೇ 'ಅರಿಹಂತ್' ಎಂದು ಪತ್ರೀಜಿಯವರು ಹೇಳಿದ್ದಾರೆ.

## ಆಶ್ಚರ್ಯಕರವಾದ ವಿಷಯ

ನಮ್ಮಲ್ಲಿಯ ಕೆಟ್ಟವುಗಳನ್ನು ಪೂರ್ತಿಯಾಗಿ ತೊಲಗಿಸಿಕೊಳ್ಳದಿದ್ದರೆ ಜೀವನ ಲಕ್ಷ್ಯವಾದ ಮೋಕ್ಷವನ್ನು ಹೊಂದಲಾರೆವು, ದುಃಖದಿಂದ ಶಾಶ್ವತವಾಗಿ ಹೊರ ಬೀಳಲಾರೆವು. ಆದ್ದರಿಂದ ಕೇಡನ್ನು ತೊಲಗಿಸಿಕೊಳ್ಳಬೇಕೆಂಬುದು ಬಹಳ ಬಹಳ ಮುಖ್ಯವಾದದ್ದು.
ಮಾನವನು ಏನು ಮಾಡುತ್ತಿದ್ದಾನೆಂದರೆ ತನಗೆ ಕೊಡಲ್ಪಟ್ಟಿರುವ ಎಲ್ಲವನ್ನು ಪೂರ್ಣವಾಗಿ ಸದ್ವಿನಿಯೋಗ ಮಾಡುತ್ತಿಲ್ಲ. ದುರ್ವಿನಿಯೋಗವನ್ನು ಮಾಡುತ್ತಿದ್ದಾನೆ. ಹಾಗೆಯೇ ನಿರ್ವಿನಿಯೋಗ ಕೂಡಾ ಮಾಡುತ್ತಿದ್ದಾನೆ.

**ಸತ್ಯಸಾಯಿ ಬಾಬಾರವರು ಏನು ಹೇಳಿದ್ದಾರೆಂದರೆ!**

"God has given you time, skill, chance, fortune and idea" ಭಗವಂತನಿಂದ ಮಾನವನಿಗೆ ಏನು ಬೇಕೋ ಅವೆಲ್ಲವೂ ಕೊಡಲ್ಪಟ್ಟಿವೆ, ಅಂದರೆ ಸಮಯ, ನೈಪುಣ್ಯ, ಉತ್ತಮವಾದವುಗಳನ್ನು ಸಾಧಿಸಬಲ್ಲ ಅವಕಾಶಗಳು, ಅದೃಷ್ಟ, ಆಲೋಚನೆಗಳು ಕೊಡಲ್ಪಟ್ಟಿವೆ. ಆದರೆ ಅವುಗಳನ್ನು ಯಾವುದಕ್ಕಾಗಿ ಉಪಯೋಗಿಸಬೇಕೋ ಅದಕ್ಕಾಗಿ ಉಪಯೋಗಿಸದೆ ವ್ಯರ್ಥ ಮಾಡುತ್ತಿದ್ದಾನೆ, ದುರ್ವಿನಿಯೋಗ ಮಾಡುತ್ತಿದ್ದಾನೆ, ನಷ್ಟವನ್ನುಂಟು ಮಾಡುವ ಕೆಲಸಗಳನ್ನು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಕೂಡಾ ಆಶ್ಚರ್ಯವನ್ನುಂಟು ಮಾಡುವ ವಿಷಯ. ಇಂತಹ ಶ್ರೇಷ್ಠವಾದ, ಬೆಲೆ ಕಟ್ಟಲಾಗದಂತವುಗಳನ್ನು ಕೊಟ್ಟರೆ, ಮಾನವನು ಇವುಗಳನ್ನು ಉಪಯೋಗಿಸಿಕೊಳ್ಳದೇ, ಇವುಗಳನ್ನು ಸದ್ವಿನಿಯೋಗ ಮಾಡಿಕೊಳ್ಳದೆ ವ್ಯರ್ಥ ಮಾಡುತ್ತಿದ್ದಾನೆ, ದುರ್ವಿನಿಯೋಗವನ್ನು ಕೂಡಾ ಮಾಡುತ್ತಿದ್ದಾನೆ. ಮೇಲಾಗಿ ದೇವರು ನನಗೇನು ಕೊಟ್ಟಿದ್ದಾನೆ? ಎನ್ನುತ್ತಾರೆ, ಎಷ್ಟು ವಿಚಿತ್ರ, ಎಂತಹ ಆಶ್ಚರ್ಯ! ಅಷ್ಟೇ ಅಲ್ಲ ಇನ್ನು ಎಷ್ಟೋ ಆಶ್ಚರ್ಯಕರವಾದ ಕೆಲಸಗಳನ್ನು ಮಾಡುತ್ತಿದ್ದಾರೆ, ಆಶ್ಚರ್ಯಗೊಳ್ಳುವಂತೆ ಮಾನವನು ವರ್ತಿಸುತ್ತಿದ್ದಾನೆ.

# ಶರೀರದ ಬೆಲೆಯನ್ನು ತಿಳಿದುಕೊಳ್ಳಬೇಕು

ಮಾನವನಿಗೆ ಕೊಟ್ಟಿರುವ ಶರೀರವು ಯಾವ ಜೀವರಾಶಿಗೂ ಇಲ್ಲ. ಏಕೆಂದರೆ ಈ ಶರೀರದಿಂದ ಸಾಧಿಸಲಾರದ್ದು ಎಂಬುದು, ಮಾಡಲಾರದ್ದು ಎಂಬುದು ಯಾವುದು ಇಲ್ಲ. ಏನನ್ನಾದರೂ ಮಾಡಬಲ್ಲನು, ಏನನ್ನಾದರೂ ಸಾಧಿಸಬಲ್ಲನು. ಹಾಗೆ ಎಷ್ಟೋ ಜನ ಮಹಾನುಭಾವರು, ಯೋಗಿಗಳು ಮಾಡಿ ತೋರಿಸಿದ್ದಾರೆ.

ಅಂತಹ ಯೋಗಿಗಳಿಗೆ ಇರುವ ಶರೀರವು, ನಿಮಗಿರುವಂತಹ ಶರೀರವು ಎರಡೂ ಒಂದೇ, ವ್ಯತ್ಯಾಸವೇನೂ ಇಲ್ಲ. ಒಬ್ಬ ರಮಣ ಮಹರ್ಷಿಗೆ ಕೊಡಲ್ಪಟ್ಟಿರುವ ಶರೀರವು ಹೇಗೆ ಇರುತ್ತದೋ, ನಿಮಗೆ ಕೊಡಲ್ಪಟ್ಟಿರುವ ಶರೀರವೂ ಕೂಡಾ ಅದೇ ವಿಧವಾಗಿರುತ್ತದೆ. ಇರುವ ವ್ಯತ್ಯಾಸವು ಅದನ್ನು ಉಪಯೋಗಿಸಿಕೊಳ್ಳುವುದರಲ್ಲಿಯೇ ಇದೆ. ಅವರು ಕೊಡಲ್ಪಟ್ಟಿರುವ ಶರೀರವನ್ನು ವ್ಯರ್ಥ ಮಾಡಲಿಲ್ಲ, ದುರ್ವಿನಿಯೋಗ ಮಾಡಲಿಲ್ಲ, ರಮಣ ಮಹರ್ಷಿ ಆ ಶರೀರವನ್ನು ಸಂತೋಷ, ವಿನೋದಪಡುವುದಕ್ಕೆ, ಮನೋರಂಜನೆಗಾಗಿ ಉಪಯೋಗಿಸಲಿಲ್ಲ. ಹಾಗೆ ಉಪಯೋಗಿಸಿಕೊಂಡಿದ್ದರೆ ಕೊಡಲ್ಪಟ್ಟಿರುವ ಶರೀರವನ್ನು ವ್ಯರ್ಥ ಮಾಡಿದಂತೆಯೇ.

ಬಹಳ ಜನರು ಈ ಶರೀರವನ್ನು ಸುಖಪಡುವುದಕ್ಕಾಗಿ, ಖುಷಿ ಪಡುವುದಕ್ಕಾಗಿ, ಸಂತೋಷಪಡುವುದಕ್ಕಾಗಿ, ಜೀವಹಿಂಸೆ ಮಾಡುತ್ತಿದ್ದಾರೆ, ಮಾಂಸ ಭಕ್ಷಣೆ ಮಾಡುತ್ತಿದ್ದಾರೆ, ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾರೆ, ಈ ಶರೀರದಿಂದ ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಿದ್ದಾರೆ. ಮತ್ತೆ ಕೊಡಲ್ಪಟ್ಟಿರುವ ಈ ಶರೀರದಿಂದ ಇಂತಹ ಕೆಲಸಗಳನ್ನು ಮಾಡಿದರೆ ಎಷ್ಟು ನಷ್ಟವಾಗುತ್ತದೆ? ಮಾನವನಿಗೆ ಶರೀರವಿದೆ. ಆದ್ದರಿಂದ, ಅದರ ಅಗತ್ಯಗಳನ್ನು ತೀರಿಸಿಕೊಳ್ಳಬಹುದು, ತಪ್ಪೇನೂ ಇಲ್ಲ. ಆದರೆ ವ್ಯರ್ಥ ಮಾಡಬಾರದು, ದುರ್ವಿನಿಯೋಗ ನಿಜವಾಗಿಯೂ ಮಾಡಬಾರದು.

ಮತ್ತೆ ರಮಣ ಮಹರ್ಷಿಗೆ ಓದುಬಾರದು. ಆದರೆ ಆ ಶರೀರದಿಂದ ಅವರು ಧ್ಯಾನವನ್ನು ಮಾಡಿಸಿದರು, ಏನನ್ನು ಮಾಡಬೇಕೋ ಅದನ್ನೇ ಮಾಡಿಸಿದರು. ಆ ಶರೀರದಿಂದ ಧ್ಯಾನವನ್ನು ಮಾಡಿಸಿದ್ದರಿಂದ ಯಾರೂ ಸಾಧಿಸಲಾರದಂತಹ ಅಪಾರವಾದ ಜ್ಞಾನವನ್ನು ಸಂಪಾದಿಸಿದರು, ಎಷ್ಟೋ ಶಕ್ತಿಯನ್ನು ಸಂಪಾದಿಸಿದರು, ಪ್ರಪಂಚದಲ್ಲಿಯೇ ಶ್ರೇಷ್ಠನಾಗಿ ಬೆಳೆದರು.

ಆತನು ಕೋಟಿಗಳನ್ನು ಸಂಪಾದಿಸಲಿಲ್ಲ, ಭೋಗಗಳನ್ನು ಅನುಭವಿಸಲಿಲ್ಲ, ಈಗಲೂ ಆತನು ಇಲ್ಲದಿದ್ದರೂ ಆತನ ಸಂದೇಶಗಳನ್ನು, ಉಪನ್ಯಾಸಗಳನ್ನು,

ಮಾತಗಳನ್ನು ಕೇಳಿ ಎಷ್ಟೋ ಜನರು ಆದರ್ಶವಾಗಿ ತೆಗೆದುಕೊಂಡು ಅನುಸರಿಸುತ್ತಿದ್ದಾರೆ. ಮತ್ತೇ ಅಂತಹ ಶರೀರವು ನಮಗೆ ಕೊಡಲ್ಪಟ್ಟಿದೆ. ಒಬ್ಬ ವಿವೇಕಾನಂದ, ಒಬ್ಬ ವೇಮನ, ಒಬ್ಬ ಪತ್ರೀಜಿಯವರಂತೆ ನೀವು ಕೂಡಾ ಶ್ರೇಷ್ಠವಾಗಿ ಬೆಳೆಯಬಹುದು, ಅಷ್ಟು ಶ್ರೇಷ್ಠರಾಗಬಹುದು, ಆ ಶರೀರದಿಂದ ಮಾಡುವ ತೀವ್ರ ಸಾಧನೆಯಿಂದ ಅಪಾರವಾದ ಜ್ಞಾನವನ್ನು ಅವರು ಸಂಪಾದಿಸಿಕೊಂಡಿದ್ದಾರೆ. ನೀವು ಕೂಡಾ ಸಂಪಾದಿಸಿಕೊಳ್ಳಬಹುದು. ಅಂತಹ ಜ್ಞಾನಾಗ್ನಿಯಲ್ಲಿ ಅವರು ಕರ್ಮಗಳನ್ನು ಕಡಿಮೆ ಮಾಡಿಕೊಂಡರು. ನೀವೂ ಕೂಡಾ ಆ ಕೆಲಸವನ್ನು ಮಾಡಬಹುದು. ಜನ್ಮ ಜನ್ಮಗಳಲ್ಲಿ ಜೋಡಿಸಿಕೊಂಡ ಕರ್ಮಗಳನ್ನು ಈ ಜನ್ಮದಲ್ಲಿ ಶರೀರದಿಂದ ಮಾಡುವ ಸಾಧನೆಯಿಂದ ಪೂರ್ತಿಯಾಗಿ ದಗ್ಧ ಮಾಡಿಕೊಳ್ಳಬಹುದು.

ಕರ್ಮಗಳಿದ್ದರೆ ಅನುಭವಿಸಬೇಕು ಆದಕಾರಣ ಜನ್ಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದು ಪಾಪಕರ್ಮವಾಗಿರಲಿ, ಪುಣ್ಯ ಕರ್ಮವಾಗಿರಲಿ, ಕರ್ಮವೇ ಇಲ್ಲದಿದ್ದರೆ ಇನ್ನು ಅನುಭವಿಸುವುದು ಏನಿದೆ? ಇನ್ನು ಅವರಿಗೆ ಜನ್ಮ ಬಾರದು. ಮತ್ತೆ ಆ ಸ್ಥಿತಿಗೆ ಬರಬೇಕೆಂದರೆ, ಶರೀರವನ್ನು ಉಪಯೋಗಿಸಿ ಕೊಂಡರೇನೇ ಬರುತ್ತದೆ. ಸ್ತ್ರೀ ಶರೀರವಾದರೂ ಸರಿ ಧ್ಯಾನವನ್ನು ಮಾಡಬಹುದು, ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಪುರುಷ ಶರೀರವಾಗಲಿ ಸರಿ, ಧ್ಯಾನವನ್ನು ಮಾಡಬಹುದು. ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ನೀವು ಕೂಡಾ ಹಿಂದಿನ ಜನ್ಮಗಳಲ್ಲಿ ಮಾಡಿದ ಕೆಲವು ಕರ್ಮಗಳ ಕಾರಣದಿಂದಾಗಿ ಅನುಭವಗಳಿಗೆ ಯಾರಿಗೆ ಅನುಕೂಲವಾದ ಶರೀರವನ್ನು ಅವರು ತೆಗೆದುಕೊಂಡಿದ್ದಿರಿ.

ಅಷ್ಟೇ ಅಲ್ಲ ಪ್ರತಿ ತಿಂಗಳು ಭೀಮವರಂಗೆ ಬರುವುದಲ್ಲದೆ, ಎಷ್ಟೋ ಸಾಧನೆಯನ್ನು ಮಾಡುತ್ತಿದ್ದೀರಿ. ಅಲ್ಲಿ ಸೌಕರ್ಯಗಳು ಇವೆಯಾ? ಇಲ್ಲವೋ? ನೋಡುತ್ತಿಲ್ಲ. ಈ ಶರೀರದಿಂದ ಮಾಡಬೇಕಾದ ಕೆಲಸಗಳನ್ನೇ ಮಾಡುತ್ತಿದ್ದೀರಿ. ಈ ಶರೀರದಿಂದ ಮಹನೀಯರು ಏನನ್ನು ಸಾಧಿಸಿದರೋ ಅದನ್ನು ಸಾಧಿಸುವುದೇ ನಿಮ್ಮ ಆಶಯವಾಗಬೇಕು. ಪತ್ರೀಜಿಯವರು "ಮಹನೀಯರು ಏನನ್ನು ಮಾಡಿದರೋ ಅದನ್ನು ಮಾಡುವುದೇ ನೀವು ಮಾಡಬೇಕಾದದ್ದು" ಎನ್ನುತ್ತಾರೆ.

ಇನ್ನೊಂದು ಸಂದರ್ಭದಲ್ಲಿ ಪತ್ರೀಜಿಯವರು ಏನೆಂದು ಹೇಳಿದ್ದಾರೆಂದರೆ! ಒಬ್ಬ ಮಂತ್ರಿಯನ್ನು ನೋಡಿ ನಾನು ಮಂತ್ರಿಯಾದರೆ ಚೆನ್ನಾಗಿರುತ್ತದೆ ಎಂದುಕೊಳ್ಳುತ್ತೀರಿ. ಒಬ್ಬ ಜಿಲ್ಲಾಧಿಕಾರಿಯನ್ನು ನೋಡಿದರೆ ನಾನೂ ಜಿಲ್ಲಾಧಿಕಾರಿಯಾದರೆ ಚೆನ್ನಾಗಿರುತ್ತದೆಂದುಕೊಳ್ಳುತ್ತೀರಿ. ಒಬ್ಬ ಸಿನಿಮಾ ನಟರನ್ನು

ನೋಡಿ ನಾನೂ ಕೂಡಾ ಸಿನಿಮಾ ನಟನಾದರೆ ಚೆನ್ನಾಗಿರುತ್ತದೆಂದುಕೊಳ್ಳುತ್ತೀರಿ. ದೊಡ್ಡ ಸಂಗೀತ ವಿದ್ವಾಂಸನನ್ನು ನೋಡಿ ನಾನೂ ಕೂಡಾ ಅಂತ ದೊಡ್ಡವನಾದರೆ ಚೆನ್ನಾಗಿರುತ್ತದೆಂದುಕೊಳ್ಳುತ್ತೀರಿ. ಧನವಂತನನ್ನು ನೋಡಿ ನಾನೂ ಕೂಡಾ ಧನವನ್ನು ಸಂಪಾದಿಸಿದರೆ ಚೆನ್ನಾಗಿರುತ್ತದೆಂದುಕೊಳ್ಳುತ್ತೀರಿ. ಆದರೆ ರಮಣ ಮಹರ್ಷಿಯಂತೆ, ವಿವೇಕಾನಂದರಂತೆ ಆದರೆ ಎಷ್ಟು ಚೆನ್ನಾಗಿರುತ್ತದೆ ಎಂದು ಅಂದುಕೊಳ್ಳುವರೇ! ಎನ್ನುತ್ತಾರೆ.

ಶಾಶ್ವತವಾದವುಗಳನ್ನು ಸಂಪಾದಿಸಿಕೊಳ್ಳುವ ಶ್ರೇಷ್ಠವಾದ ಶರೀರವಿದ್ದರೂ ಕೂಡಾ ಅವುಗಳನ್ನು ಉಪಯೋಗಿಸುತ್ತಿಲ್ಲ. ಎಷ್ಟು ಬುದ್ಧಿಹೀನರು ಅವರು ಎನ್ನುತ್ತಾರೆ ಪತ್ರೀಜಿಯವರು. ಮಹನೀಯರು ಮಾಡುತ್ತಿರುವ ಕೆಲಸಗಳನ್ನು ನಾವು ಮಾಡಿದರೆ ಖಂಡಿತವಾಗಿಯೂ ನಾವು ಶ್ರೇಷ್ಠರಾಗುತ್ತೇವೆ. ಒಬ್ಬ ತೆಂಡೂಲ್ಕರ್ ಆಗಬೇಕೆಂದರೆ ತೆಂಡೂಲ್ಕರ್ ಫೋಟೋವನ್ನಿಟ್ಟು ಪೂಜಿಸಿದರೆ ಆಗುವುದಿಲ್ಲ, ತೆಂಡೂಲ್ಕರ್‌ನಂತೆ ಬ್ಯಾಟನ್ನು ಹಿಡಿದುಕೊಂಡು ಅಭ್ಯಾಸ ಮಾಡಿದರೆ ಆಗುತ್ತೀಯ. ಶ್ರೇಷ್ಠವಾದವರನ್ನು ನೋಡಿ ಅವರ ಫೋಟೋಗಳನ್ನು ಇಟ್ಟುಕೊಂಡು ಆರಾಧಿಸುವುದಲ್ಲ, ಅವರು ಏನನ್ನು ಮಾಡಿದ್ದಾರೋ ಅದನ್ನು ಮಾಡುವುದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು.

ಆದ್ದರಿಂದ ಈ ಶರೀರವು ಬೆಲೆಕಟ್ಟಲಾಗದ್ದು ಎಂದು ತಿಳಿದುಕೊಳ್ಳಬೇಕು. ಇದನ್ನು ಉಪಯೋಗಿಸಿದರೆ ಏನನ್ನಾದರೂ ಸಾಧಿಸಬಹುದು, ಎಷ್ಟನ್ನಾದರೂ ಸಾಧಿಸಬಹುದು. ಅಂತಹ ಶ್ರೇಷ್ಠ ಶಕ್ತಿಯುಳ್ಳದ್ದು ಈ ಶರೀರವು. ಆದರೆ ಈ ಶರೀರವನ್ನು ಉಪಯೊಗಿಸಿಕೊಳ್ಳುವ ವಿಧಾನದಲ್ಲಿಯೇ ಇದೆ ಎಲ್ಲಾ. ಶರೀರವನ್ನು ಸುಖಪಡಿಸಿದರೆ ನಿನಗೇನು ಬರುತ್ತದೆ? ನೀನು ಶರೀರವಲ್ಲ, ನೀನು ಆತ್ಮನು. ನಿನಗಾಗಿ ಈ ಶರೀರವನ್ನು ತೆಗೆದುಕೊಂಡಿರುವೆ. ಆತ್ಮನಾದ ನಿನ್ನ ಉನ್ನತಿಗಾಗಿ, ಆತ್ಮನಾದ ನಿನ್ನ ಲಾಭಕ್ಕಾಗಿ, ಆತ್ಮನಾದ ನಿನ್ನ ಬೆಳವಣಿಗೆಗಾಗಿ, ಆತ್ಮನಾದ ನೀನು ಉನ್ನತವಾದ ಸ್ಥಿತಿಯನ್ನು ಹೊಂದುವುದಕ್ಕಾಗಿ, ಆತ್ಮನಾದ ನೀನು ಉನ್ನತ ಲೋಕಗಳನ್ನು ಹೊಂದುವುದಕ್ಕಾಗಿ, ಆತ್ಮನಾದ ನೀನು ನಿನ್ನ ಲಕ್ಷ್ಯ ಸಾಧನೆಗಾಗಿ, ಆತ್ಮನಾದ ನೀನು ನಿನ್ನ ಗುರಿಯನ್ನು ಸೇರುವುದಕ್ಕಾಗಿ, ಈ ಶರೀರವನ್ನು ತೆಗೆದುಕೊಂಡಿರುವೆ. ಅಷ್ಟೇ ಹೊರತು ಶರೀರವು ನಿನ್ನನ್ನು ತಂದುಕೊಂಡಿಲ್ಲ, ನೀನು ಈ ಶರೀರವನ್ನು ಆಯ್ಕೆ ಮಾಡಿಕೊಂಡಿರುವೆ. ಅಂತಹ ಶರೀರವನ್ನು ಉಪಯೋಗಿಸದೇ ನಿರ್ಲಕ್ಷ್ಯ ಮಾಡಿದರೆ ಆತ್ಮಹಂತಕನಾಗುವೆ.

# ಪೂರ್ಣಾತ್ಮನು ಮಾಡುವ ಉಪಕಾರ

ಸಾಧಾರಣವಾಗಿ ಈ ಧ್ಯಾನ ಮಾರ್ಗದೊಳಗೆ, ಜ್ಞಾನ ಮಾರ್ಗದೊಳಗೆ ಬಂದಿರುವಂತಹ ನಮ್ಮೆಲ್ಲರಿಗೂ ಕೆಲವು ಕಷ್ಟಗಳು, ಕೆಲವು ಜಗಳಗಳು, ಇನ್ನು ಕೆಲವರಿಗೆ ಆರ್ಥಿಕ ಸಮಸ್ಯೆಗಳು ಕೂಡಾ ಬರುತ್ತವೆ. ಆದರೆ ಕಾರಣ ಅರ್ಥವಾಗದು.

ಸಾಧಾರಣವಾಗಿ ನಮ್ಮ ಸೊಸೈಟಿಯಲ್ಲಿ ಧ್ಯಾನ ಮಾಡಿದರೆ ಎಲ್ಲಾ ಸಮಸ್ಯೆಗಳು ತೊಲಗಿ ಹೋಗುತ್ತವೆ ಎನ್ನುವಂತಹ ಬಲವಾದ ನಂಬಿಕೆ ಇದೆ. ಅದಕ್ಕೆ ಕಾರಣವು ನಮ್ಮವರು. ನಾನು ಧ್ಯಾನ ಮಾಡಿದೆನು, ನನಗೆ ಕ್ಯಾನ್ಸರ್ ಕಡಿಮೆಯಾಯಿತು, ಒಬ್ಬರು ನಾನು ಧ್ಯಾನವನ್ನು ಮಾಡಿದೆನು ಅಂದುಕೊಂಡ ಕೆಲಸವು ನಡೆಯಿತು, ಒಬ್ಬರು ನನಗೆ ಆರ್ಥಿಕ ಸ್ಥಿತಿ ಉತ್ತಮವಾಗಿ ಬದಲಾಯಿತೆಂದು, ಒಬ್ಬರು ನನಗೆ ಎಷ್ಟೋ ಅನುಭವಗಳು ಬಂದಿವೆಯೆಂದು ಹೇಳುತ್ತಿದ್ದರೆ ಓಹೋ! ಧ್ಯಾನವನ್ನು ಮಾಡಿದರೆ ಎಲ್ಲಾ ರೀತಿಯ ಲಾಭಗಳು ಬರುತ್ತವೆ ಎನ್ನುವಂತಹ ಅಭಿಪ್ರಾಯವು ಬಹಳ ಜನರಲ್ಲಿ ಏರ್ಪಟ್ಟಿದೆ.

ಇಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಬರಬಹುದಾಗಲಿ ಎಲ್ಲಾ ಒಬ್ಬರಿಗೇ ಅಲ್ಲ. ಕೆಲವರಿಗೆ ಅಸಲು ಏನೂ ಬರುವುದಿಲ್ಲ. ಹಾಗೆ ಬರದಿದ್ದಾಗ ಏಕೆ ನಾನು ಇಷ್ಟು ದಿನದಿಂದ ಮಾಡುತ್ತಿದ್ದರೂ ನನಗೇನೂ ಪ್ರಯೋಜನವಾಗಲಿಲ್ಲ? ಯಾವ ಲಾಭವು ಬರಲಿಲ್ಲ? ಏಕೆ ನಾನು ಧ್ಯಾನವನ್ನು ಮಾಡುವುದು? ಎನ್ನುವಂತಹ ಸಂದೇಹ ಕೂಡಾ ಬರುತ್ತದೆ. ನೋಡಿ, ನೋಡಿ ಕೆಲವು ದಿನಗಳಾದ ಮೇಲೆ ಧ್ಯಾನವನ್ನು ಬಿಟ್ಟು ಬಿಡುತ್ತಾರೆ. ಅವರ ಆಲೋಚನೆ ಅಷ್ಟೇ! ಅದಕ್ಕೂ ಮೊದಲು ಧ್ಯಾನ ಮಾಡದಿದ್ದರೂ ಸಮಸ್ಯೆ ಬಂದಿತು, ಏಕೆ ಬಂದಿತು? ಅದನ್ನು ಆಲೋಚಿಸರು. ನಾನು ಧ್ಯಾನ ಮಾಡಿದೆನು ಹೋಗಲಿಲ್ಲ ಎಂಬುದೇ ಅವರ ಉದ್ದೇಶ. ಆದ್ದರಿಂದ ಈ ಸಂದೇಹವನ್ನು ನಿವೃತ್ತಿ ಮಾಡಿಕೊಳ್ಳುವುದಕ್ಕೆ ಒಂದು ಉಪಮಾನವನ್ನು ಹೇಳಿಕೊಳ್ಳೋಣ.

ಪತ್ರೀಜಿಯವರು ಏನು ಹೇಳಿದ್ದಾರೆಂದರೆ "ಪೂರ್ಣಾತ್ಮನಿಂದ ಬಿಡುಗಡೆ ಯಾದಂತಹ ಅಂಶಾತ್ಮಗಳಿಗೆ, ಆ ಪೂರ್ಣಾತ್ಮ ಒಂದು ಲಕ್ಷ್ಯವನ್ನು ನಿರ್ದೇಶಿಸಿ ತಾಯಿಯ ಗರ್ಭದಲ್ಲಿ ತಯಾರಾಗುವ ಶರೀರದಲ್ಲಿ ಪ್ರವೇಶಪಡಿಸುತ್ತದೆ. ನೀನು ಎಷ್ಟು ಜನ್ಮಗಳನ್ನಾದರೂ ತೆಗೆದುಕೋ, ಕೊನೆಗೆ ನನ್ನ ಸ್ಥಾಯಿಗೆ ಬರಬೇಕು, ಅಂದರೆ ನೀನು ಕೂಡಾ ಪೂರ್ಣಾತ್ಮನಾಗಬೇಕು, ಅಲ್ಲಿಯವರೆಗೆ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರುವೆ, ಎಂದು ಜನನ ಮರಣ ಚಕ್ರದಲ್ಲಿ ಪ್ರವೇಶಪಡಿಸುತ್ತದೆ". ಅಂದರೆ ಹುಟ್ಟುತ್ತಾ ಇರುತ್ತಾನೆ, ಸಾಯುತ್ತಾ ಇರುತ್ತಾನೆ. ಎಲ್ಲಿಯವರೆಗೆ? ಇವನು ಪೂಣಾತ್ಮನಾಗುವವರೆಗೂ. ಹಾಗೆ ಆಗುವವರೆಗೂ ಅಂಶಾತ್ಮನ ಆಗು–ಹೋಗುಗಳನ್ನು ಪೂರ್ಣಾತ್ಮ ನೋಡಿಕೊಳ್ಳುತ್ತದೆ ಎಂದು ಹೇಳಿದ್ದಾರೆ.

ಇನ್ನೊಂದು ಏನನ್ನು ಹೇಳಿದರೆಂದರೆ, ಈ ಅಂಶಾತ್ಮಗಳನ್ನು ಪೂರ್ಣಾತ್ಮಗಳು ಮಳೆಯಂತೆ ಸೃಷ್ಟಿಸುತ್ತಲೇ ಇರುತ್ತವೆಯಂತೆ. ಮಳೆಯಲ್ಲಿ ಎಷ್ಟು ಹನಿಗಳು ಬೀಳುತ್ತವೋ ಹಾಗೆ ಎಷ್ಟೋ ಕೋಟ್ಯಾನುಕೋಟಿ ಅಂಶಾತ್ಮಗಳು ಸೃಷ್ಟಿಸಲ್ಪಡುತ್ತವೆ. ಮಾನವರೇ ಅಲ್ಲ 84 ಲಕ್ಷ ರೀತಿಯ ಜೀವರಾಶಿಗಳೆಲ್ಲವೂ ಪುರೋಗತಿಯನ್ನು ಸಾಧಿಸಬೇಕಾದವೆ ಎಂದಿದ್ದಾರೆ. ನನ್ನ ಸಂದೇಹವೆನೆಂದರೆ, ಇಷ್ಟು ಕೋಟ್ಯಾನುಕೋಟಿ ಸೃಷ್ಟಿಸಿ, ಇಷ್ಟು ಜನರ ಆಗು–ಹೋಗುಗಳನ್ನು ಪೂರ್ಣಾತ್ಮ ಒಂದೇ ಹೇಗೆ ನೋಡಿಕೊಳ್ಳಬಲ್ಲದು? ಎಂಬುದು.

ನಾವು ನಮ್ಮ ಸಂಸಾರದಲ್ಲಿರುವ ಇಬ್ಬರು, ಮೂವರು ಆಗು–ಹೋಗುಗಳನ್ನೇ ನೋಡಿಕೊಳ್ಳಲಾಗದೇ ಸಾಯುತ್ತಿದ್ದೇವೆ! ಪೂಣಾತ್ಮ ಇಷ್ಟು ಜನರ ಆಗು–ಹೋಗುಗಳನ್ನು ಹೇಗೆ ನೋಡಿಕೊಳ್ಳುತ್ತದೆ? ಎಂಬ ಸಂದೇಹವೂ ಕೂಡಾ ನನಗೆ ಬಂದಿತು, ಅಷ್ಟೇ ಅಲ್ಲ ಆ ಪೂಣಾತ್ಮ ಅಂದರೆ ಭಗವಂತನೇ ನಮ್ಮ ಆಗು–ಹೋಗುಗಳನ್ನು, ನಮ್ಮ ಒಳ್ಳೆದು–ಕೆಟ್ಟದ್ದನ್ನು ಎಲ್ಲವನ್ನು ನೋಡಿಕೊಳ್ಳುತ್ತಿರುವಾಗ ನಮ್ಮೆಲ್ಲರಿಗೂ ಇಷ್ಟು ಕಷ್ಟಗಳು, ಇಷ್ಟು ಸಮಸ್ಯೆಗಳು, ಇಷ್ಟು ನೋವುಗಳು, ಆರ್ಥಿಕ ತೊಂದರೆಗಳು, ಜಗಳಗಳು ಏಕೆ ಬರುತ್ತಿವೆ? ಎಂಬ ಸಂದೇಹವೂ ಕೂಡಾ ಬಂದಿತು.

ಅಷ್ಟೇ ಅಲ್ಲ ಏನು ನಡೆದರೂ ನಮ್ಮ ಒಳ್ಳೆಯದಕ್ಕೇ ಎನ್ನುತ್ತಾರಲ್ಲಾ? ಮತ್ತೆ ಕಷ್ಟ ಬಂದರೆ ಅದು ನಮಗೆ ಒಳ್ಳೆಯದು ಹೇಗಾಗುತ್ತದೆ? ಎಂಬ ಸಂದೇಹವೂ ಕೂಡಾ ಬಂದಿತು. ಈ ಸಂದೇಹಗಳೆಲ್ಲವಕ್ಕೂ ಈಗ ಹೇಳುವ ಈ ಉಪಮಾನದ ಮೂಲಕ ಸ್ಪಷ್ಟವಾದ ಉತ್ತರವು ಬರುತ್ತದೆ. "ಭಗವಂತನು ಅಂದರೆ ಪೂರ್ಣಾತ್ಮ ಭಕ್ತರಿಗೆ ಅಂದರೆ ಧ್ಯಾನಿಗಳಿಗೆ ಮಾಡುವ ಉಪಕಾರವು ತಿಳಿಯದು".

ಭಕ್ತಿಯಿಂದ ಆರಾಧನೆ ಮಾಡುವವರಿಗೆ ಭಗವಂತನೇ ದೈವವು, ಮೋಕ್ಷಕ್ಕಾಗಿ ಧ್ಯಾನ ಮಾಡುವವರಿಗೆ ಪೂರ್ಣಾತ್ಮನೇ ದೈವವು. ಪೂರ್ಣಾತ್ಮ ಪ್ರೇಮ ಸ್ವರೂಪನು, ಧ್ಯಾನ ವತ್ಸಲನು ಅನುಗ್ರಹಿಸುವುದಕ್ಕೇ ಇದ್ದಾನೆ. ಉಹಾರಣೆಗೆ ಒಬ್ಬ ಚಿಕ್ಕ ಬಾಲಕನು ದೇಕುವ ಸ್ಥಾಯಿಯಿಂದ ಚೆನ್ನಾಗಿ ಕುಳಿತು ಆಡುತ್ತಾ ಕುಳಿತಿದ್ದಾನೆ. ಇಷ್ಟರಲ್ಲಿ ಭಯಂಕರವಾದ ನಾಗರಹಾವು ಹೆಡೆ ಬಿಚ್ಚಿ, ನಿಧಾನವಾಗಿ ಮಗುವಿನ ಹತ್ತಿರ ಬರುತ್ತಿದೆ. ಆ ಮಗು ಹಾವನ್ನು ಎಂದೂ ನೋಡಿಲ್ಲ. ಅದೇನೆಂದೂ ಕೂಡ ತಿಳಿಯದು. ಆ ವಯಸ್ಸಿನಲ್ಲಿ ಮಕ್ಕಳ ಲಕ್ಷಣವೇನು? ಯಾವುದು ಕಾಣಿಸಿದರೆ ಅದನ್ನು ಹಿಡಿದುಕೊಂಡು ಆಡುತ್ತಾರೆ. ಇಲ್ಲಿ ಈ ಮಗುವಿಗೆ ಆ ಹೊಸದಾಗಿ ಬಂದಂತಹ ಆ ಕಾಳ ನಾಗನು ಅವನ ಮೃತ್ಯು ಸ್ವರೂಪವೆಂದು ತಿಳಿಯದೆ ಆಟ ವಸ್ತುವು ಎಂದು ಭಾವಿಸಿ ಆಡಿಕೊಳ್ಳಬಹುದು ಎಂದುಕೊಂಡನು. ಅದು ಬರುತ್ತಿದ್ದರೆ ಓಡಿ ಹೋಗದೆ ಕೇಕೆ ಹಾಕುತ್ತಾ ಹಾವಿಗೆ ಎದುರಾಗಿ ಹೋಗುತ್ತಿದ್ದಾನೆ. ಇದನ್ನು ಮಗುವಿನ ತಾಯಿ ನೋಡಿದಳು, ಆಕೆಯು

ಭಯ ಭೀತಳಾಗಿ, ಗಡಗಡನೆ ನಡುಗಿದಳು. ಓಡೋಡಿ ಹೋಗಿ ಆ ಮಗುವನ್ನು ಎತ್ತಿಕೊಂಡು ಹೊರಗೆಬಂದು ಬಿಟ್ಟಳು. ಆ ಮಗುವು ಹೊಸ ಬೊಂಬೆಯು ಸಿಕ್ಕಿತು, ಅದು ಹಿಡಿದುಕೊಂಡು ಆಡಬಹುದು ಎಂದು ಎಷ್ಟೋ ಆಸಕ್ತಿಯಿಂದ ಹೋಗುತ್ತಿದ್ದರೆ, ಅಮ್ಮ ಅವನ ಆಸೆ ತೀರದಂತೆ, ಖುಷಿ ತೀರದಂತೆ ಅವನು ಎತ್ತಿಕೊಂಡು ಹೊರ ಬಂದುಬಿಟ್ಟಳು. ಆಗ ಆ ಸಣ್ಣ ಮಗು ತಾಯಿಯನ್ನು ವಿರೋಧಿಯಂತೆ ಭಾವಿಸಿದನು, ಏನು ಮಾಡಲಾಗದೆ ಬಿಕ್ಕು ಹಿಡಿದು ಅತ್ತನು.

ಮೂರು ಹೊತ್ತು ಹಾಲುಣಿಸಿ, ಹಸಿವನ್ನು ತೀರಿಸುತ್ತಿರವಂತಹ ತಾಯಿ ಈಗ ಅವನಿಗೆ ಶತೃವಾಗಿ ಬಿಟ್ಟಳು. ಅಲ್ಲಿಯ ಪರಿಸ್ಥಿತಿಯು ಅವನಿಗೇನು ಅರ್ಥವಾಗಲಿಲ್ಲ, ಗರ್ಭದಲ್ಲಿ ಪ್ರವೇಶಿಸಿದಾಗಿನಿಂದ ಆ ತಾಯಿ ಎಷ್ಟೋ ಪ್ರೇಮದಿಂದ ನೋಡಿದರಲ್ಲವೇ ಅವನು ಈ ಸ್ಥಾಯಿಗೆ ಬೆಳೆದನು. ಅವು ಅವನಿಗೆ ಬೇಕಿಲ್ಲ, ಸಂತೋಷದಿಂದ ಆಡಿಕೊಳ್ಳೋಣವೆಂದರೆ ಆ ವಸ್ತುವನ್ನು ದಕ್ಕಿಸಗೊಡಲಿಲ್ಲ, ಆ ಕೋಪದಿಂದ ಬಿಕ್ಕಳಿಸಿ ಅಳುತ್ತಿದ್ದಾನೆ. ಹಾಗೆಯೇ ಧ್ಯಾನಿಗಳು ವಿಷ ಸರ್ಪಗಳಂತ ಕೋರಿಕೆಗಳನ್ನು ಕೋರಿಕೊಂಡು, ಅವುಗಳಿಗಾಗಿ ಪ್ರಯತ್ನಿಸುತ್ತಾ ಇದ್ದರೆ ಸಮಸ್ತವೂ ತಿಳಿದಿರುವಂತಹ ಸರ್ವಮಯನೂ ಆದಂತಹ ಪೂರ್ಣಾತ್ಮನು ಈ ಧ್ಯಾನಿಗಳ ಕೋರಿಕೆಗಳನ್ನು ವಿಫಲಗೊಳಿಸುತ್ತಿದ್ದಾನೆ. ಕೋರಿಕೆಗಳೆಂದರೆ ವಿಷ ಸರ್ಪದಂತವು, ಈ ಧ್ಯಾನಿಗಳಿಗೆ ಕೋರಿಕೆಗಳು ತೀರದೆ ಹೋದರೆ, ನಾವು ಇಷ್ಟು ಕಷ್ಟಪಟ್ಟು ಧ್ಯಾನ ಮಾಡುತ್ತಿದ್ದರೆ ನಾವು ಅಂದುಕೊಂಡವು ನಡೆಯಲಿಲ್ಲವೆಂದು, ಸಂಕಲ್ಪಗಳನ್ನಿಟ್ಟರೂ ಆಗಲಿಲ್ಲವೆಂದು ಬಹಳ ನೋವು ಪಡುತ್ತಾ ಧ್ಯಾನವನ್ನು ಕೂಡಾ ಬಿಟ್ಟು ಬಿಡುತ್ತಾರೆ.

ಧ್ಯಾನವನ್ನು ಏಕೆ ಮಾಡುತ್ತಿದ್ದಾರೆ? ಆ ಪೂರ್ಣಾತ್ಮನನ್ನು ಸೇರಿಕೊಳ್ಳುವುದಕ್ಕೆ, ಆ ಸತ್ಯವನ್ನು ಸೇರಿಕೊಳ್ಳುವುದಕ್ಕೆ, ನಿಜವಾಗಿಯೂ ಅವನ ಲಕ್ಷ್ಯವೇ ಅದು. ಕೋರಿಕೆಗಳನ್ನು ತೀರಿಸಿಕೊಳ್ಳುವುದಕ್ಕೆ ಭೂಮಿಗೆ ಬಂದಿಲ್ಲ. ಹೋಗಲಿ ಈ ಕೋರಿಕೆಗಳಿಗೆ ಅಂತ್ಯವಿದೆಯಾ ಅಂದರೆ? ಒಂದು ತೀರಿದರೆ ಮತ್ತೊಂದು! ಅದು ತೀರದಿದ್ದರೆ ಮತ್ತೊಂದು! ಹುಟ್ಟುತ್ತಲೇ ಇರುತ್ತವೆ. ಆ ಕೋರಿಕೆಗಳಿಗಾಗಿ ಇಷ್ಟು ಪತನವಾಗುತ್ತಿದ್ದಾನೆ.

ಆದ್ದರಿಂದ ಈ ಧ್ಯಾನವನ್ನು ಮಾಡುವವರು ಕೋರಿಕೆಗಳು ತೀರದೆ ಹೋದರೆ ಧ್ಯಾನವನ್ನು ಬಿಡುತ್ತಾರೆ. ಎಷ್ಟೋ ನೋವುಪಡುತ್ತಾರೆ! ಮಗುವಿಗೆ ಹಾವು ದಕ್ಕಲಿಲ್ಲವೆಂದು ತಾಯಿಯ ಮೇಲೆ ಕೋಪದಿಂದ ಬಿಕ್ಕಳಿಸಿ ಅತ್ತನೋ, ಹಾಗೆಯೇ ಈ ಧ್ಯಾನಿಗಳು ತಮ್ಮ ಕೋರಿಕೆಯು ನೆರವೇರಲಿಲ್ಲವೆಂದು ಪೂರ್ಣಾತ್ಮನ ಮೇಲೆ ಇಟ್ಟ ದೃಷ್ಟಿಯನ್ನು ಮರಳಿಸುತ್ತಾರೆ. ಎಷ್ಟೋ ಜನ್ಮಗಳ ಪುಣ್ಯ ಫಲವು ಬಂದ ಅವಕಾಶವನ್ನು ಬಿಟ್ಟು ಇನ್ನೊಂದು ಏನನ್ನೋ ಮಾಡಿಕೊಳ್ಳುತ್ತಾರೆ. ಎಷ್ಟು ವಿಚಿತ್ರವೋ ನೋಡಿರಿ!

ಈಗ ತಾಯಿ ಆ ಮಗುವಿಗೆ ಒಳಿತನ್ನು ಮಾಡಿದಳೇ? ಕೆಟ್ಟದ್ದನ್ನು ಮಾಡಿದಳೇ? ಆಲೋಚಿಸಿದರೆ ನಿಮಗೆ ತಿಳಿಯುತ್ತದೆ. ಹಾಗೆಯೇ ಪೂರ್ಣಾತ್ಮನನ್ನು ಸೇರಿಕೊಳ್ಳುವುದಕ್ಕೆ ಅಡ್ಡವಾಗಿ ಬರುವ ವಿಷ ಸರ್ಪಗಳಂತ ನಿಮ್ಮ ಕೋರಿಕೆಗಳು ನೆರವೇರಲಿಲ್ಲವೆಂದರೆ, ಪೂರ್ಣಾತ್ಮನು ನಿಮಗೆ ಒಳಿತು ಮಾಡಿದಂತೆಯೇ? ಕೆಟ್ಟದ್ದನ್ನು ಮಾಡಿದಂತೆಯೇ? ಚೆನ್ನಾಗಿ ಆಲೋಚಿಸಿರಿ.

ಭಗವದ್ಗೀತೆಯಲ್ಲಾಗಲೀ, ಮೇಡಂ ಆಗಲೀ, ನಾನಾಗಲಿ ಯಾವಾಗಲೂ ಒಂದೇ ಹೇಳುತ್ತಿದ್ದೇವೆ. ಕೋರಿಕೆಗಳಿಗೆ ದಾಸರಾಗಬೇಡಿ, ಕೋರಿಕೆಗಳ ವ್ಯಾಮೋಹದಲ್ಲಿ ಬೀಳಬೇಡಿ, ಯಾವ ಜನ್ಮದಲ್ಲಿ ಮಾಡಿಕೊಂಡ ಪುಣ್ಯದಿಂದಲೋ ಆ ಪೂರ್ಣಾತ್ಮನನ್ನು ಆ ಪರಬ್ರಹ್ಮನನ್ನು ಸೇರಿಕೊಳ್ಳುವ ಸಾಧನೆಯೊಳಗೆ ಬಂದಿದ್ದೀರಿ. ಪತ್ರೀಜಿಯವರ ದಯೆಯಿಂದ "ಶ್ವಾಸದ ಮೇಲೆ ಗಮನ" ಎಂಬ ಧ್ಯಾನ ಮಾರ್ಗವನ್ನು ತಿಳಿದುಕೊಂಡಿದ್ದೀರಿ, ಇದನ್ನು ಬಿಡಬೇಡಿ ಎಂದು ಹೇಳುತ್ತಿದ್ದೇವೆ.

ನಾವು ಕಷ್ಟಪಡಬಾರದೆಂದೇ ಪೂರ್ಣಾತ್ಮನು ಹೀಗೆ ಉಪಕಾರವನ್ನು ಮಾಡಿದೆಯಾಗಲಿ, ಇದು ಅಪಕಾರವಲ್ಲ. ಹಾಗಾಗಿ ಅನಗತ್ಯವಾದ ಕೋರಿಕೆಗಳಿಂದ ನಿಮ್ಮ ಜೀವನವನ್ನು ವ್ಯರ್ಥ ಮಾಡಿಕೊಳ್ಳಬೇಡಿ. ಭೀಮವರಂನ್ನು ಬಿಟ್ಟವರು, ಜೂಮ್‌ನನ್ನು ಬಿಟ್ಟವರು ಎಷ್ಟು ನಷ್ಟ ಹೊಂದುತ್ತಿದ್ದಾರೋ ಅವರಿಗೆ ಅರ್ಥವಾಗುತ್ತಿಲ್ಲ.
ಆ ತಾಯಿಯು ಆ ಮಗುವನ್ನು ಹಿಂದಕ್ಕೆ ಎಳೆದಕೊಳ್ಳದೇ ಅವನ ಬಯಕೆ ತೀರುವುದಕ್ಕೆ ಬಿಟ್ಟಿದ್ದರೆ, ಅವನಿಗೆ ಎಂತಹ ಅಪತ್ತು ನಡೆಯುತ್ತಿತ್ತೋ? ಹಾಗೆಯೇ ಅನಗತ್ಯವಾದ ಕೋರಿಕೆಗಳಿಂದ ಇರುವ ಮಾನವರಿಗೆ ಪೂರ್ಣಾತ್ಮನು ಕೋರಿಕೆಗಳನ್ನು ತೀರಿಸಿದರೆ, ಅಷ್ಟೇ ನಷ್ಟ ಹೊಂದುತ್ತೀರಿ. ಆದ್ದರಿಂದ ಒಂದನ್ನು ನೆನಪಿಟ್ಟುಕೊಳ್ಳಿ "ಏನು ನಡೆದರೂ ನಮ್ಮ ಒಳ್ಳೆಯದಕ್ಕೇ"! ಇದು ನಮಗೆ ನಂತರ ತಿಳಿಯುತ್ತದೆ. ನನಗೆ ಪತ್ರೀಜಿಯವರು ಪರಿಚಯವಾದ ಸಮಯದಲ್ಲಿ ಎಷ್ಟೋ ಪೆಟ್ಟುಗಳು ಬಿದ್ದವು. ಏನು? ನನ್ನ ಬದುಕು ಹೀಗಾಗಿ ಹೋಯಿತಲ್ಲ ಎಂದು ಕೊಂಡೆನು. ದೇವರು ಹೀಗೆ ಮಾಡಿದನೇಕೆ? ಎಂದುಕೊಂಡೆನು. ನಾನು ವೆಂಕಟೇಶ್ವರ ಸ್ವಾಮಿಯ ಭಕ್ತನು, ಮಂದಿರವನ್ನು ಸಹ ಕಟ್ಟಿದ್ದೇನೆ. ಏನು ಹೀಗೆ ಕಷ್ಟಗಳನ್ನು ಇಡುತ್ತಿದ್ದಾನೆ! ಎಂದುಕೊಂಡೆನು.

ಅಪಾಯದಲ್ಲಿ ಬೀಳುವ ಆ ಧನ ಸಂಪಾದನಾ ಮಾರ್ಗದಲ್ಲಿಂದ ಭಗವಂತನು ನನ್ನನ್ನು ತಪ್ಪಿಸಿ ಈ ಜ್ಞಾನ ಸಂಪಾದನೆಯ ಮಾರ್ಗದೊಳಗೆ ತರುವುದು ನಡೆಯಿತು. ಈ ಮಾರ್ಗದಲ್ಲಿ 10 ವರ್ಷಗಳು ಸಮಸ್ಯೆಗಳಲ್ಲಿ ಬಿದ್ದೆನು. ಏಕೋ ತಿಳಿಯದು ಎಷ್ಟು ತೊಂದರೆಗಳು ಬಂದರೂ ಈ ಜ್ಞಾನ ಮಾರ್ಗವನ್ನು ಬಿಡಲಿಲ್ಲ. ನನ್ನೊಂದಿಗೆ ಮೇಡಂ ಸಹ ಕೈಜೋಡಿಸಿದಳು, ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಳು.

ಕೆಲವರು ಕೇಳುತ್ತಾರೆ! ಇಷ್ಟು ಕೋಟಿಗಳ ಆಸ್ತಿ ಇರುವಾಗ ಏಕೆ ನೀವು ಇಷ್ಟೊಂದು ಆರ್ಥಿಕ ತೊಂದರೆಗಳನ್ನು ಪಡುವುದು, ಯಾವುದನ್ನಾದರೂ ಮಾರಿಕೊಳ್ಳಬಹುದಲ್ಲ? ಎಂದು, ನನಗೆ ಆ ಆಲೋಚನೆಯೇ ಬರಲಿಲ್ಲ. ಎಷ್ಟು ತೊಂದರೆಗಳನ್ನು ಅನುಭವಿಸಿದರೂ ಇರುವುದರಲ್ಲಿಯೇ ಸರಿಮಾಡಿಕೊಂಡು, ಹತ್ತು ವರ್ಷಗಳನ್ನು ಹಾಗೆಯೇ ಕಳೆದೆನು. ಆಗ ಪರಿಸ್ಥಿತಿಗಳು ಬದಲಾದವು, ಪೂರ್ಣಾತ್ಮನಿಗೆ ಈಗ ನಾವು ಇವನಿಗೆ ಆರ್ಥಿಕ ಸ್ಥಿತಿಯನ್ನುಂಟು ಮಾಡಿದರೂ ಇವನು ಅಡ್ಡ ದಾರಿಯನ್ನು ಹಿಡಿಯನು, ಧನವನ್ನು ದುರ್ವಿನಿಯೋಗ ಮಾಡನು, ಈ ಮಾರ್ಗವನ್ನು ಬಿಡನು ಎಂಬ ವಿಶ್ವಾಸವು ಬಂದಿತೇನೋ! ಆಗಿನಿಂದ ಪರಿಸ್ಥಿತಿಗಳೆಲ್ಲವು ಅನುಕೂಲಿಸಿದವು. ಆದ್ದರಿಂದ ನನೆಪಿಟ್ಟುಕೊಳ್ಳಿ, "ಏನು ನಡೆದರೂ ನಮ್ಮ ಒಳ್ಳೆಯದಕ್ಕೇ". ಪೂರ್ಣಾತ್ಮ ನಮ್ಮ ಆಗು-ಹೋಗುಗಳನ್ನು ಯಾವಾಗಲೂ ನೋಡಿಕೊಳ್ಳುತ್ತಲೇ ಇರುತ್ತದೆ. ನೀವು ಅಂದುಕೊಂಡದ್ದು ನಡೆದರೂ, ನಡೆಯದಿದ್ದರೂ ಅದು ನಿಮಗೆ ಅನಗತ್ಯ. ಪೂರ್ಣಾತ್ಮನ ರಕ್ಷಣೆಯಲ್ಲಿಯೇ ನೀವು ಇದ್ದೀರಿ ಎಂಬುದನ್ನು ಮರೆಯಬೇಡಿ. ಎಷ್ಟು ಕೋಟಿಗಳ ಆತ್ಮಗಳನ್ನು ಸೃಷ್ಟಿಸಿದರೆ ಅಷ್ಟು ಕೋಟಿಗಳ ಆತ್ಮಗಳನ್ನು ನೋಡಿಕೊಳ್ಳುತ್ತದೆ. ನೀವು ಮಾಡಬೇಕಾದದ್ದೆಲ್ಲಾ ಆತನ ಮೇಲೆ ದೃಷ್ಟಿ ಇಡುವುದೇ. ಭಗವದ್ಗೀತೆಯಲ್ಲಿ ಇದೆಯಲ್ಲಾ!

**ಶ್ಲೋಕ॥ ಅನನ್ಯಾಶ್ಚಿಂತಯನ್ತೋಮಾಂ ಯೇ ಜನಾಃ ಪರ್ಯುಪಾಸತೇ**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ (ಭ.ಗೀ9-22)**

**ತಾತ್ಪರ್ಯ:** ಯಾರಾದರೆ ಇತರ ಚಿಂತೆಗಳು ಇಲ್ಲದಂತೆ ನನ್ನನ್ನೇ ನಂಬಿಕೊಂಡು ನನ್ನನ್ನು ಧ್ಯಾನಿಸುತ್ತಾ ಯಾವಾಗಲೂ ನನ್ನಲ್ಲಿಯೇ ನಿಷ್ಠೆಯುಳ್ಳವರ ಯೋಗಕ್ಷೇಮಗಳನ್ನು ನಾನೇ ನೋಡಿಕೊಳ್ಳುತ್ತೇನೆ.

ಕೋರಿಕೆಗಳು ತೀರಲಿಲ್ಲ, ಕಷ್ಟಗಳು ಬಂದವು ಎನ್ನುತ್ತೀರಿ. ನೀವು ನಿಜವಾಗಿಯೂ ಯಾರು? ಎಲ್ಲಿಂದ ಬಂದಿದ್ದೀರಿ? ಯಾವುದಕ್ಕಾಗಿ ಬಂದಿದ್ದೀರಿ? ನಿಮ್ಮ ಲಕ್ಷ್ಯವೇನು? ನೀವು ಮಾಡಬೇಕಾದ ಕೆಲಸಗಳೇನು? ಎಂದು ತಿಳಿದುಕೊಳ್ಳುವುದಿಲ್ಲ. ನೀವು ನಿಮ್ಮ ಮಕ್ಕಳಿಗಾಗಿ, ತಂದೆ-ತಾಯಿಗಳಿಗಾಗಿ, ಎಂಜಾಯ್ ಮಾಡುವುದಕ್ಕೆ ಬಂದಿಲ್ಲ ಎಂದು ಅರ್ಥ ಮಾಡಿಕೊಳ್ಳಿ. ನೀವು ಮಾಡಬೇಕಾದದ್ದನ್ನು ಮಾಡುತ್ತಾ ಇದ್ದರೆ, ಬರಬೇಕಾದದ್ದು ಅದೇ ಬರುತ್ತದೆ. ಇದೇ ಸೃಷ್ಟಿಯಲ್ಲಿರುವ ಸಿದ್ಧಾಂತ. ಆದ್ದರಿಂದ ಆ ಭಗವಂತನ ಮೇಲೆ ಅಂದರೆ ಆತ್ಮದ ಮೇಲೆ ದೃಷ್ಟಿಯಿಡಿರಿ. ಅಂದರೆ "ಶ್ವಾಸದ ಮೇಲೆ ಗಮನ"ವಿಟ್ಟು ಧ್ಯಾನವನ್ನು ಮಾಡಿರಿ.

# ಉಪಮಾನ ಧ್ಯಾನ ಸಂದೇಶ

ವಿದ್ಯುತ್ ಶಕ್ತಿಯಿಂದ ಬಲ್ಬು ಬೆಳಗುತ್ತದೆ, ರೈಲು ಪ್ರಯಾಣವು ನಡೆಯುತ್ತದೆ, ಯಂತ್ರಗಳು ನಡೆಯುತ್ತಾ ಇರುತ್ತವೆ, ಮನೆಯಲ್ಲಿ ಎಷ್ಟೋ ಪರಿಕರಗಳು ಕೆಲಸ ಮಾಡುತ್ತಿರುತ್ತವೆ, ಎಷ್ಟೋ ಇಂಡಸ್ಟ್ರಿಗಳು ಕೆಲಸಗಳು ನಡೆಯುತ್ತಿರುತ್ತವೆ. ಇವೆಲ್ಲವು ವಿದ್ಯುತ್ ಶಕ್ತಿಯಿಂದಲೇ ಕೆಲಸ ಮಾಡುತ್ತವೆ, ಆದರೆ ವಿದ್ಯುತ್ ಶಕ್ತಿ ಈ ಕೆಲಸಗಳನ್ನೇನು ಮಾಡಬೇಕು ಎಂದು ಕೊಳ್ಳುವುದಿಲ್ಲ. ಆ ಶಕ್ತಿಯಿಂದ ಆ ಕೆಲಸಗಳೆಲ್ಲವೂ ನಡೆಯುತ್ತ ಇವೆ, ಮಾನವನು ಆ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆ ಅಷ್ಟೇ.

ಅಂದರೆ ನೋಡಿ, ಸ್ವಿಚ್ ಹಾಕಿದರೇನೇ ಯಾವುದಾದರೂ ಕೆಲಸ ಮಾಡುತ್ತದೆ, ಸ್ವಿಚ್ ಆಫ್ ಮಾಡಿದರೆ ಏನೂ ಕೆಲಸ ಮಾಡದು. ಈ ಸ್ವಿಚ್ ಹಾಕುವುದು, ನಿಲ್ಲಿಸುವುದು ಯಾರು ಮಾಡುತ್ತಿದ್ದಾರೆ? ಮಾನವನೇ ಮಾಡುತ್ತಿದ್ದಾನೆ. ಆ ಶಕ್ತಿಯೇನು ಹೇಳಬೇಕೆಂದಾಗಲಿ, ಮಾಡಬೇಕೆಂದಾಗಲೀ ಅಂದುಕೊಳ್ಳದು.

ಹಾಗೆಯೇ "ಆತ್ಮ ಶಕ್ತಿಯಿಂದ ಮಾನವನ ಮನಸ್ಸು, ಬುದ್ಧಿ, ಇಂದ್ರಿಯಗಳು ಎಲ್ಲವು ಕೆಲಸ ಮಾಡುತ್ತಿವೆ, ಜಡವಾದ ಶರೀರವೂ ಕೂಡಾ ಆತ್ಮ ಶಕ್ತಿಯಿಂದ ನಡೆಯುತ್ತದೆ". ಜಡವು ಅಂದರೆ ಶರೀರವನ್ನು ಏಕೆ ಎನ್ನುತ್ತಿದ್ದಾರೆಂದರೆ, "ಶರೀರದಿಂದ ಆತ್ಮವು ಪಕ್ಕಕ್ಕೆ ಸರಿದರೆ ಆ ಶರೀರವು ಏನೂ ಮಾಡಲಾರದು, ಅದನ್ನು ಶವ ಎನ್ನುತ್ತಾರೆ, ಹಾಗೇ ಬಿದ್ದಿರುತ್ತದೆ. ಅಂದರೆ ಆತ್ಮ ಶಕ್ತಿಯಿಂದಲೇ ಆ ಶರೀರವು ಕೆಲಸ ಮಾಡುತ್ತದೆ, ಅಷ್ಟೇ ಹೊರತು ಆತ್ಮ ಈ ಕಾರ್ಯಗಳೇನನ್ನು, ಯಾವನ್ನು ಮಾಡಬೇಕೆಂದುಕೊಳ್ಳುವುದಿಲ್ಲ, ಅದು ಆತ್ಮಕ್ಕೆ ಸಂಬಂಧವಿಲ್ಲ. ಮನಸ್ಸೇ ಆತ್ಮಶಕ್ತಿಯನ್ನು ಉಪಯೋಗಿಸಿಕೊಂಡು ಆ ಕೆಲಸಗಳನ್ನೆಲ್ಲಾ ಮಾಡುತ್ತದೆ".

ಇದರ ಕುರಿತು ಸ್ವಲ್ಪ ವಿವರಿಸಿಕೊಳ್ಳೋಣ. ನಾವು ಗಮನಿಸಿ ಇರುತ್ತೇವೆ, ವಿದ್ಯುಚ್ಛಕ್ತಿಯಿಂದ ಪ್ರಪಂಚದಲ್ಲಿ ಎಷ್ಟೋ ಕೆಲಸಗಳು ನಡೆಯುತ್ತಿವೆ. ಆಫೀಸ್‌ಗಳಲ್ಲಿ, ಮನೆಗಳಲ್ಲಿ, ಹೊರಗೆ ಹಾಗೆ ಎಲ್ಲಿ ನೋಡಿದರೂ ಎಲ್ಲಾ ವಿದ್ಯುಚ್ಛಕ್ತಿಯಿಂದಲೇ ಕೆಲಸ ಮಾಡುತ್ತಿವೆ. ಆ ವಿದ್ಯುತ್ ನಿಂತರೆ ಅವೆಲ್ಲವೂ ನಿಂತು ಬಿಡುತ್ತವೆ, ಏನು ಮಾಡಲಾರದಂತೆ ಆಗಿ ಬಿಡುತ್ತವೆ. ಆದರೆ ಆ ವಿದ್ಯುಚ್ಛಕ್ತಿ ಇವೆಲ್ಲವನ್ನು ಮಾಡಬೇಕೆಂದು ಅಂದುಕೊಳ್ಳದು. ಮಾನವನು ಸ್ವಿಚ್ ಹಾಕಿದರೆ ಅವು ಕೆಲಸ ಮಾಡುತ್ತವೆ, ನಿಲ್ಲಿಸಿದರೆ ನಿಂತು ಹೋಗುತ್ತವೆ. ಈ ಕೆಲಸವನ್ನು

ಯಾರು ಮಾಡುತ್ತಿದ್ದಾರೆ? ಮಾನವನೇ! ಹಾಗೆಯೇ ಆತ್ಮ ಶಕ್ತಿಯಿಂದಲೇ ಈ ಮನಸ್ಸಾಗಲಿ, ಬುದ್ಧಿಯಾಗಲಿ, ಇಂದ್ರಿಯಗಳಾಗಲಿ, ಶರೀರವಾಗಲಿ ಇವೆಲ್ಲವು ಕೆಲಸ ಮಾಡುತ್ತಿವೆ. ಈ ಕೆಲಸಗಳನ್ನು ಮಾಡಬೇಕೆಂದು ಆತ್ಮವು ಅಂದುಕೊಳ್ಳುವುದಿಲ್ಲ.

ಅಂದರೆ ಇದು ಆತ್ಮಕ್ಕೆ ಸಂಬಂಧವಿಲ್ಲ, ಮನಸ್ಸು ಏನು ಮಾಡುತ್ತದೆ? ಅಂದರೆ, ಈ ಆತ್ಮ ಶಕ್ತಿಯನ್ನು ಉಪಯೋಗಿಸಿಕೊಂಡು ಇವುಗಳಿಂದ ಆ ಕೆಲಸಗಳನ್ನೆಲ್ಲಾ ಮಾಡಿಸುತ್ತದೆ. ಆದ್ದರಿಂದ ಆತ್ಮಶಕ್ತಿಯಿಂದ ಇವೆಲ್ಲವು ಕೆಲಸ ಮಾಡುತ್ತಿದ್ದರೂ ಆತ್ಮಕ್ಕೆ ಈ ಕೆಲಸಗಳಿಂದ ಸಂಬಂಧವಿಲ್ಲ. ಮನಸ್ಸು ಆ ಶರೀರದಿಂದ, ಆ ಇಂದ್ರಿಯಗಳಿಂದ ತಪ್ಪುಗಳನ್ನು ಮಾಡಿಸುತ್ತದೆ, ಪಾಪಗಳನ್ನು ಮಾಡಿಸುವುದು, ಅಧರ್ಮವಾದ ಕೆಲಸಗಳನ್ನು, ಘೋರಗಳನ್ನು, ಅಪರಾಧಗಳನ್ನು ಮಾಡಿಸುತ್ತಿರುತ್ತದೆ. ಹಿಂಸೆಯನ್ನು ಕೂಡಾ ಮಾಡಿಸುತ್ತದೆ, ಮಾಡಿಸುವುದು ಮನಸೇ, ಆತ್ಮಕ್ಕೆ ಸಂಬಂಧವಿಲ್ಲ.

ಮತ್ತೆ ಇವೆಲ್ಲವನ್ನು ಮನಸ್ಸೇ ಮಾಡಿಸುತ್ತದೆಯಾದ್ದರಿಂದ ಬರುವ ಫಲವು, ಕಷ್ಟಗಳು ಯಾವುವು ಕೂಡಾ ಆತ್ಮಕ್ಕೆ ಸಂಬಂಧವಿಲ್ಲ, ಮಾಡಿಸುವುದು ಮನಸ್ಸೇ, ಆ ನರಕವನ್ನು ಅನುಭವಿಸುವುದು ಮನಸ್ಸೇ. ಶರೀರಕ್ಕೆ ಅಪಘಾತವಾಗಿ ಕಾಲು ಮುರಿಯಿತು. ಅದು ಆತ್ಮಕ್ಕೇನೂ ಸಂಬಂಧವಿಲ್ಲ. ಒಂದು ಮೂರು ತಿಂಗಳು ನರಕವನ್ನು ಅನುಭವಿಸುತ್ತಾನೆ, ಆತ್ಮಕ್ಕೇನು ಸಂಬಂಧ!.

ಆ ನೋವು ಶರೀರಕ್ಕೆ ಇದೆಯೇ ಅಂದರೆ! ಯಾವ ನೋವಾದರೂ ಸರಿ ಶರೀರದ್ದು ಅಲ್ಲ, ಮನಸ್ಸಿನದೇ. ನೀವು ಗಮನಿಸಿದರೆ ತಿಳಿಯುತ್ತದೆ ಎಲ್ಲಾ ಮನಸ್ಸಿನದೇ ಎಂದು. ನೀನು ಕ್ಲಾಸ್‌ನ್ನು ಕೇಳುತ್ತಿರುವೆ, ಆ ವಿಷಯದಲ್ಲಿ ಚೆನ್ನಾ ಲೀನವಾಗಿರುವೆ, ಮನಸ್ಸು ಅದರ ಮೇಲೆಯೇ ಇದ್ದು ಬಿಟ್ಟಿದೆ. ಇನ್ನೂ ಯಾವುದರ ಮೇಲೂ ಅದರ ದೃಷ್ಟಿ ಹೊರಳದು, ಹಾಗೆ ಗಂಟೆಯಾದರೂ, ಎರಡು ಗಂಟೆಯಾದರೂ, ಮೂರು ಗಂಟೆಯಾದರೂ! ಅಷ್ಟು ಸಮಯ ಆಯಿತೆಂಬ ವಿಷಯವೂ ನಿಮಗೆ ತಿಳಿಯದು, ಮನಸ್ಸಿನ ದೃಷ್ಟಿ ಎಲ್ಲಾ ಅದರ ಮೇಲೆಯೇ ಇದೆ. ಮಧ್ಯದಲ್ಲಿ ಮತ್ತೇ ಮನಸ್ಸು ಎಚ್ಚರಗೊಂಡರೆ ಹಸಿವಿನ ಮೇಲೆ ಗಮನ ಹೋದರೆ ಆಗ ಹಸಿವು ಆಗುತ್ತದೆ. ಆಗ ಏನೋ ತಿನ್ನಬೇಕೆಂದುಕೊಳ್ಳುತ್ತದೆ.

ಅದಕ್ಕೆ ನೀವು ನೋಡಿ, ಯಾವ ಡಾಕ್ಟರ್ ಆಗಲಿ ಇಂಜೆಕ್ಷನ್ ಹಾಕುವಾಗ ಅವರು ಮಾತಿಗಿಳಿಸುತ್ತಾರೆ. ಸಣ್ಣ ಮಕ್ಕಳಾದರೆ ಏನು ಓದುತ್ತಿರುವೆಯಮ್ಮಾ ಎಂದು ಕೇಳುತ್ತಾನೆ. ಏನೋ ಎಸ್.ಎಸ್.ಎಲ್.ಸಿ.ಯೋ, ಪಿ.ಯು.ಸಿಯೋ, ಬಿ.ಎಸ್ಸಿಯೋ

ಏನೋ ಹೇಳುತ್ತಾರೆ. ಯಾವ ವಿಷಯವನ್ನು ತೆಗೆದುಕೊಂಡಿರುವೆ? ನಿನಗೆ ಯಾವ ರ್‍ಯಾಂಕ್ ಬರುತ್ತದೆ? ಎಂದು ಕೇಳುತ್ತಾ ಇರುತ್ತಾನೆ. ಇವರು ಅದರಲ್ಲಿ ಲೀನವಾಗಿ ದೃಷ್ಟಿ ಆ ಓದಿನ ಮೇಲೆ ಮರಳಿ, ಮನಸ್ಸು ಆ ವಿಷಯವನ್ನು ಸ್ಫುರಣೆಗೆ ತಂದುಕೊಳ್ಳುತ್ತಾ ಅವು ಹೇಳುತ್ತಿದ್ದರೆ, ಈ ಒಳಗೆ ಡಾಕ್ಟರ್ ಇಂಜೆಕ್ಷನ್‌ನನ್ನು ಚುಚ್ಚಿ, ಆಗಿ ಹೋಯಿತು ಬಿಡು, ಹೋಗಿ ಬಾ ಎನ್ನುತ್ತಾನೆ.

ಆದರೆ ಕೆಲವರು ಬುದ್ಧಿವಂತರು ಇರುತ್ತಾರೆ, ಅವರು ಏನು ಮಾಡುತ್ತಾರೆಂದರೆ ಡಾಕ್ಟರ್ ಮಾತಿಗಿಳಿದು ಚುಚ್ಚಿ ಬಿಡೋಣ ಅಂದುಕೊಳ್ಳುತ್ತಾನೆ, ಆದರೆ ಡಾಕ್ಟರ್ ಎಷ್ಟು ಮಾತನಾಡಿದರೂ, ಪ್ರಶ್ನೆಗಳನ್ನು ಕೇಳಿದರೂ ದೃಷ್ಟಿಯನ್ನು ಅದರ ಮೇಲೆ ಇಡದೇ ಹೋಗುವುದರಿಂದ, ಚುಚ್ಚಿದಾಗ ವಿಪರೀತವಾದ ನೋವಿನಿಂದ ಎಗರಾಡುತ್ತಾರೆ. ಆದ್ದರಿಂದ ಶರೀರಕ್ಕೆ ಕೂಡಾ ಏನೂ ನೋವು ಇರದು, ಮನಸ್ಸಿಗೆ ಬಾಧೆ ಎಲ್ಲಾ ಎಂದು ತಿಳಿದುಕೊಳ್ಳಬೇಕು.

ಚಿಕ್ಕ ಮಕ್ಕಳಿಗೆ ತಾಯಿ ಎತ್ತಿಕೊಂಡು ಅನ್ನವನ್ನು ತಿನ್ನಿಸುತ್ತಾ ಇರುತ್ತಾಳೆ. ಮಗುವಿಗೆ ಅಮ್ಮ ಇಡುತ್ತಿರುವುದು ಇಷ್ಟವಾಗದಿದ್ದಾಗ ಬೇಡ ಎನ್ನುತ್ತದೆ. ಆಗ ತಾಯಿ ಏನೋ ಒಂದು ಕತೆಯನ್ನು ಹೇಳುತ್ತಾಳೆ. ಆ ಕತೆಯನ್ನು ಕೇಳುತ್ತಿರುವಷ್ಟು ಹೊತ್ತು ಆ ಚಿಕ್ಕ ಮಗುವಿನ ಮನಸ್ಸು ಕಥೆಯ ಮೇಲೆ ಹೋಗಿ ಬಿಡುತ್ತದೆ. ಆಕೆಯು ಕತೆ ಹೇಳುತ್ತಿದ್ದರೆ ಆ ಮಗು ಊ.. ಊ.. ಎಂದು ಕೇಳುತ್ತಾ ಆ ಅನ್ನವನ್ನು ತಿಂದು ಬಿಡುತ್ತದೆ. ಮತ್ತೇ ಕತೆಯನ್ನು ನಿಲ್ಲಿಸಿದರೆ ಇನ್ನು ನಾನು ತಿನ್ನಲಾರೆ ಎನ್ನುತ್ತದೆ. ಅಂದರೆ ಅಲ್ಲಿ ತಿನ್ನುತ್ತಿರುವುದು ಶರೀರವಲ್ಲ, ಮನಸ್ಸು. ಹಾಗೆ ಶರೀರವಾಗಲಿ, ಇಂದ್ರಿಯಗಳಾಗಲೀ ಯಾವ ಕೆಲಸ ಮಾಡಿದರೂ ಕಾರಣ ಮನಸ್ಸೇ. ಅದಕ್ಕೆ ಆತ್ಮಕ್ಕೇನೂ ಸಂಬಂಧವಿಲ್ಲ.

ಹಾಗೆಯೇ ಅಪಘಾತವಾಗಿ ಕಾಲು ಮುರಿಯಿತು, ಆಸ್ಪತ್ರೆಗೆ ಸೇರಿಸಿದ್ದಾರೆ, ವೈದ್ಯರು ಕೋಣೆಯಲ್ಲಿ ಕಟ್ಟನ್ನು ಕಟ್ಟಿ ಮಲಗಿಸಿದ್ದಾರೆ. ಅವನು ಅಮ್ಮೋ! ಯಪ್ಪೋ! ಎಂದು ಅನ್ನುತ್ತಿರುತ್ತಾನೆ. ಹತ್ತಿರದವರು ಬಂದು ಹೇಗೆ ನಡೆಯಿತೋ ಎಂದರೆ ಆಗ ಯಾವುದೋ ಕಾರು ತಪ್ಪಾದ ದಿಕ್ಕಿನಲ್ಲಿ ವೇಗವಾಗಿ ಬಂದಿತು. ನಾನು ಪಕ್ಕಕ್ಕೆ ಹೋದರೂ ಬಂದು ಗುದ್ದಿ ಬಿಟ್ಟನು ಎಂದು ಹೇಳುತ್ತಾ ಇರುತ್ತಾನೆ.

ಹಾಗೆ ಎರಡು ನಿಮಿಷಗಳೋ, ಐದು ನಿಮಿಷಗಳೋ ಹಾಗೇ ಹೇಳುತ್ತಿರುವಷ್ಟು ಹೊತ್ತು ಮನಸ್ಸು ಹೇಳುವುದರ ಮೇಲೆ ಇರುತ್ತದೆಯಾದ್ದರಿಂದ ಆ ನೋವು ಅವನಿಗೆ ತಿಳಿಯದು. ಆದರೆ ಹೇಳುವುದು ಮುಗಿದೊಡನೆ ಮತ್ತೆ ಆ ಕಾಲಿನ ಮೇಲೆ ಕೈ ಹಾಕಿ ಅಮ್ಮೋ! ಯಪ್ಪೋ! ಎನ್ನುತ್ತಾನೆ.

ಆ ಸ್ವಲ್ಪ ಹೊತ್ತು ಏಕೆ ಅಮ್ಮೋ! ಯಪ್ಪೋ! ಎನ್ನಲಿಲ್ಲ? ಕಾರಣ ಮನಸ್ಸು ಹೇಳುವುದರ ಮೇಲೆ ಹೊರಳಿತಾದ್ದರಿಂದ. ಆದ್ದರಿಂದ ಅನುಭವಿಸುವುದು ಮನಸ್ಸೇ, ಎಲ್ಲಾ ಮಾಡಿಸುವುದು ಮನಸ್ಸೇ! ಅಲ್ಲಿ ಆತ್ಮಕ್ಕೆ ಏನು ಸಂಬಂಧವಿಲ್ಲ. ಆ ಕೋಳಿಗಳನ್ನು ತಿನ್ನೆಂದು, ಆ ಮೇಕೆಯನ್ನು ತಿನ್ನೆಂದು ಅವುಗಳನ್ನು ಸಾಯಿಸೆಂದು ಆತ್ಮ ಏನೂ ಹೇಳದು. ಮನಸ್ಸು ಮಾಡಿಸುತ್ತದೆ ಅಷ್ಟೇ! ಇವೆಲ್ಲ ಮನಸ್ಸು ಮಾಡುವ ಕೆಲಸಗಳು.

ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡು ಮಾನವನು ಈ ಪರಿಕರಗಳನ್ನೆಲ್ಲಾವನ್ನು ಕೆಲಸ ಮಾಡಿಸುತ್ತಿದ್ದಾನೆ, ಆದರೆ ವಿದ್ಯುಚ್ಛಕ್ತಿಗೆ ಏನೂ ಸಂಬಂಧವಿಲ್ಲ. ಫ್ಯಾನ್ ಹಾಕಿಕೊಳ್ಳಬೇಕೆಂದು ವಿದ್ಯುಚ್ಛಕ್ತಿ ಅಂದುಕೊಳ್ಳುವುದಿಲ್ಲ, ಏ.ಸಿ.ಯನ್ನು ಹಾಕಿಕೊಳ್ಳಬೇಕೆಂದು ವಿದ್ಯುಚ್ಛಕ್ತಿ ಅಂದುಕೊಳ್ಳದು. ಮಾನವನೇ ಅಂದು ಕೊಳ್ಳುತ್ತಾನೆ. ಆ ಸ್ವಿಚ್ಚನ್ನು ಹಾಕುತ್ತಾನೆ, ಆ ಏ.ಸಿ.ಯನ್ನು ಅನುಭವಿಸುತ್ತಿದ್ದಾನೆ. ಆ ಕೋಳಿಯನ್ನು ತಿನ್ನಬೇಕೆಂದು ಆತ್ಮ ಅಂದುಕೊಳ್ಳದು, ಮನಸ್ಸು ಅಂದುಕೊಳ್ಳುತ್ತದೆ, ತಿನ್ನುತ್ತಾನೆ. ಆ ಕರ್ಮ ಫಲವನ್ನು ಮತ್ತೇ ಅನುಭವಿಸುವುದು ಕೂಡಾ ಮನಸ್ಸೇ.

ತುಂಬಾ ಜನರು ಅಂದುಕೊಳ್ಳುತ್ತಾರೆ, ಆತ್ಮ ಇದ್ದರೇನೇ ಅಲ್ಲವೇ ಕೆಲಸಗಳೆಲ್ಲವೂ ನಡೆಯುತ್ತಿವೆ. ಮತ್ತೇ ಕಷ್ಟಗಳು ಆತ್ಮಕ್ಕೆ ಇರುವುದಿಲ್ಲವೆ? ಎಂದು ಆತ್ಮಕ್ಕೆ ಏಕೆ ಇರುತ್ತವೆ? ಆತ್ಮಕ್ಕೆ ಸಂಬಂಧವೇನು? ಆತ್ಮ ಶಕ್ತಿಯನ್ನು ಉಪಯೋಗಿಸಿ ಮನಸ್ಸು ಇವೆಲ್ಲವನ್ನು ಮಾಡಿಸುತ್ತದೆ, ಅನುಭವಿಸುತ್ತದೆ.

ಈ ತಪ್ಪುಗಳನ್ನು ಪಾಪಗಳನ್ನು ಮನಸ್ಸೇ ಮಾಡುತ್ತದೆ. ಆದ್ದರಿಂದ ಬರುವ ಕಷ್ಟಗಳನ್ನು ಮತ್ತೇ ಮನಸ್ಸೇ ಅನುಭವಿಸುತ್ತದೆ. ಆದ್ದರಿಂದ ಎಲ್ಲದಕ್ಕೂ ಕಾರಣ ಮನಸ್ಸೇ. ಉಪನಿಷತ್ತುಗಳಲ್ಲಿಯೂ ಕೂಡಾ ಇದನ್ನೇ ಹೇಳಲಾಗಿದೆ.

**ಮನುಷ್ಯಾಣಾಂ ಮನಯೇವಕಾರಣಂ... ಬಂಧ, ಮೋಕ್ಷಂ** ಎಂದು ಅಂದರೆ ಬಂಧವು ಎಂದರೆ ದುಃಖಕ್ಕೆ, ಮೋಕ್ಷವು ಅಂದರೆ ಆನಂದಕ್ಕೆ ಮನಸ್ಸೇ ಕಾರಣವೆಂದು ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಆತ್ಮಕ್ಕೇನೂ ಸಂಬಂಧವಿಲ್ಲ.

ಅದಕ್ಕೆ ಯೋಗಿಗಳು ಈ ಮನಸ್ಸೇ ಈ ಕೆಲಸಗಳನ್ನು ಮಾಡುವುದಕ್ಕೆ, ಈ ದುಃಖಗಳಿಗೆ ಕಾರಣವಾದ್ದರಿಂದ, ಆ ಮನಸ್ಸು ಮಲಿನವಾಗಿರುವುದರಿಂದಲೇ ಈ ಕೆಲಸಗಳನ್ನು ಮಾಡಿಸುತ್ತದೆಯಾದ್ದರಿಂದ ಮೊದಲು ಮನಸ್ಸನ್ನು ಶುದ್ಧಿ ಮಾಡಿಕೊಳ್ಳಿ ಎನ್ನುತ್ತಾರೆ. ಯಾವಾಗಾದರೆ ನೀವು ಮನಸ್ಸನ್ನು ಶುದ್ಧಿ ಮಾಡಿಕೊಳ್ಳುತ್ತಿರೋ ಇನ್ನು ಆ ತಪ್ಪಾದ ಕೆಲಸಗಳನ್ನು, ಸೃಷ್ಟಿ ವಿರುದ್ಧವಾದ ಕೆಲಸಗಳನ್ನು ಮಾಡುವುದಿಲ್ಲ, ಆಗ ಕಷ್ಟಗಳು ಬರುವುದಿಲ್ಲ.

ಈ ಮನಸ್ಸೇ ಇವೆಲ್ಲದಕ್ಕೂ ಕಾರಣವಾದ್ದರಿಂದ ಯೋಗಿಗಳು, ಋಷಿಗಳು ಮಾನವನಲ್ಲಿರುವ ಈ ಮನಸ್ಸಿನ ಪ್ರಭಾವವನ್ನು, ಪ್ರಾಮುಖ್ಯತೆಯನ್ನು ಕಡಿಮೆ ಮಾಡಿರಿ ಎನ್ನುತ್ತಾರೆ. ಪತ್ರೀಜಿಯವರೂ ಕೂಡಾ "ಶ್ವಾಸದ ಮೇಲೆ ಗಮನ" ವಿಟ್ಟು ಧ್ಯಾನ ಮಾಡಿದರೇನೇ ಮೆಲ್ಲ ಮೆಲ್ಲನೆ ನಿಮ್ಮ ಮನಸ್ಸೊಂದರ ಪ್ರಾಮುಖ್ಯತೆಯು ಕಡಿಮೆಯಾಗುತ್ತಾ ಇರುತ್ತದೆ ಎನ್ನುತ್ತಾರೆ. "ಶ್ವಾಸದ ಮೇಲೆ ಗಮನ"ವಿಟ್ಟು ಧ್ಯಾನ ಮಾಡುವುದರಿಂದ ಮೊದಲು ಮನಸ್ಸು ಚಂಚಲತ್ವದಿಂದ ನಿಶ್ಚಲತ್ವದೊಳಗೆ ಬರುತ್ತದೆ. ಇನ್ನೂ ಮಾಡುತ್ತಿದ್ದರೆ ನಿಶ್ಚಲವಾದ ಮನಸ್ಸು ನಿರ್ಮಲವಾಗುತ್ತದೆ ಅಂದರೆ ಶುದ್ಧಿಯಾಗುತ್ತದೆ. ಇನ್ನೂ ಬಿಡದೆ ಮಾಡಿದರೆ ತೀವ್ರವಾಗಿ ಮಾಡುತ್ತಾ ಇದ್ದರೆ ನಿರ್ಮಲವಾದ ಮನಸ್ಸು ಶೂನ್ಯವಾಗುತ್ತಾ ಇರುತ್ತದೆ, ಅಂದರೆ ಅದರ ಇರುವಿಕೆಯನ್ನು ಕಳೆದುಕೊಳ್ಳುತ್ತಾ ಇರುತ್ತದೆ.

ಯಾವ ಮನಸ್ಸಾದರೆ ಇಲ್ಲಿಯವರೆಗೆ ನಿನ್ನಿಂದ ಇಷ್ಟು ಕಷ್ಟಗಳನ್ನು ಮಾಡಿಸಿತೋ, ಅದು ಒಂದು ಹಂತಕ್ಕೆ ಬರುವುದರೊಳದಗೆ ಇನ್ನು ಅಲ್ಲಿ ಇರುವುದಿಲ್ಲ. ಆಗ ಅಲ್ಲಿರುವುದು ಆತ್ಮ, ಶರೀರವೇ. ಆಗ ಆ ಶರೀರವು ಆತ್ಮದಿಂದಲೇ ಕೆಲಸವನ್ನು ಮಾಡುತ್ತಾ ಇರುತ್ತದೆ. ಆತ್ಮ ಎಂದರೆ ಭಗವಂತನಾದ್ದರಿಂದ ಮಾಡಬಾರದ ಕೆಲಸಗಳೇನನ್ನು ಮಾಡನು. ಇನ್ನು ಅವರಿಗೆ ಕಷ್ಟಗಳು ಬರುವುದಿಲ್ಲ. ಅವರು ಹಾಗೆ ಆತ್ಮ ಸ್ಥಿತಿಯನ್ನು ಹೊಂದಿದ್ದಾರೆಯಾದ್ದರಿಂದ ಅವರು ಭೂಮಿಗೆ ಬರುವುದಿಲ್ಲ, ಅಂದರೆ ಜನ್ಮಗಳು ಇರುವುದಿಲ್ಲ.

ಹಾಗೆ ಮನಸ್ಸನ್ನು ಜಯಿಸಿದಂತಹ ಯೋಗಿಶ್ವರರೇ ಒಬ್ಬ ಜೀಸಸ್ ಆದರೂ ! ಕೃಷ್ಣನಾದರೂ ! ರಾಮನಾದರೂ !. ಜೀಸಸ್‌ನನ್ನು ಮೊಳೆಗಳಿಂದ ಹೊಳೆದರೂ, ಶಿಲುಬೆಗೆ ಹಾಕಿದರೂ ಆತನೇನೂ ಅಳಲಿಲ್ಲ, ಸಹಜವಾಗಿಯೇ ಇದ್ದನು, ಮಾತನಾಡಿದನು. ರಮಣ ಮಹರ್ಷಿಗೆ ಕ್ಯಾನ್ಸರ್ ಬಂದರೆ, ಅಸಲು ಅದನ್ನು ಹಿಡಿಸಿಕೊಳ್ಳಲಿಲ್ಲ, ಸಹಜವಾಗಿಯೆ ಮಾತನಾಡಿದನು, ಆತನ ಕೆಲಸಗಳನ್ನು ಆತನು ನೋಡಿಕೊಂಡನು. ಹೀಗೆ ಮನಸ್ಸನ್ನು ಜಯಿಸಿ ಶೂನ್ಯ ಮಾಡಿಕೊಂಡವರು ಮಾಧವರಾದರು.

ಆದ್ದರಿಂದ ಮನಸ್ಸನ್ನು ಶೂನ್ಯ ಮಾಡಬೇಕು ಅಂದರೆ "ಶ್ವಾಸದ ಮೇಲೆ ಗಮನ" ಧ್ಯಾನದಿಂದಲೇ ಸಾಧ್ಯವು. ಬಹಳ ಜನ ಗೈಡಿಂಗ್‌ಗಳು, ಸಂಗೀತಗಳನ್ನು ಇಟ್ಟುಕೊಂಡು ಮನಸ್ಸಿನ ಹತ್ತಿರ ನಿಂತು ಬಿಡುತ್ತಾರೆ. ಇನ್ನು ಅದೇನು ಶೂನ್ಯವಾಗುತ್ತದೆ? ಆತ್ಮದ ಬಳಿಗೆ ಸೇರಿದರೇನೇ ಮನಸ್ಸು ಶೂನ್ಯವಾಗಿ ಆತ್ಮವು ಉಳಿಯುತ್ತದೆ. ಮನಸ್ಸಿನ ಬಳಿ ನಿಂತು ಬಿಟ್ಟರೆ ಅವರು ಈ ಜನ್ಮವಲ್ಲ ಇನ್ನೊಂದು

100 ಜನ್ಮಗಳೆನ್ನಿತ್ತಿದರೂ ಮಾನವನಂತೆಯೇ ವರ್ತಿಸುತ್ತಾರೆ. ಆದ್ದರಿಂದ ನೆನಪಿಟ್ಟುಕೊಳ್ಳಿ, ಆತ್ಮ ಇದ್ದರೂ, ಆತ್ಮದಿಂದ ಈ ಕೆಲಸಗಳೆಲ್ಲಾ ನಡೆಯುತ್ತಿದ್ದರೂ ಆ ಕೆಲಸಗಳಿಗೆ, ಆತ್ಮಕ್ಕೆ ಏನೂ ಸಂಬಂಧವಿಲ್ಲ. ಇವೆಲ್ಲವನ್ನು ಮಾಡಿಸುವುದೆಲ್ಲಾ ಮನಸ್ಸೇ. ಆ ಕೆಲಸಗಳಿಂದ ಬರುವ ಕಷ್ಟಗಳು, ಬಾಧೆಗಳು, ಸಮಸ್ಯೆಗಳನ್ನು ಅನುಭವಿಸುವುದೂ ಕೂಡಾ ಮನಸ್ಸೇ. ಇದನ್ನು ಕೇಳಿದವರು ಮನಸ್ಸೊಂದರ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಮಾಧವನ ಲಕ್ಷಣಗಳನ್ನು, ಅಂದರೆ ದೈವದ ಲಕ್ಷಣಗಳನ್ನು ಸಂಪಾದಿಸಿಕೊಳ್ಳುತ್ತಾರೆ, ದೈವವೆಂದು ಕರೆಯುಲ್ಪಡುತ್ತಾರೆ.

## ಹಣಕ್ಕಿಂತಲೂ ಶ್ರೇಷ್ಠವಾದವುಗಳನ್ನು, ಬೆಲೆಯುಳ್ಳವನ್ನು ಮಾನವನಿಗೆ ಕೊಡಲ್ಪಟ್ಟಿವೆ. ಅವುಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು.

ಹಣಕ್ಕಿಂತಲೂ ಶ್ರೇಷ್ಠವಾದದ್ದು, ಬೆಲೆಯುಳ್ಳದ್ದು ಮುಖ್ಯವಾಗಿ ಸಮಯವು ಅಷ್ಟೇ ಅಲ್ಲ, ವಾಕ್ಕು ಅಂದರೆ ಮಾತನಾಡುವ ಶಕ್ತಿ, ಅದರೊಂದಿಗೆ ಕೆಲಸ ಮಾಡುವ ಶಕ್ತಿ, ನೋಡುವ ಶಕ್ತಿ, ಕೇಳಿಸಿಕೊಳ್ಳುವ ಶಕ್ತಿ. ಇವುಗಳ ಮೌಲ್ಯವನ್ನು ಮಾನವರು ಗುರುತಿಸುತ್ತಿಲ್ಲ, ಶ್ರೇಷ್ಠತೆಯನ್ನು ತಿಳಿದುಕೊಳ್ಳುತ್ತಿಲ್ಲ. ಎಷ್ಟು ಹೊತ್ತು ಹಣವೇ ಶ್ರೇಷ್ಠವಾದದ್ದು ಎಂದುಕೊಳ್ಳುತ್ತಾರೆ. ಆದರೆ ಇವುಗಳನ್ನು ಸರಿಯಾದ ವಿಧದಲ್ಲಿ ಬಳಸಿದರೆ, ಸಾಮಾನ್ಯ ಮಾನವನೂ ಕೂಡಾ ಶ್ರೇಷ್ಠನಾದ ಮಾಧವನಾಗಿ ಬೆಳೆಯ ಬಲ್ಲನು. ಆದರೆ ಮಾನವರು ಇವುಗಳನ್ನು ಮೂರು ರೀತಿಯಲ್ಲಿ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಕೆಲವರು ಸದ್ವಿನಿಯೋಗ ಮಾಡುತ್ತಿದ್ದಾರೆ, ಕೆಲವರು ದುರ್ವಿನಿಯೋಗ ಮಾಡುತ್ತಿದ್ದಾರೆ. ಇನ್ನು ಕೆಲವರು ದುರ್ವಿನಿಯೋಗ ಮಾಡುತ್ತಿದ್ದಾರೆ. ಯಾರು ಮಾಡಿರುವುದಕ್ಕೆ ತಕ್ಕ ಫಲವನ್ನು ಅವರು ಹೊಂದುತ್ತಿದ್ದಾರೆ. ಸದ್ವಿನಿಯೋಗ ಮಾಡಿದರೆ ಜೀವನದಲ್ಲಿ ಒಳ್ಳೆಯ ಫಲಗಳನ್ನು ಹೊಂದುತ್ತಾರೆ, ಜೀವನದಲ್ಲಿ ಆಶ್ಚರ್ಯಗೊಳಿಸುವ ವಿಜಯಗಳನ್ನು ಸಾಧಿಸುತ್ತಾರೆ. ಕೊನೆಗೆ ಸೃಷ್ಟಿಯಲ್ಲಿಯೇ ಶ್ರೇಷ್ಠನಾದ ದೈವವಾಗಿ ಬದಲಾಗುತ್ತಾರೆ.

ಹಾಗೆಯೇ ನಿರ್ವಿನಿಯೋಗ ಮಾಡಿದರೆ ಕೊಟ್ಟವುಗಳನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ, ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ. ದುರ್ವಿನಿಯೋಗ ಮಾಡಿದರೆ ನಷ್ಟ ಹೊಂದುತ್ತಾರೆ, ಜೀವನವನ್ನು ಕಷ್ಟಗಳ ಪಾಲು ಮಾಡಿಕೊಳ್ಳುತ್ತಾರೆ, ಇರುವಂತವುಗಳನ್ನು ಕೂಡಾ ಕಳೆದುಕೊಳ್ಳುತ್ತಾರೆ.

# ದುಃಖದಿಂದ ಲಾಭಗಳು

"ಬಂಡೆಯ ಪೆಟ್ಟುಗಳನ್ನು ತಿಂದರೇನೆ ಬಟ್ಟೆಯಲ್ಲಿನ ಕೊಳೆಯು ಹೋಗಿ ಬಟ್ಟೆ ಶುಭ್ರವಾಗುತ್ತದೆ. ಹಾಗೆಯೇ ಉಳಿಯ ಪೆಟ್ಟುಗಳನ್ನು ತಿಂದರೇನೇ ಕಲ್ಲು ಅಂದವಾದ ಶಿಲ್ಪವಾಗಿ ಬದಲಾಗುತ್ತದೆ".

"ಹಾಗೆಯೇ ಮಾನವನು ದುಃಖ ಅಂದರೆ ಕಷ್ಟಗಳನ್ನು ಪಟ್ಟರೇನೇ ಮಾಧವನಾಗುತ್ತೇನೆ" ಹಾಗೆ ಯಾವ ಮಾನವನನ್ನು ನೋಡಿದರೂ ಅವರು ಜೀವನದಲ್ಲಿ ಎಷ್ಟೋ ಕಷ್ಟಗಳನ್ನು ಅನುಭವಿಸಿದವರೇ, ಕಷ್ಟಗಳ್ನು ಪಟ್ಟವರೇ, ಗಮನಿಸಿದರೆ ಲೋಕದಲ್ಲಿ ಕಷ್ಟಪಟ್ಟವರೇ ಶ್ರೇಷ್ಠರಾಗಿ ಬೆಳೆದಿದ್ದಾರೆ.

ಸಿನಿಮಾಗಳಲ್ಲಿ ನೋಡಿ, ಮೊದಲು ಎಷ್ಟೋ ಕಷ್ಟಪಟ್ಟು ಸಾಧನೆಗಳನ್ನು ಮಾಡಿದರೇನೇ ಅವರು ದೊಡ್ಡ ಹೀರೋಗಳಾಗಿ ತಯಾರಾದರೂ, ರಾಜಕೀಯದಲ್ಲಿ ನೋಡಿದರೂ, ವಿದ್ಯೆಯಲ್ಲಿ ನೋಡಿದರೂ ಚೆನ್ನಾಗಿ ಕಷ್ಟಪಟ್ಟವರೆ ದೊಡ್ಡವರಾಗಿ ಬೆಳೆದಿದ್ದಾರೆ. ಯಾವ ಕಷ್ಟವನ್ನು ಪಡದವರು ಜೀವನದಲ್ಲಿ ಹಾಗೇ ಇದ್ದು ಬಿಟ್ಟಿದ್ದಾರೆ. ಆದ್ದರಿಂದ ಯಾವ ವಿದ್ಯೆಯಲ್ಲಿ ನೋಡಿದರೂ ಕಷ್ಟಪಟ್ಟವರೇ ರಾರಾಜಿಸುತ್ತಿದ್ದಾರೆ, ಒಳ್ಳೆಯ ಹೆಸರನ್ನು ಪಡೆಯುತ್ತಿದ್ದಾರೆ. ಅದಕ್ಕೆ ದೊಡ್ಡವರು ಕಷ್ಟೇ ಫಲಿ ಎಂದಿದ್ದಾರೆ. ಆದ್ದರಿಂದ ದುಃಖವು ಲಾಭವೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಕಷ್ಟಗಳಲ್ಲಿಯೇ ಅಂದರೆ ದುಃಖದಲ್ಲಿಯೇ ಲಾಭವಿದೆ ಎಂದು ತಿಳಿದುಕೊಳ್ಳಬೇಕು.

ಪತ್ರೀಜಿಯವರೂ ಕೂಡಾಹೇಳುತ್ತಿರುತ್ತಾರೆ, ನಾನು ಎಷ್ಟೋ ಜನ್ಮಗಳಲ್ಲಿ ಕಷ್ಟಪಟ್ಟು ಧ್ಯಾನ ಸಾಧನೆ ಮಾಡಿದ್ದರಿಂದಲೇ ಈಗ ಈ ಸ್ಥಿತಿಗೆ ಬೆಳೆದು ಇಷ್ಟು ಜನರಿಗೆ ದಾರಿ ತೋರಿಸಬಲ್ಲವನಾಗಿದ್ದೇನೆ ಎಂದರು.

**ದುಃಖದಿಂದ ಆಗುವ ಕೆಲವು ಲಾಭಗಳ ಕುರಿತು ತಿಳಿಯೋಣ.**

**1**. ದುಃಖದಿಂದ ಕಷ್ಟಗಳನ್ನು ಸಹಿಸಿಕೊಳ್ಳುವ ಶಕ್ತಿ ಬೆಳೆಯುತ್ತದೆ.

**2**. ದುಃಖದಿಂದ ಗರ್ವ, ಅಹಂಕಾರಗಳು ತಗ್ಗುತ್ತವೆ.

**3**. ದುಃಖದಿಂದ ನಿನ್ನ ಶಕ್ತಿ ಸಾಮರ್ಥ್ಯಗಳು ಬೆಳೆಯುವುದೇ ಅಲ್ಲ, ನಿರೂಪಿಸಿಕೊಳ್ಳುವ ಅವಕಾಶವು ಒದಗುತ್ತದೆ.

**4**. ದುಃಖದಿಂದ ಜೀವನದಲ್ಲಿ ಅನುಭವಗಳನ್ನು ಹೊಂದುತ್ತೀರಿ.

**5**. ದುಃಖದಿಂದ ಅನುಭವವು ಬೆಳೆಯುತ್ತದೆ. ಅಂದರೆ ಮಾಡಿದ ಪಾಪಗಳು ದುಃಖದ ರೂಪದಲ್ಲಿ ಅನುಭವಿಸುತ್ತಾ ಅನುಭವಗಳನ್ನು ಹೊಂದುತ್ತೀರಿ.

ಅದಕ್ಕೆ ರಾಧಾಸ್ವಾಮಿಯವರು ಏನು ಹೇಳಿದ್ದಾರೆಂದರೆ, **"ಯಾವ ಯಾವ ಕರ್ಮಗಳನ್ನು ಮಾಡುವೆಯೋ ಆಯಾ ಅನುಭವಗಳನ್ನು ಹೊಂದಬೇಕಾಗುತ್ತದೆ"** ಎಂದಿದ್ದಾರೆ.

ಭಿಕ್ಷುಕರು, ಮುದುಕರು, ಕುಷ್ಠರೋಗಿಗಳು, ಕುರುಡರು, ಅಂಗವಿಕಲರು, ಮಾನಸಿಕ ಅಸ್ವಸ್ಥರು ಭೂಮಿಗೆ ಭಾರವಲ್ಲ, ಅನುಭವಗಳನ್ನು ಹೊಂದಿ ಭವಿಷ್ಯತ್ ಜನ್ಮಗಳಲ್ಲಿ ಸೇವೆಗಳನ್ನು ಮಾಡುತ್ತಾರೆ.

**6**. ದುಃಖದಿಂದ ಅನುಭವಗಳನ್ನು ಹೊಂದಿ ಪಾಠಗಳನ್ನು ಕಲಿತುಕೊಳ್ಳುತ್ತಾರೆ. ಜೀವನವನ್ನು ಸರಿ ಮಾಡಿಕೊಳ್ಳುತ್ತಾರೆ. ಪಾಠಗಳನ್ನು ಕಲಿತಂತೆಲ್ಲಾ ಅನುಭವ ಜ್ಞಾನವು ಬೆಳೆಯುತ್ತದೆ. ಇನ್ನು ಆ ರೀತಿಯಾದ ಪಾಪಕರ್ಮಗಳನ್ನು ಮಾಡುವುದಿಲ್ಲ. ಆದ್ದರಿಂದ ಈ ಅನುಭವ ಜ್ಞಾನವು ಹೆಚ್ಚಿದಂತೆಲ್ಲಾ ಕರ್ಮಗಳು ದಗ್ಧವಾಗುತ್ತವೆ. ಕರ್ಮಗಳು ಕಡಿಮೆಯಾದಂತೆಲ್ಲಾ ದುಃಖವು ಕಡಿಮೆಯಾಗುತ್ತದೆ, ಆನಂದವು ಬೆಳೆಯುತ್ತದೆ. ಆತ್ಮದ ಉನ್ನತಿಯಾಗುತ್ತದೆ, ಆದ್ದರಿಂದ ದುಃಖ ಉಂಟಾದರೇನೇ ದುಃಖವು ಹೋಗುತ್ತದೆಂದು ತಿಳಿದುಕೊಳ್ಳಬೇಕು. ಅದಕ್ಕೆ ಶ್ರೀ ಕೃಷ್ಣನು ಕರ್ಮಗಳನ್ನು ಮಾಡುವುದನ್ನು ಬಿಡಬೇಡ ಎಂದಿದ್ದಾರೆ.

**ಶ್ಲೋಕ : ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನಾ**
**ಮಾ ಕರ್ಮಫಲ ಹೇತುರ್ಭುರ್ಮಾತೇ ಸಙ್ಗೋಸ್ತ್ವ ಕರ್ಮಣಿ (ಭ.ಗೀ 2–47)**

**ತಾತ್ಪರ್ಯ:** ಅರ್ಜುನಾ ನಿನಗೆ ಕರ್ಮ ಮಾಡುವುದಕ್ಕೆ ಅಷ್ಟೇ ಅಧಿಕಾರವಿದೆ. ಆದರೆ ಕರ್ಮಫಲವನ್ನು ಆಶಿಸುವುದಕ್ಕೆ ನಿನಗೆ ಅಧಿಕಾರವಿಲ್ಲ. ಕರ್ಮಫಲಕ್ಕೆ ನೀನು ಕಾರಣೀಭೂತನಾಗಬಾರದು ಮತ್ತು ಕರ್ಮಗಳನ್ನು ಮಾಡದಂತೆ ಇರಲೂ ಕೂಡಾ ಆಸಕ್ತಿಯನ್ನು ತೋರಿಸಬಾರದು.

**7**. ದುಃಖದಿಂದ ಭಗವಂತನು ನೆನಪಿಗೆ ಬರುತ್ತಾನೆ. ಮೊದಲು ದುಃಖವನ್ನು ತೊಲಗಿಸೆಂದು ಆರಾಧನೆಗಳನ್ನು ಮಾಡುತ್ತಾರೆ. ಆಧ್ಯಾತ್ಮಿಕ ಗ್ರಂಥಗಳ ಪಾರಾಯಾಣ ಮಾಡುತ್ತಾರೆ. ಕಾಣಿಕೆಗಳನ್ನು ಕೊಡುತ್ತಾರೆ. ಹರಕೆಗಳನ್ನು ಸಲ್ಲಿಸಿಕೊಳ್ಳುತ್ತಾರೆ.

ಇಷ್ಟು ಮಾಡಿದರೂ ದುಃಖವು ಹೋಗದೇ ಇದ್ದಾಗ ಏನು? ನಾನು ಎಷ್ಟು ಮಾಡಿದರೂ ದೇವರು ನನ್ನನ್ನು ಹಿಡಿಸಿಕೊಳ್ಳುತ್ತಿಲ್ಲ? ಏಕೆ ಹಿಡಿಸಿಕೊಳ್ಳುತ್ತಿಲ್ಲ? ಎಂದುಕೊಳ್ಳುತ್ತಾ ನಿಜವಾಗಿಯೂ ನಾನು ಮಾಡಿದ ತಪ್ಪೇನು? ಪಾಪವೇನು ಎಂದು ಆಲೋಚಿಸುತ್ತಾರೆ. ನಿಧಾನವಾಗಿ ತಾವು ಮಾಡಿದ ತಪ್ಪುಗಳನ್ನು ತಿಳಿದುಕೊಳ್ಳುತ್ತಾರೆ. ಆತನು ಹಾಗೆ ಸಾಕ್ಷಿಭೂತವಾಗಿ ನೋಡುತ್ತಿದ್ದರೆ, ಅಂತಹ ತಪ್ಪುಗಳನ್ನು ಇನ್ನು ಮಾಡುವುದಿಲ್ಲವೆಂದು ಹೇಳಿಕೊಳ್ಳುತ್ತಾರೆ. ತಪ್ಪುಗಳು ಮಾಡುವುದನ್ನು ಬಿಡುತ್ತಾರೆ. ಹಾಗೆ ತಮಗೆ ತಾವೇ ಪರಿವರ್ತನೆಯನ್ನು ಹೊಂದುತ್ತಾರೆ. ಹಾಗೆ ದುಃಖದಿಂದ ತನ್ನಲ್ಲಿ ತಾನೇ ಅಂತರ್ಮಥನಪಡುತ್ತಾನೆ. ನಿಜವಾಗಿಯೂ ನಾನೇನು ತಪ್ಪುಗಳನ್ನು ಮಾಡಿದೆನು? ಯಾವ ಪಾಪಗಳನ್ನು ಮಾಡಿದೆನು? ನಾನು ಯಾರಿಗೆ ನಷ್ಟವನ್ನುಂಟು ಮಾಡಿದೆನು? ಎಂದು

ಆತ್ಮ ಪರಿಶೀಲನೆಯನ್ನು ಮಾಡಿಕೊಂಡು, ತನ್ನ ತಪ್ಪುಗಳನ್ನು ತಿಳಿದುಕೊಂಡು ಅಲ್ಲಿಂದ ತಪ್ಪುಗಳನ್ನು ಮಾಡದಂತೆ ಎಚ್ಚರವಹಿಸುತ್ತಾರೆ. ತನಗೆ ತಿಳಿಯದಂತೆಯೇ ತನ್ನಲ್ಲಿ ಎಷ್ಟೋ ಬದಲಾವಣೆಗಳನ್ನು ತಂದುಕೊಳ್ಳುತ್ತಾನೆ, ಇದೆಲ್ಲವು ದುಃಖದಿಂದಲೇ ನಡೆಯುತ್ತದೆ.

**8**. ಅಷ್ಟೇ ಅಲ್ಲ ಎಷ್ಟೋ ಜನ ಗುರುಗಳನ್ನು, ದೊಡ್ಡವರನ್ನು ಭೇಟಿಯಾಗುತ್ತಾರೆ. ಅವರ ಸಂದೇಶಗಳನ್ನು ಕೇಳುತ್ತಿರುತ್ತಾರೆ, ಅವರ ಮೂಲಕ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ನಿಧಾನವಾಗಿ ಭಗವಂತನ ಕುರಿತು ತಿಳಿದುಕೊಳ್ಳಬಲ್ಲವರಾಗುತ್ತಾರೆ. ಭಗವಂತನು ಯಾರು? ಎಲ್ಲಿರುತ್ತಾನೆ? ಎಂಬುದನ್ನು ತಿಳಿದುಕೊಂಡು, ಭಗವಂತನನ್ನು ಹೊಂದುವ ಮಾರ್ಗವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ.

**9**. ಹಾಗೆ ದುಃಖವು ಹೋಗುವುದಕ್ಕೆ ಅನೇಕ ರೀತಿಯ ಪ್ರಯತ್ನಗಳನ್ನು ಮಾಡುತ್ತಾ ಕೊನೆಗೆ ಧ್ಯಾನ ಮಾರ್ಗದಲ್ಲಿ ಬರುತ್ತಾನೆ. ಅಲ್ಲಿ ತಿಳಿದುಕೊಳ್ಳುತ್ತಾನೆ. ವಿಗ್ರಹವು ದೇವರಲ್ಲ, ಆತ್ಮನೇ ದೇವರೆಂದು. ಆತನು ತನ್ನ ದೇಹದಲ್ಲಿಯೇ ಇದ್ದಾನೆಂದು ತಿಳಿದುಕೊಳ್ಳುತ್ತಾರೆ.

**10**. ಕುಟೀರದಲ್ಲಿ ಹೋದ ಸೂಜಿಯನ್ನು ಹೊರಗೆ ಹುಡುಕಿದರೆ ಹೇಗೆ ದೊರಕದೋ, ಹಾಗೆ ತನ್ನಲ್ಲಿರುವ ದೈವವನ್ನು ಹೊರಗೆ ಹುಡುಕಿದರೆ ದೊರಕದೆಂದು ಬುದ್ಧನಂತವರು ಹೇಳಿದ ವಿಷಯಗಳನ್ನು ತಿಳಿದುಕೊಳ್ಳುತ್ತಾರೆ. ಹಾಗೆಯೇ ವೇಮನನೂ ಕೂಡಾ ಹೇಳಿದ್ದಾರೆ.

**ತನಲೋ ಸರ್ವಂಬುಂಡಗಾ ತನಲೋಪಲ ವೆದಕ ಲೇಕ**
**ಧರ ವೆತಿಕೆಡಿ ಈ ತನುವುಲ ಮೋಸೆಡಿ**
**ಎದ್ದುಲ ಮನಮಂಬು ತೆಲುಪಗ ವಶಮೇ**
**ವಿಶ್ವದಾಭಿರಾಮ ವಿನುರ ವೇಮ.**

**ತಾತ್ಪರ್ಯ:** ತನ್ನಲ್ಲಿಯೇ ಸರ್ವವು, ಸಮಸ್ತವು ಇರುವಾಗ ತನ್ನೊಳಗೇ ಹುಡುಕದೇ ಭೂಮಿಯನ್ನೆಲ್ಲಾ ಹುಡುಕುವ ಈ ಶರೀರಗಳನ್ನು ಹೊರುವ ಎತ್ತುಗಳ ಕುರಿತು ಯಾರು ಹೇಳಬಲ್ಲರು? ಎಂದು ವೇಮನರು ಹೇಳಿದ್ದಾರೆ.

**11**. ಭಗವಂತನನ್ನು ಹೊಂದಬೇಕೆಂದರೆ ಧ್ಯಾನವನ್ನು ಮಾಡಬೇಕೆಂದು ತಿಳಿದುಕೊಂಡು ಧ್ಯಾನವನ್ನು ಆರಂಭಿಸುತ್ತಾನೆ. ಕೊನೆಗೆ ತೀವ್ರ ಸಾಧನೆಯನ್ನು ಮಾಡುವುದರಿಂದ ದೇವರನ್ನು ಹೊಂದಿ ಸಮಸ್ತ ದುಃಖಗಳಿಂದ ಹೊರ ಬೀಳುತ್ತಾನೆ. ಆದ್ದರಿಂದ ದುಃಖವು ಲಾಭವೇ ಹೊರತು ನಷ್ಟವಲ್ಲ.

**12**. ಅದಕ್ಕೆ ಕುಂತಿ ಯಾವಾಗಲೂ ದುಃಖದಲ್ಲಿರುವಂತೆ ನೋಡು ಎಂದು ಶ್ರೀಕೃಷ್ಣನಿಗೆ ಹೇಳಿದಳು. ಆಗಲೇ ನೀನು ನಮ್ಮ ಪಾಂಡವರ ಬಳಿ ಯಾವಾಗಲೂ ಇರುತ್ತೀಯ ಎಂದಳು.

**13**. ಅಷ್ಟೇ ಅಲ್ಲ ದುಃಖದಿಂದ ಮತ್ತೊಂದು ಸತ್ಯವನ್ನು ತಿಳಿದುಕೊಳ್ಳುತ್ತಾನೆ. ದೇವರು

ಅಂದರೆ ಆತ್ಮ ಯಾರೋ ಅಲ್ಲ, ನಾನೇ ಎಂದು. ತಾನೇ ಎಂದು. "ಅಹಂಬ್ರಹ್ಮಾಸ್ಮಿ" ಎಂದು ತಿಳಿದುಕೊಳ್ಳುತ್ತಾನೆ. ಇದೆಲ್ಲವೂ ದುಃಖದಿಂದ ಬಂದ ಲಾಭವೇ.

**14**. ನಿಜವಾಗಿಯೂ ಭೂಮಿಗೆ ಬಂದಿರುವುದೇ ಈ ಲಾಭಗಳೆಲ್ಲವನ್ನು ಹೊಂದಲು.

15. ಹಾಗೆ ದುಃಖದಿಂದ ತಾವು ಆತ್ಮವೆಂದು ತಿಳಿದುಕೊಳ್ಳುವುದೇ ಅಲ್ಲದೆ, ತಾವು ಮೇಲಿನ ಲೋಕಗಳಿಂದ ಬಂದ ಆತ್ಮಗಳೆಂದು ತಿಳಿದುಕೊಳ್ಳುತ್ತಾರೆ. ಯಾವುದಕ್ಕಾಗಿ? ಆತ್ಮದ ಉನ್ನತಿಗಾಗಿ, ಆತ್ಮವು ಉನ್ನತ ಲೋಕಗಳನ್ನು ಸೇರಿಕೊಳ್ಳುವುದಕ್ಕೆ ಎಂದು ತಿಳಿದುಕೊಳ್ಳುತ್ತಾರೆ.

**16**. ಅಷ್ಟೇ ಅಲ್ಲ, ಜೀವನದಲ್ಲಿ ಆಗುವ ಅಪಜಯಗಳಿಂದ ಉಂಟಾಗುವ ದುಃಖವು ತನ್ನ ಅಂದರೆ ಆತ್ಮದ ಉನ್ನತಿಗೆ ಉಪಯೋಗವಾಗುತ್ತದೆಂದು ತಿಳಿದುಕೊಳ್ಳುತ್ತಾರೆ. ಅಷ್ಟೇ ಅಲ್ಲ, ಕಷ್ಟಗಳಿಂದ ಅನುಭವಗಳನ್ನು ಹೊಂದುತ್ತೇವೆ ಎಂದು, ಅನುಭವಗಳಿಂದ ಪಾಠಗಳನ್ನು ಕಲಿಯುತ್ತೇವೆಂದು ತಿಳಿದುಕೊಳ್ಳುತ್ತಾರೆ. ಅಂತಹ ಜ್ಞಾನವನ್ನು ಅನುಭವದ ಜ್ಞಾನವೆನ್ನುತ್ತಾರೆ. ಅಂತಹ ಜ್ಞಾನದಿಂದ ಕರ್ಮಗಳು ದಗ್ಧವಾಗುತ್ತವೆ. ಕಷ್ಟಗಳು ಹೋಗುತ್ತವೆ. ಇವೆಲ್ಲವು ದುಃಖದಿಂದ ಉಂಟಾದ ಲಾಭವೇ. ಅದಕ್ಕೆ ಪತ್ರೀಜಿ ಗತವು ಅರಿವಾದರೆ ಲಯವಾಗುತ್ತದೆ ಎನ್ನುತ್ತಾರೆ. ಅಷ್ಟೇ ಅಲ್ಲ ಜ್ಞಾನದಿಂದ ಆತ್ಮವು ಉನ್ನತಗೊಳ್ಳುತ್ತದೆ. ಉನ್ನತ ಲೋಕಗಳನ್ನು ಸೇರಿಕೊಳ್ಳುತ್ತಾರೆ. ಹಾಗೆ ಆತ್ಮವು ಉನ್ನತಗೊಳ್ಳುವುದರಿಂದ ಜೀವನ ಲಕ್ಷ್ಯವನ್ನು ಸಾಧಿಸುತ್ತಾರೆ. ಆದ್ದರಿಂದ ಶಾಶ್ವತವಾಗಿ ದುಃಖವಿಲ್ಲದ ಸ್ಥಿತಿಗೆ ಸೇರುತ್ತಾರೆ. ಅಷ್ಟೇ ಅಲ್ಲ ಈ ಸ್ಥಿತಿ ಬರುವುದಕ್ಕೆ ಕಷ್ಟಪಟ್ಟು ಧ್ಯಾನವನ್ನು ಮಾಡುತ್ತಾರೆ. ಹಾಗೆ ಇಷ್ಟು ರೀತಿಯಲ್ಲಿ ಕಷ್ಟಪಟ್ಟರೆ ಹೊರತು ಕಷ್ಟಗಳಿಂದ ಹೊರಬರಲಾರರು. ಅದಕ್ಕೇ "ಕಷ್ಟೇ ಫಲಿ" ಎಂದಿದ್ದಾರೆ.

**17**. ಆದ್ದರಿಂದ ಜೀವನದಲ್ಲಿ ಕಷ್ಟಪಟ್ಟರೇನೆ, ಕಷ್ಟಗಳಿಂದ ಹೊರಬರಲಾರೆವು. ಕಷ್ಟಗಳೆನ್ನುವಂತವು ಕಷ್ಟಗಳಿಲ್ಲದಂತೆ ಮಾಡಿಕೊಳ್ಳುವುದಕ್ಕೇ! ಆದ್ದರಿಂದ ದುಃಖವೆನ್ನುವುದು ನಮ್ಮ ಒಳ್ಳೆಯದಕ್ಕೇ! ಲಾಭಕ್ಕಾಗಿಯೇ ಎಂದು ತಿಳಿದುಕೊಳ್ಳಬೇಕು.

**18**. ಈ ವಿಷಯವನ್ನೇ ಮುಂಡಕೋಪನಿಷತ್ತಿನಲ್ಲಿ ಹೇಳಲಾಗಿದೆ.

**"ದ್ವಾಸುಪರ್ಣಾ ಸಯೂಜಾ ಸಖಾಯಾ**
**ಸಮಾನಂ ವೃಕ್ಷಂ ಪರಿಷ ಸ್ವಜಾತೇ**
**ತಯೋರಣ್ಯಂ ಪಿಪ್ಪಲಂ ಸ್ವಾದ್ವಕ್ತಿ**
**ಅನಷ್ಟಿನನ್ ಅನ್ಯೋ ಅಭಿಚಾಗತ್ಯತಿ"**

**ತಾತ್ಪರ್ಯ:** ಒಂದು ಮರದ ಮೇಲಿನ ಕೊಂಬೆಯ ಮೇಲೆ ಒಂದು ಪಕ್ಷಿ, ಕೆಳಗಿನ ಕೊಂಬೆಯ ಮೇಲೆ ಇನ್ನೊಂದು ಪಕ್ಷಿ ಇವೆ. ಎರಡೂ ಒಂದೇ ರೀತಿಯಾಗಿವೆ. ಆದರೆ ಮೇಲಿನ ಪಕ್ಷಿ ಪ್ರಶಾಂತವಾಗಿದೆ.

ಕೆಳಗಿನ ಪಕ್ಷಿ ವಿಷದ ಹಣ್ಣುಗಳನ್ನು ತಿಂದಾಗ ದುಃಖಪಡುತ್ತಾ ಮೇಲೆ

ಹೋಗುತ್ತಿರುತ್ತದೆ. ಮಧುರ ಫಲಗಳನ್ನು ತಿಂದಾಗ ಕೆಳಗೆ ನೋಡುತ್ತದೆ. ಹಾಗೆ ವಿಷದ ಫಲಗಳನ್ನು ತಿನ್ನುತ್ತಾ ಮೇಲೆ ಮೇಲಕ್ಕೆ ಹೋಗುತ್ತಾ ಆ ಮೇಲಿನ ಪಕ್ಷಿಯನ್ನು ಸೇರಿಕೊಳ್ಳುತ್ತದೆ. ಎರಡೂ ಒಂದೇ ಎಂದು ತಿಳಿದುಕೊಳ್ಳುತ್ತದೆ. ಇಲ್ಲಿ ಮೇಲಿನ ಪಕ್ಷಿ ಅಂದರೆ ಪೂರ್ಣಾತ್ಮ. ಕೆಳಗಿನ ಪಕ್ಷಿ ಅಂದರೆ ಪೂರ್ಣಾತ್ಮನಿಂದ ಬಿಡುಗಡೆಯಾದ ಅಂಶಾತ್ಮ. ಈ ಅಂಶಾತ್ಮ ಭೂಮಿಗೆ ಬಂದು, ಶರೀರವನ್ನು ತೆಗೆದುಕೊಂಡು ಜೀವಾತ್ಮವಾಯಿತು. ಅಂಶಾತ್ಮ ಕಷ್ಟಗಳನ್ನು ಸುಖಗಳನ್ನು ಅನುಭವಿಸುತ್ತಾ ಇರುತ್ತದೆ. ಸುಖಗಳನ್ನು ಅನುಭವಿಸುವಾಗ ಚೆನ್ನಾಗಿಯೇ ಇರುತ್ತದೆ. ಇದೆ. ಆದರೆ, ಕಷ್ಟಗಳನ್ನು ಅನುಭವಿಸಿದಾಗ ಎಷ್ಟೋ ಪಾಠಗಳನ್ನು ಕಲಿತುಕೊಳ್ಳುತ್ತದೆ. ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತದೆ. ಹಾಗೆ, ಹಾಗೆ ಮೇಲಿನ ಲೋಕಗಳಲ್ಲಿ ಮೇಲೆರುತ್ತಾ ಹೋಗುತ್ತದೆ. ಕೊನೆಗೆ ಪೂರ್ಣಾತ್ಮನನ್ನು ಸೇರಿಕೊಂಡು ಅದು ಬೇರೆ, ನಾನು ಬೇರೆ ಅಲ್ಲ, ಇಬ್ಬರು ಒಂದೇ ಎಂದು ತಿಳಿದುಕೊಂಡು ಮೋಕ್ಷವನ್ನು ಹೊಂದುತ್ತದೆ. ಹಾಗೆ ಜೀವಾತ್ಮ ದುಃಖವನ್ನು ಹೊಂದುವುದರ ಮೂಲಕ ದುಃಖವಿಲ್ಲದ ಸ್ಥಿತಿಗೆ ಸೇರಿಕೊಳ್ಳುತ್ತದೆ.

**19**. ಆದ್ದರಿಂದ ಅಪಜಯಗಳಿರುವವನು ನಷ್ಟ ಹೋದಂತೆ ಅಲ್ಲ, ಕಡಿಮೆಯೂ ಅಲ್ಲ ಯಶಸ್ಸನ್ನು ಹೊಂದಿದವನು ಲಾಭವನ್ನು ಹೊಂದಿದಂತೆ ಅಲ್ಲ, ಹೆಚ್ಚೂ ಅಲ್ಲ.

**20**. ಅದಕ್ಕೆ ಅನ್ನುತ್ತಾರೆ "IF THERE IS NO PAIN, THERE IS NO GAIN" ನೋವುಗಳಿಲ್ಲದೆ ಹೆರಿಗೆ ಆಗುವುದಿಲ್ಲವಲ್ಲ? ಹಾಗೆಯೇ ಕಷ್ಟಗಳನ್ನು ಪಡೆದೇ ಆತ್ಮದ ಪುರೋಗತಿ ಇರದು. ಅದಕ್ಕೆ ಅನ್ನುತ್ತಾರೆ, ಕಷ್ಟಗಳನ್ನು ಅನುಭವಿಸಿದರೇನೇ ಕಷ್ಟಗಳು ಇಲ್ಲದಂತೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ಯಾವ ರೀತಿಯಿಂದ ನೋಡಿದರೂ ದುಃಖವು ಲಾಭವೇ!.

**21**. ಅದಕ್ಕೆ ಆತ್ಮಕ್ಕೆ ಅಂದರೆ ನಮಗೆ ಕಷ್ಟಗಳಿಂದ ಪುರೋಗಮನವೇ ಹೊರತು ತಿರೋಗಮನವು ಇರುವುದಿಲ್ಲ ಎಂದಿದ್ದಾರೆ ಪತ್ರೀಜಿಯವರು. ಅವರು ಇನ್ನು ಎಲ್ಲವು ಉತ್ತಮ ಜನ್ಮಗಳೇ ಹೊರತು, ಹೀನಜನ್ಮಗಳು, ನೀಚ ಜನ್ಮಗಳು ಇರುವುದಿಲ್ಲ ಎನ್ನುತ್ತಾರೆ ಪತ್ರೀಜಿಯವರು. ಜೀವನದಲ್ಲಿ ಆತ್ಮ ಪೂರ್ಣಾತ್ಮ ಆಗಬೇಕೆಂದರೆ ಕಷ್ಟಗಳಿಂದ ಎಲ್ಲಾ ರೀತಿಯ ಅನುಭವಗಳನ್ನು ಹೊಂದಬೇಕು, ಕಲಿತುಕೊಳ್ಳಬೇಕು. ಮಾನವ ಜನ್ಮಗಳಲ್ಲಿ ಇದು ಖಡ್ಡಾಯ. ಅದಕ್ಕೆ ಮಾನವ ಜನ್ಮಗಳಲ್ಲಿ ಪ್ರವೇಶಿಸಿದ ಅಂಶಾತ್ಮ, ಪೂರ್ಣಾತ್ಮನಾಗಬೇಕೆಂದರೆ ಸುಮಾರು 400; ಇಲ್ಲವೇ 500 ಜನ್ಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಪತ್ರೀಜಿ ಹೇಳುತ್ತಾರೆ. ಆದ್ದರಿಂದ ದುಃಖವು ಲಾಭವೇ ಹೊರತು ನಷ್ಟವಲ್ಲ, ದುಃಖಕ್ಕೆ ನೋವು ಪಡುವ ಅಗತ್ಯವಿಲ್ಲ.

## ಸ್ಮಶಾನದಲ್ಲಿ ಕೊನೆಯದಾಗಿ ಆತ್ಮವು ತಿಳಿದುಕೊಳ್ಳುವ ಹಸಿ ಸತ್ಯಗಳು

ಹಿಂದೆ ಒಂದು ಅಂದವಾದ ಆಶ್ರಮವಿತ್ತು. ಅದರಲ್ಲಿ ಒಬ್ಬ ಗುರುವು ಕೆಲವು ಮಂದಿ ಶಿಷ್ಯಂದಿರಿದ್ದರು. ಆ ಗುರುವು ಶ್ರೇಷ್ಠವಾದ ತಪಃ ಶಕ್ತಿ ಸಂಪನ್ನನು, ಬಹಳ ಮಹನೀಯನು. ಹಾಗೆ ಬಂದವರಲ್ಲಿ ಕೆಲವರನ್ನು ಗುರುಗಳು ನೇರವಾಗಿ ಆಶ್ರಮಕ್ಕೆ ಸೇರಿಸಿಕೊಳ್ಳುತ್ತಿದ್ದರು.

ಕೆಲವರನ್ನು ಮಾತ್ರ ನೀವು ಒಂದು ದಿನ ರಾತ್ರಿ ಸ್ಮಶಾನದಲ್ಲಿ ಕಳೆದು ಬನ್ನಿ, ಆಗಲೇ ನಿಮ್ಮನ್ನು ಆಶ್ರಮಕ್ಕೆ ಸೇರಿಸಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದನು. ಹೀಗೆ ಕಾಲವು ಕಳೆಯುತ್ತಿರುವಾಗ ಒಂದು ದಿನ ಒಬ್ಬ ವ್ಯಕ್ತಿಯು ಆಶ್ರಮಕ್ಕೆ ಬಂದು ಗುರುಗಳೇ ನೀವು ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಸೇರಿಸಿಕೊಳ್ಳಿ ಎಂದು ಕೇಳುತ್ತಾನೆ. ಆ ಗುರುವು ಮಗು, ನೀನು ನನ್ನ ಶಿಷ್ಯನಾಗಿರಬೇಕೆಂದರೆ ಒಂದು ದಿನ ಪೂರ್ತಿಯಾಗಿ ಸ್ಮಶಾನದಲ್ಲಿ ಕಳೆಯಬೇಕು. ಹಾಗೆ ನೀನು ಅಲ್ಲಿ ಏನನ್ನು ನೋಡಿದೂ, ಅದರಿಂದ ನೀನು ಏನನ್ನು ತಿಳಿದುಕೊಂಡರೂ ಮರುದಿನ ಬಂದು ನನಗೆ ವಿವರಿಸಬೇಕು. ಹಾಗೆ ಮಾಡಿದರೇನೇ ನಾನು ನಿನ್ನನ್ನು ನನ್ನ ಆಶ್ರಮದಲ್ಲಿ ಸೇರಿಸಿಕೊಳ್ಳುತ್ತೇನೆ ಎಂದು ಹೇಳುತ್ತಾನೆ. ಅದನ್ನು ಕೇಳಿದ ಆತನು ಆಶ್ಚರ್ಯಪಟ್ಟು, ಗುರುಗಳೇ ಮದ್ಯಾಹ್ನವಾದರೆ/ಹಗಲಾದರೆ ಪರವಾಗಿಲ್ಲ, ಆದರೆ ರಾತ್ರಿ ಸಮಯದಲ್ಲಿ ಸ್ಮಶಾನದಲ್ಲಿರುವುದು ಒಳ್ಳೆಯದಲ್ಲ ಎಂದು ಹೇಳುತ್ತಾನೆ.

ಆ ಗುರುವು ಏಕೆ ಒಳ್ಳೆಯದಲ್ಲ, ಅಲ್ಲಿ ರಾತ್ರಿ ಏನು ನಡೆಯುತ್ತದೆ? ಎಂದು ಕೇಳುತ್ತಾನೆ. ಆಗ ಆ ಶಿಷ್ಯನು ಗುರುಗಳೇ, ರಾತ್ರಿ ಸಮಯದಲ್ಲಿ ಸ್ಮಶಾನದಲ್ಲಿ ಭೂತ, ಪ್ರೇತಗಳಿರುತ್ತವೆ. ಅವು ನನ್ನನ್ನು ಏನಾದರೂ ಮಾಡಬಹುದು ಎಂದನು. ಆಗ ಗುರುಗಳು ಮಗು, ಮತ್ತೇ ನೀನು ಯಾವಾಗಲಾದರೂ ಭೂತ, ಪ್ರೇತಗಳನ್ನು ನೋಡಿರುವೆಯಾ? ಎಂದು ಕೇಳಿದರೆ, ಶಿಷ್ಯನು ಇಲ್ಲ, ನೋಡಿಲ್ಲ ಎಂದನು. ಆದರೆ ಕೆಲವರಿಗೆ ಭೂತಗಳು ಆವಾಹನೆಯಾಗುತ್ತವೆ, ದೆವ್ವಗಳು ಹಿಡಿದುಕೊಳ್ಳುತ್ತವೆ ಎಂದು ನಾನು ಕೇಳಿದ್ದೇನೆ. ಆ ಸಮಯದಲ್ಲಿ ಅವರು ವಿಚಿತ್ರವಾಗಿ ವರ್ತಿಸುತ್ತಾರೆ ಎಂದು ನಾನು ಕೇಳಿದ್ದೇನೆ ಎಂದನು.

ಆಗ ಗುರುಗಳು ಮಗು, ಇವೆಲ್ಲವನ್ನು ಕೂಡಾ ಕೇಳಿದವು ಮಾತ್ರವೇ ಅಲ್ಲವೇ? ಮತ್ತೆ ಅವುಗಳ ಕುರಿತು ಪೂರ್ಣವಾಗಿ ತಿಳಿದುಕೊಳ್ಳಬೇಕಲ್ಲವೇ! ಆದ್ದರಿಂದ ನೀನು ಒಂದು ಹಗಲು, ಒಂದು ರಾತ್ರಿ ಅಲ್ಲಿಯೇ ಇದ್ದು ನೋಡು ಎಂದನು. ಆ ನಂತರ ಭೂತ, ಪ್ರೇತಗಳು ಇವೆಯೋ? ಇಲ್ಲವೋ? ಎನ್ನುವುದನ್ನು ನೀನೇ ಬಂದು ಹೇಳು. ಒಂದು ವೇಳೆ ನಿನಗೆಯಾಗಲಿ ಆ ಭೂತವು ಕಾಣಿಸಿದರೆ

ಅವುಗಳನ್ನು ಕೇಳಿ ಅವುಗಳ ವಿವರಗಳನ್ನು ತಿಳಿದುಕೋ, ಅವು ಹೇಗಿರುತ್ತವೆ? ಅವು ಏನನ್ನು ತಿನ್ನುತ್ತವೆ? ಎಂಬುದನ್ನು ತಿಳಿದುಕೋ! ಒಂದುವೇಳೆ ನಿನಗೇನಾಗಲಿ ಅವು ಕಾಣಿಸದಿದ್ದರೆ ನಿನಗೆ ತಿಳಿಯುತ್ತದೆಯಲ್ಲ, ಭೂತ ಪ್ರೇತಗಳು ಇಲ್ಲವೆಂದು, ಆದ್ದರಿಂದ ನೀನು ಮಾತ್ರ ಭಯಪಡಬೇಡ, ಅಲ್ಲಿ ಏನು ನಡೆದರೂ ಮರುದಿನ ಬಂದು ನನಗೆ ಹೇಳು. ನಿನ್ನ ಪ್ರಾಣಕ್ಕೆ ಎಷ್ಟು ಮಾತ್ರವು ಯಾವ ಹಾನಿಯು ಆಗುವುದಿಲ್ಲ, ಧೈರ್ಯವಾಗಿ ಹೋಗು ಎಂದು ಹೇಳುತ್ತಾನೆ.

ಆಗ ಆ ವ್ಯಕ್ತಿ ಸರಿ, ಗುರುಗಳೇ ನೀವು ಹೇಳಿದಂತೆಯೇ ನಾನು ಒಂದು ದಿನ ಹಗಲು, ರಾತ್ರಿ ಸ್ಮಶಾನದಲ್ಲಿ ಕಳೆಯುತ್ತೇನೆ ಎನ್ನುತ್ತಾನೆ. ಆಗ ಆ ಗುರುವು ಸರಿ ಮಗು ಈ ದಿನ ರಾತ್ರಿಗೆ ಇಲ್ಲಿಯೇ ಇದ್ದು ನಾಳೆ ಬೆಳಿಗ್ಗೆಯೇ ಸ್ಮಶಾಸನಕ್ಕೆ ಹೊರಡು ಎನ್ನುತ್ತಾನೆ. ಆ ನಂತರ ಗುರುಗಳು ಕೆಲವರು ಶಿಷ್ಯಂದಿರನ್ನು ಕರೆದು ನೀವು ಆತನ ಹಿಂದೆಯೇ ಸ್ಮಶಾನಕ್ಕೆ ಹೋಗಿರಿ. ಆತನು ಏನನ್ನು ಮಾಡುತ್ತಿರುತ್ತಾನೋ ಗಮನಿಸಿರಿ. ಆದರೆ ನೀವು ಆತನ ಹಿಂದೆ ಇದ್ದಿರೆಂಬುದು ಆತನಿಗೆ ತಿಳಿಯಕೂಡದು ಎನ್ನುತ್ತಾನೆ.

ಆ ಮರುದಿನ ಉದಯದಲ್ಲಿಯೇ ಆ ವ್ಯಕ್ತಿ ಗುರುವಿನ ಬಳಿಗೆ ಹೋಗಿ ಗುರುಗಳೇ ನಾನು, ನೀವು ಹೇಳಿದಂತೆಯೇ ಸ್ಮಶಾನಕ್ಕೆ ಹೋಗುತ್ತೇನೆ ಎನ್ನುತ್ತಾನೆ. ಗುರುಗಳು ಆಗಲಿ ಸರಿ ಮಗು ಹೋಗು ಎಂದೆನ್ನುತ್ತಾನೆ. ಆ ವ್ಯಕ್ತಿ ಸ್ಮಶಾನಕ್ಕೆ ಸೇರಿಕೊಂಡನು. ಆತನ ಹಿಂದೆಯೇ ಆತನಿಗೆ ತಿಳಿಯದಂತೆ ಕೆಲವು ಮಂದಿ ಶಿಷ್ಯರು ಕೂಡಾ ಸ್ಮಶಾನಕ್ಕೆ ಸೇರಿಕೊಂಡು ದೂರದಿಂದ ಆತನನ್ನು ಗಮನಿಸುತ್ತಿದ್ದಾರೆ. ಹಾಗೆ ಆ ವ್ಯಕ್ತಿ ಒಂದು ದಿನ ಪೂರ್ತಿ ಅಲ್ಲಿಯೇ ಕಳೆದು ಮರುದಿನ ಆಶ್ರಮಕ್ಕೆ ಸೇರಿಕೊಂಡನು.

ಆಗ ಗುರುಗಳು ಆತನನ್ನು ನೋಡಿ ಒಂದು ನಗು ನಕ್ಕು ಮಗು, ನೀನು ಪೂರ್ತಿಯಾಗಿ ಒಂದು ದಿನ ಸಂಪೂರ್ಣವಾಗಿ ಸ್ಮಶಾನದಲ್ಲಿಯೇ ಕಳೆದೆಯಲ್ಲವೇ? ನೀನು ಏನನ್ನು ನೋಡಿದೆ? ಅದರಿಂದ ನೀನು ಏನನ್ನು ಕಲಿತುಕೊಂಡೆ?. ಏನನ್ನು ತಿಳಿದುಕೊಂಡೆಯೋ ನನಗೆ ಹೇಳು ಎಂದರು. ಆಗ ಆ ಶಿಷ್ಯನು ಗುರುಗಳೇ ನಾನು ಬೆಳಿಗ್ಗೆಯೇ ನಾನು ಅಲ್ಲಿಗೆ ಸೇರಿಕೊಂಡೆನು. ನಾನು ಹೋದ ಸ್ವಲ್ಪ ಹೊತ್ತಿಗೇ ಕೆಲ ಜನರು ಒಂದು ಶವವನ್ನು ಹೊತ್ತು ತರುತ್ತಿದ್ದರು. ಕೆಲವರು ಮಾತ್ರವೇ ಆ ಶವಯಾತ್ರೆಯಲ್ಲಿ ಇದ್ದಾರೆ. ಅವರಲ್ಲಿ ಕೆಲವರು ಅಳುತ್ತಿದ್ದಾರೆ. ಇನ್ನು ಕೆಲ ಜನರು ಈತನು ಬಹಳ ಅದೃಷ್ಟವಂತನು. ಈತನಿಗೆ ಒಳ್ಳೆಯ ಸಾವು ಬಂದಿತು, ಬದುಕಿರುವಾಗ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದನೆಂದು ಅಂದು

ಕೊಳ್ಳುತ್ತಿದ್ದರು. ಹೀಗೆ ಶವವನ್ನು ಚಿತೆಯ ಮೇಲಿಟ್ಟರು. ಕುಮಾರನು ಚಿತೆಗೆ ಅಂಟಿಸಿ ಸ್ವಲ್ಪ ಹೊತ್ತು ಅಲ್ಲಿಯೇ ಇದ್ದಾನೆ.

ಹಾಗೆ ಸ್ವಲ್ಪ ಹೊತ್ತಿನ ನಂತರ ಒಬ್ಬೊಬ್ಬರಾಗಿ ಎಲ್ಲರೂ ಅಲ್ಲಿಂದ ಹೊರಟು ಹೋದರು. ಕೊನೆಗೆ ಚಿತೆಗೆ ಬೆಂಕಿ ಇಟ್ಟ ಮಗನೂ ಕೂಡಾ ಹೊರಟು ಹೋದನು. ಆ ನಂತರ ಸ್ವಲ್ಪ ಹೊತ್ತಿಗೇ ಮತ್ತೆ ಎರಡು ಶವಯಾತ್ರೆ ಬಂದವು. ಅದರಲ್ಲಿ ಒಂದು ಶವವು ಧನವಂತನದು, ಇದನ್ನು ಅಂದವಾಗಿ ಸಿಂಗರಿಸಿ ತೆಗೆದುಕೊಂಡು ಬರುತ್ತಿದ್ದರು. ಅದರ ಹಿಂದೆ ಬಹಳ ಜನರು ಬರುತ್ತಿದ್ದಾರೆ.

ಇನ್ನೊಂದು ಬಡವನದು, ಇದನ್ನು ಸಾಧಾರಣವಾಗಿ ತೆಗೆದುಕೊಂಡು ಬರುತ್ತಿದ್ದಾರೆ. ಈ ಶವಯಾತ್ರೆಯಲ್ಲಿ ಬಹಳ ಕಡಿಮೆ ಜನರು ಮಾತ್ರವೇ ಇದ್ದಾರೆ. ಧನವಂತನ ಚಿತೆಯನ್ನು ಗಂಧದ ಚೆಕ್ಕೆಗಳಿಂದ ಏರಿಸಿದ್ದಾರೆ. ಇನ್ನು ಬಡವನದು ಸಾಧಾರಣ ಕಟ್ಟಿಗೆಗಳಿಂದ ಜೋಡಿಸಿದ್ದಾರೆ. ಮೊದಲು ಧನವಂತನ ಚಿತೆಯನ್ನು ಸುಟ್ಟರು, ಆ ನಂತರ ಬಡವನ ಚಿತೆಯನ್ನು ಸುಟ್ಟರು. ಆ ಎರಡು ಚಿತೆಗಳೂ ಸುಡುತ್ತಿವೆ. ಆ ನಂತರ ಎಲ್ಲರೂ ಅಲ್ಲಿಂದ ಹೊರಟು ಬಿಟ್ಟರು.

ಆದರೆ ನಾನು ಮಾತ್ರ ಅಲ್ಲಿಯೆ ಇದ್ದು ಸುಡುತ್ತಿರುವ ಎರಡು ಶವಗಳನ್ನು ಧೀರ್ಘವಾಗಿ ನೋಡುತ್ತಿದ್ದೇನೆ. ಆಗ ಆ ಗುರುವು ಮಗು ಮತ್ತೆ ನೀನು ಅವುಗಳನ್ನು ನೋಡಿ ಏನನ್ನು ತಿಳಿದುಕೊಂಡೆ ಎಂದು ಕೇಳುತ್ತಾನೆ. ಆಗ ಆ ವ್ಯಕ್ತಿ ಗುರುಗಳೇ ಎರಡು ಚಿತೆಗಳು ಸಮಾನವಾಗಿಯೇ ಇವೆ. ಆ ನಂತರ ಸ್ವಲ್ಪ ಹೊತ್ತಿಗೆ ಇಬ್ಬರೂ ಪೂರ್ತಿಯಾಗಿ ಸುಟ್ಟು ಹೋದರು. ಹಾಗೆ ಸುಟ್ಟ ನಂತರ ಉಳಿದ ಇಬ್ಬರ ಬೂದಿಯೂ ಕೂಡಾ ಒಂದೇ ರೀತಿಯಾಗಿದೆ. ಅದರಲ್ಲಿ ಬೇರೇನೂ ವ್ಯತ್ಯಾಸ ಏನು ಇಲ್ಲ ಎಂದನು.

ಆ ನಂತರ ಸ್ವಲ್ಪ ಹೊತ್ತಿಗೆ ಒಬ್ಬ ಸ್ತ್ರೀಯ ಶವವನ್ನು ತಂದರು, ಆ ಸ್ತ್ರೀಯ ಗಂಡನು ಬಹಳ ನೋವುಪಡುತ್ತಿದ್ದಾನೆ. ಅಲ್ಲಿಗೆ ಬಂದವರೆಲ್ಲರು ಕೂಡಾ ಬಹಳ ದುಃಖಿಸುತ್ತಿದ್ದಾರೆ. ಎಲ್ಲರೂ ಆ ಸ್ತ್ರೀಯ ಗಂಡನನ್ನು ಸಮಾದಾನ ಪಡಿಸುತ್ತಿದ್ದಾರೆ. ಅದರಲ್ಲಿ ಕೆಲವರು ಜ್ಞಾನವಂತರು ಕೂಡಾ ಇದ್ದಾರೆ. ಅವರು ಹೀಗೆ ಅನ್ನುತ್ತಿದ್ದಾರೆ, ಎಲ್ಲರೂ ಕೂಡಾ ಯಾವುದೋ ಒಂದು ದಿನ ಇಲ್ಲಿಗೆ ಬರಬೇಕಾದದ್ದೇ, ಜೀವನವನ್ನು ಧರ್ಮಬದ್ಧವಾಗಿ, ಪರೋಪಕಾರದಿಂದ ಜೀವಿಸಬೇಕು, ಯಾರಿಗೂ ಎಂದಿಗೂ ಕಷ್ಟವನ್ನುಂಟು ಮಾಡಬಾರದು, ಧನದ ಮೇಲೆ ವ್ಯಾಮೋಹವನ್ನು ಬೆಳೆಸಿಕೊಳ್ಳಬಾರದು. ಕೊನೆಗೆ ಎಲ್ಲರೂ ಸ್ಮಶಾನಕ್ಕೆ ಬರಬೇಕಾದದ್ದೇ ಎಂದು ನಂತರ ಎಲ್ಲರೂ ಅಲ್ಲಿಂದ ಹೊರಟರು.

ಆ ನಂತರ ಯಾರೂ ಬರಲಿಲ್ಲ, ನಾನು ರಾತ್ರಿಯೆಲ್ಲಾ ಅಲ್ಲಿಯೇ ಇದ್ದು ಮರುದಿನ ನಿಮ್ಮ ಮುಂದೆ ಬಂದಿದ್ದೇನೆ ಎಂದನು. ಆಗ ಆ ಗುರುಗಳು ಮಗು, ನಿನಗೆ ಅಲ್ಲಿ ಭೂತ, ಪ್ರೇತಗಳು, ದೆವ್ವಗಳಂತವು ಏನಾದರೂ ಕಾಣಿಸಿದವೇ? ಎಂದರು ಗುರುಗಳು. ಆಗ ವ್ಯಕ್ತಿಯು ಇಲ್ಲ, ಕಾಣಿಸಲಿಲ್ಲ, ನನಗಾದರೆ ಅಲ್ಲಿ ಯಾವ ಭೂತ, ಪ್ರೇತಗಳು ಕಾಣಿಸಲಿಲ್ಲ. ಆ ರಾತ್ರಿ ಪೂರ್ಣವಾಗಿ ನನ್ನಲ್ಲಿಯೇ ನಾನು ಭಯಪಟ್ಟೆನು, ಅಲ್ಲಿಯ ಎಲೆಗಳ ಶಬ್ಧಕ್ಕೆ ಭಯಪಟ್ಟೆನು, ಪ್ರಾಣಿಗಳು ಮಾಡುವ ಶಬ್ಧಗಳಿಂದ ಭಯಪಟ್ಟೆನು, ಆದರೆ ಬೇರೆ ಯಾವ ಭೂತ ಪ್ರೇತಗಳು ನನಗೆ ಕಾಣಿಸಲಿಲ್ಲ ಎಂದನು.

ಆ ಗುರುಗಳು ಸರಿ ಈ ದಿನ ಆಶ್ರಮದಲ್ಲಿಯೇ ವಿಶ್ರಾಂತಿಯನ್ನು ತೆ–ಗೆದುಕೊಂಡು ಮತ್ತೆ ನಾಳೆ ಬೆಳಿಗ್ಗೆಯೇ ಸ್ಮಶಾನಕ್ಕೆ ಹೋಗಿ ಒಂದು ಹಗಲು, ಒಂದು ರಾತ್ರಿ ಅಲ್ಲಿಯೇ ಕಳೆದು ಬಾ ಎಂದನು. ಆಗ ಆ ವ್ಯಕ್ತಿಯು ಗುರುಗಳೇ ನೀವು ಏನು ಹೇಳುತ್ತಿದ್ದೀರಿ? ನೀವು ಹೇಳಿದಿರೆಂದೇ ಅಲ್ಲವೇ ಒಂದು ದಿನ ಪೂರ್ಣವಾಗಿ ನಾನು ಸ್ಮಶಾನದಲ್ಲಿಯೇ ಕಳೆದೆನು. ನನಗೆ ಎಷ್ಟು ಕಷ್ಟವಾಗಿದೆಯೋ ನನಗೇ ಗೊತ್ತು! ನಾನು ಮತ್ತೇ ಅಲ್ಲಿಗೆ ಹೋಗೆನು ಎಂದು ಹೇಳುತ್ತಾನೆ.

ಆ ಗುರುಗಳು ಮಗು, ನೀನು ಯಾವುದನ್ನಾದರೆ ಅತಿ ಮುಖ್ಯವಾದ ವಿಷಯವನ್ನು ತಿಳಿದುಕೊಳ್ಳಬೇಕೋ ಅದನ್ನು ನೀನು ಇನ್ನು ತಿಳಿದುಕೊಂಡಿಲ್ಲ. ಮತ್ತೇ ಒಂದು ದಿನ ಅಲ್ಲಿಯೇ ಇರು. ಈ ಬಾರಿ ಅದು ನಿನಗೆ ಖಂಡಿತವಾಗಿ ತಿಳಿಯುತ್ತದೆ ಎಂದರು. ಆ ವ್ಯಕ್ತಿಯು ಸರಿ ಎಂದು ಹೇಳಿ ಆ ದಿನ ಆಶ್ರಮದಲ್ಲಿಯೇ ವಿಶ್ರಾಂತಿ ತೆಗೆದುಕೊಂಡು ಮರುದಿನ ಬೆಳಿಗ್ಗೆಯೇ ಗುರುಗಳ ಪಾದಕ್ಕೆ ನಮಸ್ಕರಿಸಿ ಸ್ಮಶಾನಕ್ಕೆ ಹೋದನು. ಆ ವ್ಯಕ್ತಿಯು ಪೂರ್ಣವಾಗಿ ಸ್ಮಶಾನದಲ್ಲಿಯೇ ಕಳೆದು ಮರುದಿನ ಗುರುಗಳ ಮುಂದೆ ಬಂದು ನಿಂತಿದ್ದಾನೆ. ಹಾಗೆ ನಿಂತಿರುವ ಆ ವ್ಯಕ್ತಿ ಕಣ್ಣುಗಳಲ್ಲಿ ಏನನ್ನೋ ತಿಳಿದುಕೊಂಡೆನು ಎನ್ನುವ ಆನಂದವು ಗುರುಗಳಿಗೆ ಕಾಣಿಸಿತು. ಗುರುಗಳು ಮಗು, ನೀನು ಯಾವುದಕ್ಕಾದರೆ ಅಲ್ಲಿಗೆ ಹೋದೆಯೋ ಅದನ್ನು ಪೂರ್ಣವಾಗಿ ತಿಳಿದುಕೊಂಡೆಯಾ? ಎಂದು ಕೇಳುತ್ತಾನೆ. ಆಗ ಆ ವ್ಯಕ್ತಿಯು ಆ..... ತಿಳಿದುಕೊಂಡೆನು ಎನ್ನುತ್ತಾನೆ. ಮತ್ತೇ ನೀನು ಏನನ್ನು ತಿಳಿದುಕೊಂಡೆಯೋ ಹೇಳು ಎನ್ನುತ್ತಾರೆ.

ಆಗ ಆ ವ್ಯಕ್ತಿ ನಿರ್ಮಲವಾದ ಮನಸ್ಸಿನಿಂದ ಗುರುಗಳೇ ಸಾಯಂಕಾಲದ ಸಮಯದಲ್ಲಿ ನನ್ನನ್ನು ಸೆದಿಗೆ (ಚಟ್ಟದ) ಮೇಲೆ ಮಲಗಿಸಿ ಸ್ಮಶಾನಕ್ಕೆ ತರುತ್ತಿದ್ದಾರೆ. ನನ್ನ ಹಿಂದೆಯೇ ಒಂದು 15 ಜನರು ನಡೆಯುತ್ತಿದ್ದಾರೆ. ನನ್ನನ್ನು ನಾಲ್ಕು ಜನರು

ಸಮಾನವಾಗಿ ಭುಜಗಳ ಮೇಲೆ ಹೊತ್ತಿದ್ದಾರೆ, ನನ್ನ ತಂದೆ ನನ್ನ ಮುಂದೆ ನಡೆಯುತ್ತಿದ್ದಾನೆ. ಕೆಲವರು ನನ್ನ ಮೇಲೆ ಹೂಗಳನ್ನು ಚೆಲ್ಲುತ್ತಿದ್ದಾರೆ, ಕೆಲವರು ಬಂಧುಗಳು ನನ್ನ ಹಿಂದೆಯೇ ನಡೆಯುತ್ತಿದ್ದಾರೆ, ಎಲ್ಲರೂ ಬಹಳ ದುಃಖಿಸುತ್ತಿದ್ದಾರೆ. ಎಲ್ಲರಿಗಿಂತ ನನ್ನ ತಂದೆ, ನನ್ನ ತಮ್ಮನು ಹೆಚ್ಚಾಗಿ ದುಃಖಿಸುತ್ತಿದ್ದಾರೆ. ಅಷ್ಟು ಜನರಲ್ಲಿ ಕೆಲವರು ಎಷ್ಟೋ ದುಃಖಿಸುತ್ತಿರುವಂತೆ ನಟಿಸುತ್ತಿದ್ದಾರೆ. ಕೆಲವರು ನಮ್ಮ ತಂದೆಯನ್ನು ಸಮಾಧಾನಪಡಿಸುತ್ತಿದ್ದಾರೆ. ದೂರದಲ್ಲಿ ನಿಂತಿರುವ ನನ್ನ ತಮ್ಮನು ಎಷ್ಟೋ ದುಃಖಿಸುತ್ತಿದ್ದಾನೆ, ಕೆಲವರು ನನ್ನ ತಮ್ಮನ ಬಳಿಗೆ ಹೋಗಿ ಮಗು, ಇನ್ನು ನೀನೇ ಈ ಆಸ್ತಿ ಎಲ್ಲದಕ್ಕೂ ಏಕೈಕ ವಾರಸುದಾರನು ಎಂದು ಹೇಳುತ್ತಿದ್ದಾರೆ. ಮತ್ತೇ ಕೆಲವರು ಅಯ್ಯೋ, ಹೀಗೆ ಆಗಬಾರದಿತ್ತು, ಏನನ್ನು ಅನುಭವಿಸಿಲ್ಲ ಎಂದು ಹೇಳುತ್ತಿದ್ದಾರೆ.

ಆ ನಂತರ ನನಗೆ ಎಲ್ಲಾ ರೀತಿಯಲ್ಲಿ ಮಾಡಬೇಕಾದ ಕ್ರಿಯೆಗಳೆನ್ನೆಲ್ಲಾ ಪೂರ್ತಿ ಮಾಡಿದರು. ಇವೆಲ್ಲವೂ ಕೂಡಾ ನಾನು ಚಟ್ಟದ (ಸೆದಿಗೆ) ಮೇಲೆ ಮಲಗಿ ನೋಡುತ್ತಲೇ ಇದ್ದೇನೆ. ನಾನು ಚೆಟ್ಟದ ಮೇಲಿಂದ ಏಳುವುದಕ್ಕೆ ಬಹಳವಾಗಿ ಪ್ರಯತ್ನಿಸಿದೆನು, ಆದರೆ ಏಳಲಾರದೆ ಹೋದೆನು. ನಾನು ಶ್ವಾಸವನ್ನು ತೆಗೆದುಕೊಳ್ಳುವುದಕ್ಕೆ ಬಹಳ ಪ್ರಯತ್ನಿಸುತ್ತಿದ್ದೇನೆ, ಆದರೆ ತೆಗೆದುಕೊಳ್ಳಲಾರದೆ ಹೋಗುತ್ತಿದ್ದೇನೆ. ಏಕೆಂದರೆ ನನ್ನಲ್ಲಿ ಉಸಿರಾಟವಿಲ್ಲ, ನಾನು ನನ್ನ ತಂದೆಯನ್ನು ಹಿಡಿದುಕೊಂಡು ಗಟ್ಟಿಯಾಗಿ ಹೃದಯಕ್ಕೆ ಅಪ್ಪಿಕೊಳ್ಳಬೇಕೆಂದುಕೊಳ್ಳುತ್ತಿದ್ದೇನೆ, ಆದರೆ ಏಳಲಾರದವನಾಗಿದ್ದೇನೆ. ನನ್ನ ತಮ್ಮನೊಂದಿಗೆ ಮಾತನಾಡಬೇಕೆಂದು ಕೊಳ್ಳುತ್ತಿದ್ದೇನೆ, ತಂದೆ–ತಾಯಿಗಳನ್ನು ಚೆನ್ನಾಗಿ ನೋಡಿಕೊ ಎಂದು ಹೇಳಬೇಕೆಂದುಕೊಂಡೆನು, ಆದರೆ ನಾನು ಏನನ್ನು ಮಾಡಲಾರದವನಾಗಿದ್ದೇನೆ.

ಆ ನಂತರ ನನ್ನನ್ನು ಚಿತೆಯ ಮೇಲಿಟ್ಟು ನನ್ನ ಮೇಲೆ ಕಟ್ಟಿಗೆಗಳನ್ನಿಟ್ಟರು, ನನ್ನ ಮೊಗವನ್ನು ಕೂಡಾ ಮುಚ್ಚಿ ಬಿಟ್ಟರು, ಇನ್ನು ನನಗೆ ಹೊರಗೆ ಏನು ಕಾಣಿಸುತ್ತಿಲ್ಲ. ನನಗೆ ಒಳಗೆ ಬಹಳ ದುಃಖವಾಗುತ್ತಿದೆ, ಸ್ವಲ್ಪ ಹೊತ್ತಿಗೆ ನನಗೆ ಬಿಸಿ ತಗಲುವುದಕ್ಕೆ ಆರಂಭವಾಯಿತು, ಆ ನಂತರ ನನಗೆ ಅರ್ಥವಾಯಿತು, ನನ್ನನ್ನು ಸುಡುತ್ತಿದ್ದಾರೆಂದು, ಕೈ–ಕಾಲುಗಳು ಸುಟ್ಟು ಹೋಗುತ್ತಿವೆ, ಮೂಳೆಗಳು ಸುಟ್ಟು ಹೋಗುತ್ತಿವೆ, ನಿಧಾನವಾಗಿ ಬೆಂಕಿಯು ಹೆಚ್ಚಾಗಿ ಉರಿಯುತ್ತಿದೆ. ಆ ಉರಿಯಿಂದ ನಾನು ತಪ್ಪಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನಿಸುತ್ತಿದ್ದೇನೆ, ನನ್ನ ಶಕ್ತಿಯನ್ನೆಲ್ಲಾ ಕೂಡಿಸಿಕೊಂಡು ಪ್ರಯತ್ನಿಸಿದರೂ ನೋಡುತ್ತಾ ಇರುವುದೇ ಹೊರತು ನನ್ನಿಂದ ಏನೂ ಕೈಲಾಗುತ್ತಿಲ್ಲ. ಇನ್ನು ಕೊನೆಗೆ ನಾನು ಅಗ್ನಿಯಲ್ಲಿ

ಪೂರ್ತಿ ಸುಟ್ಟು ಹೋದೆನು.

ನಾನು ಆ ರಾತ್ರಿ ಪೂರ್ತಿ ಸುಡುತ್ತಿರುವ ನನ್ನನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ, ಇನ್ನು ಕೊನೆಗೆ ನನಗೆ ಅಂತಿಮ ರೂಪವಾಗಿ ಕೇವಲ ಬೂದಿ ಮಾತ್ರವೇ ಉಳಿಯಿತು. ಎಷ್ಟೋ ಅಂದವಾದ ನನ್ನ ಶರೀರವು ಈ ದಿನ ಒಂಟಿಯಾಗಿ ಒಂದು ಸ್ಮಶಾನದಲ್ಲಿ ಬೂದಿಯಾಗಿ ಬದಲಾಗಿ ಬಿಟ್ಟಿತು. ಹಾಗೆ ಆ ಬೂದಿಯನ್ನು ನೋಡುತ್ತಲೇ ಆ ರಾತ್ರಿಯು ಕಳೆದು ಹೋಯಿತು. ನನಗೆ ಆ ರಾತ್ರಿ ಯಾವ ಭಯವಾಗಲಿಲ್ಲ. ಇನ್ನು ಬೆಳಿಗ್ಗೆಯೇ ನಿಮ್ಮ ಮುಂದೆ ಬಂದೆನು ಎಂದು ಹೇಳಿದನು.

ಆ ಗುರುವು ಒಂದು ನಗುವನ್ನು ನಕ್ಕು, ಮಗು, ಈಗ ನನ್ನ ಶಿಷ್ಯನಾಗಿ ಇರುವ ಅರ್ಹತೆಯನ್ನು ಸಾಧಿಸಿರುವೆ. ನೀನು ಯಾವುದಾದರೆ ತಿಳಿದುಕೊಳ್ಳಬೇಕೆಂದು ನಾನು ಕೋರಿಕೊಂಡೆನೋ ಅದನ್ನು ನೀನು ಪೂರ್ತಿಯಾಗಿ ತಿಳಿದುಕೊಂಡಿರುವೆ. ಮಗು ಒಂದನ್ನು ಮಾತ್ರ ಜೀವನದಲ್ಲಿ ಚೆನ್ನಾಗಿ ನೆನಪಿಟ್ಟುಕೋ.

"ಜೀವನದಲ್ಲಿ ಯಾವುದೂ ಶಾಶ್ವತವಲ್ಲ, ಕೊನೆಗೆ ಏನು ಉಳಿಯದು ಎಂದು ನೀನು ತಿಳಿದುಕೊಂಡೆ. ಈ ಲೋಕದಲ್ಲಿ ಸ್ಮಶಾನಕ್ಕೆ ಹೋದ ಪ್ರತಿ ವ್ಯಕ್ತಿ ಇಲ್ಲಿಗೆ ಬರಬೇಕಾದದ್ದೇ, ಏನೂ ಶಾಶ್ವತವಲ್ಲ ಎಂದು ತಿಳಿದುಕೊಳ್ಳುತ್ತಾರೆ".

ಆದರೆ ಸ್ಮಶಾನದಿಂದ ಹೊರ ಬಂದೊಡನೆ ಎಲ್ಲವನ್ನು ಮರೆತುಬಿಡುತ್ತಾರೆ. ಮತ್ತೇ ಇದಕ್ಕೂ ಮೊದಲು ಹೇಗೆ ಜೀವಿಸಿದರೋ ಹಾಗೆಯೇ ಜೀವಿಸುತ್ತಾರೆ. ಅವರಲ್ಲಿ ಯಾವ ರೀತಿಯ ಬದಲಾವಣೆಯೂ ಇರದು, ಕೆಟ್ಟ ಕೆಲಸಗಳನ್ನೇ ಮಾಡುತ್ತಾರೆ, ಅಧರ್ಮದಿಂದಲೇ ಇರುತ್ತಾರೆ, ಹಣಕ್ಕಾಗಿ ಎಷ್ಟೋ ತಪ್ಪಾದ ಕೆಲಸಗಳನ್ನು ಮಾಡುತ್ತಾರೆ. ಆದರೆ ಸ್ಮಶಾನದೊಳಗೆ ಹೋದೊಡನೆ ಎಲ್ಲಾ ಮರೆತುಹೋಗಿ ಎಷ್ಟೋ ಧರ್ಮಾತ್ಮರಾಗಿ ನೀತಿ ವಾಕ್ಯಗಳನ್ನು ಮಾತನಾಡುತ್ತಾರೆ. ಮಗು, ನೀನು ಮೊದಲನೇ ಬಾರಿ ಸ್ಮಶಾನಕ್ಕೆ ಹೋದಾಗ ನೀನು ಕೂಡಾ ಹಾಗೆಯೇ ಇದ್ದೆ, ಆದರೆ ನೀನು ಎರಡನೇ ಬಾರಿ ಹೋದಾಗ ಮಾತ್ರ ಮನಸ್ಸಿನಿಂದ ನಿನ್ನ ಜೀವನವನ್ನು ನೀನು ನೋಡಿಕೊಂಡೆ, ನಾವು ಅನುಭವಿಸುವ ಎಲ್ಲಾ ಸುಖಗಳು, ದುಃಖಗಳು ಯಾವುವೂ ಕೂಡಾ ಶಾಶ್ವತವಲ್ಲ, ಎಂದು ನೀನು ತಿಳಿದುಕೊಂಡೆ, ಪ್ರತಿ ಮಾನವನು ಇದನ್ನು ತಿಳಿದುಕೊಳ್ಳಬೇಕು. ಯಾರ ಜೀವನವಾಗಲಿ ಒಳ್ಳೆಯದು–ಕೆಟ್ಟದ್ದು ಎಂಬ ಮಾತಿನಿಂದಲೇ ಮುಗಿಯುತ್ತದೆ. ಅದಕ್ಕೆ ನೀನು ಯಾವುದರ ಮೇಲೂ ಆಸೆಗಳನ್ನು ಬೆಳೆಸಿಕೊಳ್ಳದೆ ಧರ್ಮಬದ್ಧವಾಗಿ ಜೀವನವನ್ನು ನಡೆಸು ಎಂದು ಹೇಳಿದನು ಆ "ಗುರುವು".



# ಅರಿಹಂತ್

"ಅರಿಹಂತ್" ಅಂದರೆ ಶತೃವನ್ನು ಹತ ಮಾಡಿದವನು ಅಂದರೆ ಅಂತ್ಯ ಮಾಡಿದವನು. ಮಾನವನಿಗೆ ಮೂವರು ಶತೃಗಳಿದ್ದಾರೆ. ಯಾರು ಅಂದರೆ ತಮೋಗುಣ, ರಜೋಗುಣ, ಸಾತ್ವಿಕ ಗುಣವು.

ಎಷ್ಟು ಕೃಷಿ ಮಾಡಿ ಆ ಲಕ್ಷಣಗಳನ್ನು ಕಡಿಮೆ ಮಾಡಿಕೊಂಡರೆ ನಿಮಗೆ ಅಷ್ಟು ಜನ್ಮಗಳು ಕಡಿಮೆಯಾಗುತ್ತವೆ. ಈಗ ನಾನು ನಿಮಗೆಲ್ಲರಿಗೂ ಏಕೆ ಹೇಳುತ್ತಿದ್ದೇನೆಂದರೆ ಪ್ರಾರಂಭ ಜನ್ಮಗಳಲ್ಲಿ ಇರುವವರು ಅಂದರೆ 100, 150, 200 ಜನ್ಮಗಳಲ್ಲಿರುವವರು ಹಾಗೆ ವರ್ತಿಸಿದರೆ ವರ್ತಿಸಬಹುದು. ಆದರೆ ನೀವೆಲ್ಲರೂ ಕೂಡಾ 350 ಜನ್ಮಗಳನ್ನು ದಾಟಿದವರೇ. ನೀವು ಈ ಲಕ್ಷಣಗಳನ್ನೆಲ್ಲಾ ಸಮೂಲವಾಗಿ ತೊಲಗಿಸಿಕೊಳ್ಳಬೇಕು.

ಯಾರಾದರೆ ಈ ವಿಧವಾಗಿ ಮೂರು ಶತೃಗಳನ್ನು ಸಂಪೂರ್ಣವಾಗಿ ಜಯಿಸುತ್ತಾರೋ ಅವರೇ "ಅರಿಹಂತ್" ಎಂದು ಪತ್ರೀಜಿಯವರು ಹೇಳಿದ್ದಾರೆ.

– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್‌ರವರು

ರೂ. 50/-


ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ
http: //www.youtube.com/pmckannada
• www.meditationeverywhere.org
• www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್
ವೈಟ್‌ಫೀಲ್ಡ್ ಬೆಂಗಳೂರು-560 066
ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689


ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books